
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಅಕ್ಟೋಬರ್ 21, 2009 ರೂ. 12/-

ಸಾವಯವ ಕೃಷಿಯ ಕೇಸರೀಕರಣ









ಗಂಗವ್ವಗೆ ಕರುಣೆಯಿಲ್ಲ

ಸರ್ಕಾರಕ್ಕೆ ಕಣ್ಣಿಲ್ಲ




...ಾಯಿಬಡುಕ ...ಹಾಂಡ

ಮೈಸೂರು ಜುಗಾರಿ ದೊರೆಗಳು



ಭಟ್ಟನಿಗೆ ಮತ್ತೆ ಮದುವೆ



ಪ್ರವಾಹ ಎಂಬ ದುರಂತ, ಪರಿಹಾರ ಎಂಬ ಆಪತ್ತು?

ಇಂದು ಕರ್ನಾಟಕದ ದುರದೃಷ್ಟ ಹೇಗಿದೆಯೆಂದರೆ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಪ್ರವಾಹವೊಂದೆಡೆಯಾದರೆ, ಕರ್ನಾಟಕದ ಇತಿಹಾಸದಲ್ಲೇ ಕಂಡರಿಯದ ದುಷ್ಟ, ಅದಕ್ಷ ಮತ್ತು ಅನನುಭವಿ ಸರ್ಕಾರ ವಿಧಾನ ಸೌಧದಲ್ಲಿ ಕೂತಿದೆ. ಹದ್ದಿನ ತರ ಮಸಣದ ಮನೆಯಲ್ಲೂ ಮಿಕವನ್ನು ಹುಡುಕುತ್ತಿದೆ. ಹೀಗಾಗಿ ಪರಿಹಾರವೆಂಬುದು ಜನತೆಯ ಸಾಮಾಜಿಕ ಬದುಕಿಗೆ ಕಂಟಕವಾಗದಂತೆ ಬದುಕನ್ನು ಪೋಷಿಸುವಂತೆ ಮಾಡುವ ಹೊಣೆ ನಮ್ಮೆಲ್ಲರ ಮೇಲೂ ಇದೆ.

ಅದು ಭೀಕರ ಸುನಾಮಿ ಅಪ್ಪಳಿಸಿ ಇಡೀ ತಮಿಳುನಾಡಿನ ಜನ - ಅದರಲ್ಲೂ ಸಮುದ್ರವನ್ನೇ ನಂಬಿ ಬದುಕುವ ಮೀನುಗಾರರು, ದಲಿತರು ಮತ್ತು ಪಳಂಕುಡಿ ಮಕ್ಕಳ್ ಎಂಬ ಶೆಡ್ಯೂಲ್ಡ್ ಟ್ರೈಬ್‌ಗೆ ಸೇರಿದ ಜನ - ತೀವ್ರವಾದ ಸಂಕಷ್ಟಗಳನ್ನು ಅನುಭವಿಸುತ್ತಿದ್ದ ದಿನಗಳು. ಪ್ರಾರಂಭದಲ್ಲಿ ತಡವಾದರೂ ನಂತರದಲ್ಲಿ ಎಲ್ಲೆಡೆಯಿಂದ ಪರಿಹಾರವೇ ಪ್ರವಾಹದೋಪಾದಿಯಲ್ಲಿ ತಮಿಳುನಾಡಿಗೆ ಹರಿದುಬರಲು ಪ್ರಾರಂಭಿಸಿತು. ಸುನಾಮಿ ಸಂಭವಿಸಿದ್ದು 2004ರ ಡಿಸೆಂಬರ್ 25ರಂದು. ಪರಿಹಾರ ಕೆಲಸ ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ಅನ್ನೀ ನಮಲ ಎನ್ನುವವರು 2005ರ ಜನವರಿ 1 ರಂದು ತಮ್ಮ ಸತ್ಯ ಶೋಧನಾ ವರದಿಯಲ್ಲಿ ನೀಡಿರುವ ಚಿತ್ರಣವಿದು:


"ನಮ್ಮ ಕಣ್ಣೆದುರಿಗೇ ಹಲವಾರು ಲಾರಿ ಲೋಡುಗಳಷ್ಟು ಆಹಾರ ಮತ್ತು ಬಟ್ಟೆಬರೆಗಳು ಹಳ್ಳಿಗೆ ಬರಲಾರಂಭಿಸಿತು. ಅವೆಲ್ಲವನ್ನು ಮೀನುಗಾರ ಸಮುದಾಯದ ನಡುವೆ ಹಂಚಲಾಯಿತು. ಲಾರಿಗಳ ಹಿಂದೆ ಓಡಿಹೋದ ದಲಿತರು ಬರಿಗೈಯಲ್ಲಿ ಹಿಂದಿರುಗಿದರು. ಬೆಳಗಿನಿಂದ ಪರಿಹಾರ ಸಾಮಗ್ರಿಗಳನ್ನು ಹೊತ್ತ ಹಲವಾರು ಲಾರಿಗಳು ಬಂದವಾದರೂ ಆ ಸಾಮಗ್ರಿಗಳಲ್ಲಿ ಯಾವುದನ್ನೂ ದಲಿತರಿಗೆ ಕೊಡಲು ಮೀನುಗಾರ ಸಮುದಾಯದವರು ಬಿಡಲಿಲ್ಲ ಎಂದು ದಲಿತರು ದೂರಿದರು. ಹಲವರು ಇಡ್ಲಿ-ಪೊಂಗಲ್‌ಗಳನ್ನು ತಂದಿದ್ದರಾದರೂ ಬೆಳಿಗ್ಗೆ 11 ಗಂಟೆಯಾದರೂ ದಲಿತ ಕಾಲೋನಿಗಳಲ್ಲಿ ಮಕ್ಕಳಾದಿಯಾಗಿ ಎಲ್ಲರೂ ಹಸಿದುಕೊಂಡೆ ಇದ್ದದ್ದನ್ನು ನಾವು ಗಮನಿಸಿದೆವು. ದಲಿತರನ್ನು ಪರಿಹಾರ ವಿತರಕರು ಕೇಳುತ್ತಿದ್ದ ಪ್ರಶ್ನೆಯೊಂದೇ: 'ಅಬ್ಬಬ್ಬಾ ಎಂದರೆ ನಿಮ್ಮಲ್ಲಿ ಎಷ್ಟು ಸಾವುಗಳಾಗಿರಬಹುದು?' ಇದೆಲ್ಲಾ ನೋಡಿದ ಮೇಲೆ ನಮ್ಮನ್ನು ಬಾಧಿಸುತ್ತಿದ್ದ ಪ್ರಶ್ನೆ: 'ಮೀನುಗಾರ ಸಮುದಾಯದಲ್ಲಿ ಆದ ಸಾವು ದಲಿತರ ಸಾವಿಗಿಂತ ಹೆಚ್ಚಿನ ಮೌಲ್ಯ ಉಳ್ಳದ್ದು ಎಂದು ಭಾವಿಸಲಾಗುತ್ತದೆಯೇ? ಸಾವುಗಳಲ್ಲೂ ನಾವು ಶ್ರೇಣೀಕರಣ ಮಾಡುವುದು ಸರಿಯೇ?'

ಇಂದು ಭೀಕರ ಪ್ರವಾಹಕ್ಕೆ ಸಿಕ್ಕಿ ಜನ ಪರಿಹಾರಕ್ಕೆ ಹಾತೊರೆಯುತ್ತಿರುವಾಗ ಈ ವರದಿಯ ಚಿತ್ರಣವೇ ಮತ್ತೆಮತ್ತೆ ಕಣ್ಣಮುಂದೆ ಬರುತ್ತಿದೆ. ಸುನಾಮಿ ದುರಂತ ಸಂಭವಿಸಿ ಈಗ ಐದು ವರ್ಷಗಳಾಗಿವೆ. ಸುನಾಮಿ ಮಾದರಿ ಪರಿಹಾರ ಈ ಸಮಾಜದ ಅತ್ಯಂತ ಕಂಗೆಟ್ಟ ಸಮುದಾಯಗಳಿಗೆ ನಿಜಕ್ಕೂ ತಲುಪಿದೆಯೇ ಇಲ್ಲವೇ ಎಂಬ ಬಗ್ಗೆ ಈಗ ಹಲವಾರು ವರದಿಗಳು ಬಂದಿವೆ. ಅದೇ ರೀತಿ 2001ರಲ್ಲಿ ಗುಜರಾತ್ ಭೂಕಂಪ ನಡೆದ ನಂತರ ಸೇವಾಭಾರತಿ ಇನ್ನಿತ್ಯಾದಿ ಸಂಘ ಪರಿವಾರದ ಅಂಗಸಂಸ್ಥೆಗಳ ಮೂಲಕ ನಡೆದ ಪರಿಹಾರ ಕಾರ್ಯಕ್ರಮಗಳು ಹೇಗೆ ದಲಿತ ಹಾಗೂ ಅಲ್ಪ ಸಂಖ್ಯಾತ ವಿರೋಧಿಯಾಗಿದ್ದವು ಎಂಬ ಬಗ್ಗೆಯೂ ಹಲವು ವರದಿಗಳು ಬಂದಿವೆ.

ಬಿಜೆಪಿ ಸರ್ಕಾರ ತಮಿಳುನಾಡಿನ ಸುನಾಮಿ ಮಾದರಿಯ ಪರಿಹಾರ ಪದ್ಧತಿಯನ್ನೂ, ಆರೆಸ್ಸೆಸ್ಸಿನ ಸಹಾಯವನ್ನೂ ತೆಗೆದುಕೊಳ್ಳುತ್ತೇವೆ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಸುನಾಮಿ ಮತ್ತು ಗುಜರಾತ್ ಭೂಕಂಪದ ಸಂದರ್ಭದಲ್ಲಿ ಆದಂತ ಪರಿಹಾರ ಹೇಗೆ ಮತ್ತೊಂದು ಸಾಮಾಜಿಕ ಸುನಾಮಿಯನ್ನು ಸೃಷ್ಟಿಸಿತು ಎಂದು ಅರ್ಥ ಮಾಡಿಕೊಳ್ಳುವುದು ತುಂಬಾ ಅಗತ್ಯ.

ಸಾಮಾನ್ಯವಾಗಿ ನೈಸರ್ಗಿಕ ವಿಪತ್ತುಗಳ ಸಂದರ್ಭದಲ್ಲಿ ಸಂಭವಿಸುವ ಸಾವು ನೋವುಗಳಿಗಿಂತ ಆ ನಂತರದಲ್ಲಿ ನಡೆಯುವ ಸಾವುನೋವುಗಳು ಇನ್ನೂ ಹೆಚ್ಚಿರುತ್ತವೆ ಎಂದು ವರದಿಗಳು ಹೇಳುತ್ತವೆ. ಇದಕ್ಕೆ ಕಾರಣ ವಿಕೋಪದ ನಂತರದ ಪರಿಹಾರ ಮತ್ತು ಪುನರ್‌ವಸತಿಗಳ ವಿತರಣೆಯಲ್ಲಿ ನಡೆಯುವ ತಾರತಮ್ಯ. ನೆರೆ, ಪ್ರವಾಹ, ಭೂಕಂಪ, ಸುನಾಮಿಯಂತ ದುರಂತಗಳು ಜನರ ಎಲ್ಲಾ ಭೌತಿಕ ಜೀವನಾಧಾರಗಳನ್ನೂ ನಾಶ ಮಾಡಿರುತ್ತವೆ. ಮನೆ, ಬೆಳೆ, ಪಾತ್ರೆ, ಪಗಡ ಎಲ್ಲವನ್ನೂ ಕಳೆದುಕೊಳ್ಳುವ ಜನತೆ ಮತ್ತೆ ಮೊದಲಿನ ರೀತಿಯ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಆದರೂ ಸಮಾಜದಲ್ಲಿ ಪ್ರಬಲ ಸಮುದಾಯಕ್ಕೆ ಸೇರಿದವರು ಭೌತಿಕ ಬಂಡವಾಳವನ್ನೆಲ್ಲಾ ಕಳೆದುಕೊಂಡರೂ ವರ್ಗ, ಜಾತಿ ಇನ್ನಿತ್ಯಾದಿಗಳ ಕಾರಣದಿಂದ ಅವರ ಸಾಮಾಜಿಕ ಪ್ರಭಾವದ ಬಂಡವಾಳ ಇದ್ದೇ ಇರುತ್ತದೆ. ಹೀಗಾಗಿ ಬಹುಬೇಗ ಅವರು ಮೊದಲಿನ ತರಹದ್ದಲ್ಲವಾದರೂ ಮತ್ತೆ ಸಾಮಾನ್ಯ ಜೀವನಕ್ಕೆ ಮರಳುತ್ತಾರೆ. ಆದರೆ ಆ ಬಗೆಯ ಯಾವುದೇ ಇತರ ಸಾಂಸ್ಕೃತಿಕ ಅಥವಾ ಸಾಮಾಜಿಕ ಬಂಡವಾಳವಿಲ್ಲದ ಸಮಾಜದ ಕೆಳಸ್ತರದ ಜನಗಳ ಬದುಕನ್ನು ಇಂಥಾ ನೈಸರ್ಗಿಕ ದುರಂತಗಳು ಸಂಪೂರ್ಣವಾಗಿ ಸರ್ವನಾಶ ಮಾಡಿಬಿಡುತ್ತದೆ. ಹೀಗಾ... ದುರಂತದ ಸಮಯದಲ್ಲಿ ಪರಿಹಾರ ವಿತರಣೆಯ ನೀತಿಗ... ನಮ್ಮ ಸಮಾಜದ ಈ ಜಾತಿ ಮತ್ತು ವರ್ಗ... ಶ್ರೇಣೀಕರಣದ ಪರಿಣಾಮವನ್ನು ಗಮನದಲ್ಲಿಟ್ಟುಕೊಳ್ಳದಿ... ಪರಿಹಾರವೇ ಮತ್ತೊಂದು ಸುನಾಮಿ ಪ್ರವಾಹವಾ... ಬಿಡುವ ಸಾಧ್ಯತೆ ಇದೆ.





ಆದರೆ ಪ್ರಖ್ಯಾತ ಸಮಾಜ ಶಾಸ್ತ್ರಜ್ಞರಾದ ರಾಬರ್... ಓಪನ್‌ಹೈಮರ್ ಮತ್ತು ಸುಮಂತ ಬ್ಯಾನರ್ಜಿಯವ... ಪ್ರಕಾರ "ಪರಿಹಾರ ಮತ್ತು ಪುನರ್‌ವಸತಿಯ ವಿತರಣೆಗ... ಆಯಾ ಸಮಾಜದ ಆರ್ಥಿಕ ಸಂಘಟನೆ ಮತ್ತು ರಾಜಕೀ... ವ್ಯವಸ್ಥೆಗಳನ್ನೇ ಆಧರಿಸಿರುತ್ತದೆ." ನಮ್ಮ ಸಮಾಜ... ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಮತ್ತು ಬಡಜನ ವಿರೋ... ಆರ್ಥಿಕ ವ್ಯವಸ್ಥೆ ಪ್ರವಾಹ, ಭೂಕಂಪದಂಥ ಪ್ರಕೃ... ವಿಕೋಪದ ಸಂದರ್ಭಗಳಲ್ಲೂ ಸಹ ಸಮಾಜದ ಪ್ರಬಲ... ಪರವಾಗಿ ವರ್ತಿಸುತ್ತಾ ಈಗಾಗಲೇ ದುರ್ಬಲವಾಗಿರು... ವರ್ಗಗಳನ್ನು ಹೇಗೆ ಮತ್ತಷ್ಟು ದುರ್ಬಲಗೊಳಿಸಿ... ಎಂಬುದನ್ನು ಹಲವು ಅಧ್ಯಯನಗಳು ತೋರಿಸಿಕೊಟ್ಟಿ...

ವಾಸ್ತವವಾಗಿ 2002ರ ತನಕ ಭಾರತ ಸರ್ಕಾರ... ಮಟ್ಟದಲ್ಲಾಗಲೀ ಅಥವಾ ರಾಜ್ಯ ಸರ್ಕಾರಗಳಲ್ಲಾಗಲಿ... ಒಂದು "ಪ್ರಕೃತಿ ವಿಕೋಪ ನಿರ್ವಹಣಾ ನೀತಿ... (Disaster Management Policy) ಎಂಬುದ... ಇರಲಿಲ್ಲ. ಇದ್ದದ್ದೆಲ್ಲಾ ಪುನರ್‌ವಸತಿ ಮತ್ತು ಪರಿಹಾ... (Relief and Rehabilitation) ನೀತಿ ಮತ್ತು... ಇಲಾಖೆಗಳು ಮಾತ್ರ. 2004ರ ಜೂನ್ ನಂತರದ... ಇದಕ್ಕೆ ಸ್ಪಷ್ಟ ರೂಪವನ್ನು ಕೊಟ್ಟು ನೈಸರ್ಗಿಕ ವಿಪತ್ತುಗ... ನಿರ್ವಹಣೆಗೆ ಇದ್ದ ಇಲಾಖೆಗಳ ಪುನರ್‌ರಚನೆ ಮತ್ತು... ಹೊಸ ಪ್ರಾಧಿಕಾರ ಮತ್ತು ಪ್ರತ್ಯೇಕ ನಿಧಿಗಳನ್ನು... ಸೃಷ್ಟಿಸಲಾಯಿತು. ನೈಸರ್ಗಿಕ ವಿಪತ್ತುಗಳ ಬಾಬತ್ತನ್ನು... ಕೃಷಿ ಇಲಾಖೆಯಿಂದ ಗೃಹ ಇಲಾಖೆಯ ಸುಪರ್ದಿಗೆ... ನೀಡಲಾಯಿತು. ಆದರ ಉಸ್ತುವಾರಿಯಲ್ಲಿ ಈವರೆ... ಕೇವಲ ಪರಿಹಾರ ಮತ್ತು ಪುನರ್‌ವಸತಿಗಳನ್ನು ಮಾ... ನಿರ್ವಹಿಸುತ್ತಿದ್ದ ಇಲಾಖೆಗಳಿಗೆ ವಿಕೋಪದ ನಿವಾರ... ಮತ್ತು ಅಪಾಯವನ್ನು ಎದುರಿಸಲು ಸಿದ್ಧತೆಯಂತ... ಕಾರ್ಯಗಳನ್ನು ಸೇರಿಸಿ ವಿಪತ್ತು ನಿರ್ವಹಣಾ...

▶▶▶1



ಚಾರ್ವಾಕ

▸ ಶಿವಸುಂದರ್

ನೋ ಕಾಮೆಂಟ್ಸ್

"ಕೇವಲ ಸಂಶಯದ ಕಾರಣದಿಂದಲೇ ಪೊಲೀಸರು ಜನರನ್ನು ಕೊಲ್ಲಲು ಪ್ರಾರಂಭಿಸಿದರೆ ನಾಳೆ ಮಣಿಪುರದಲ್ಲಿ ಯಾರೂ ಉಳಿಯುವುದಿಲ್ಲ."

-ನವೋರೆಮ್ ಪ್ರಕಾಶ್, ಪೊಲೀಸ್ ಅತ್ಯಾಚಾರಕ್ಕೆ ಗುರಿಯಾದ ಮುಗ್ಧ ಮಣಿಪುರ ಯುವಕ

"ವಿಧಾನಸೌಧದಲ್ಲಿ ನೀವು ನಡೆಸುವ ರಾಜಕೀಯವನ್ನು ನ್ಯಾಯಾಲಯದ ಆವರಣಕ್ಕೆ ತರಬೇಡಿ."

- ಮಾಯಾವತಿ ಸರ್ಕಾರಕ್ಕೆ ಸುಪ್ರೀಂಕೋರ್ಟ್

"ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಮ್ಯಾಚಿನಲ್ಲಿ ಭಾರತ ಹೊರಗುಳಿಯುವಂತಾಗುವಲ್ಲಿ ಬೌಲರ್ಸ್‌ಗಳ ಪಾತ್ರವೇನೂ ಇಲ್ಲ, ಎದುರಾಳಿ ಬ್ಯಾಟ್ಸ್‌ಮನ್‌ಗಳು ಅದ್ಭುತವಾಗಿ ಆಡಿದರು, ಅಷ್ಟೆ."

- ಅಮಿತ್ ಮಿಶ್ರಾ, ಭಾರತ ತಂಡದ ಬೌಲರ್

"ಸರ್ಕಾರದ ದೃಷ್ಟಿಯಲ್ಲಿ ಮಠಾಧೀಶರು ಮತ್ತವರ ಶಿಷ್ಯವೃಂದದ ಜೀವಕ್ಕಿರುವ ಬೆಲೆ ಸಾರ್ವಜನಿಕರಿಗಿಲ್ಲ."

- ಎಂ.ಜಿ.ಸುಬ್ಬಣ್ಣ, ಮಂತ್ರಾಲಯದಲ್ಲಿ ಪ್ರವಾಹದಲ್ಲಿ ಸಿಲುಕಿಕೊಂಡಿದ್ದ ಸಂತ್ರಸ್ತ

"ಸಾಲ್ಯಾ ತಗ್ಸಾ ಕೊಟ್ರೂ ಸಾಕು. ನಾವು ಸೆಡ್ ಹಾಕ್ಕೊಂತೀವಿ. ಗಂಗವ್ವಗೆ ಕರುಣೆ ಇಲ್ಲ, ಸರ್ಕಾರಕ್ಕೆ ಕಣ್ಣೇ ಇಲ್ಲ."

- ನರೇಗಲ್ಲಿನ ಗಾದಗೂಳಿ ಕೇಶಪ್ಪ

"ಈ ದೇಶದಲ್ಲಿ ಕಪ್ಪು ಮತ್ತು ಬಿಳುಪು ಮಾತ್ರವಲ್ಲದ ಮತ್ತೊಂದು ಅಭಿಪ್ರಾಯಕ್ಕೆ ಅವಕಾಶವೇ ಇಲ್ಲವೇನೋ ಎಂದು ಒಮ್ಮೊಮ್ಮೆ ಅನಿಸುತ್ತದೆ. ನಾನು ನಕ್ಸಲ್ ಹಿಂಸೆಯನ್ನು ಒಪ್ಪುವುದಿಲ್ಲ, ಆದರೆ ಅದೇ ಸಮಯದಲ್ಲಿ ಅವರ ಬದ್ಧತೆಯನ್ನು ಮೆಚ್ಚಿಕೊಳ್ಳುತ್ತೇನೆ. ಹಾಗೆಂದ ಮಾತ್ರಕ್ಕೆ ನಾನು ನಕ್ಸಲ್ ಹೇಗಾಗುತ್ತೇನೆ."

- ಸಂದೀಪ್ ಪಾಂಡೆ, ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ ಸಮಾಜ ಸೇವಕ

"ಸೇವಾ ಭಾರತಿಯೆನ್ನುವುದು ಆರೆಸ್ಸೆಸ್ಸಿನ ದ್ವೇಷ ರಾಜಕಾರಣದ ಒಂದು ಮುಖವಾಡ ಸಂಸ್ಥೆ. ನನಗಿದು ಗೊತ್ತಿಲ್ಲದೆ ಗುಜರಾತ್ ಭೂಕಂಪ ಸಂತ್ರಸ್ತರಿಗೆ ನೆರವನ್ನು ಈ ಸಂಸ್ಥೆಯ ಮೂಲಕ ನೀಡಿದರೆ ಉತ್ತಮವೆಂದು ಭಾವಿಸಿ ಹಣವನ್ನು ನೀಡಿದೆ. ಅದನ್ನು ಅವರು ತಮ್ಮ ಇತರ ಅಜೆಂಡಾಗಳಿಗೆ ಬಳಸಿಕೊಂಡಿದ್ದಾರೆಂಬುದು ಈಗ ನನಗೆ ಖಾತರಿಯಾಗಿದೆ."

- ಬ್ರಿಟನ್ನಿನಲ್ಲಿ ನೆಲೆಸಿರುವ ಭಾರತೀಯ ಉದ್ಯಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಬ್ರಿಟನ್ನಿನಲ್ಲಿ ಒರಿಸ್ಸಾದ ಚಂಡ ಮಾರುತ ಸಂತ್ರಸ್ತರಿಗೆಂದು ಸೇವಾ ಇಂಟರ್‌ನ್ಯಾಷನಲ್ ಎಂಬ ಮತ್ತೊಂದು ಆರೆಸ್ಸೆಸ್ ಮುಖವಾಡ ಸಂಸ್ಥೆ ಸಂಗ್ರಹಿಸಿದ 2,60,000 ಪೌಂಡ್ (ಅಂದಾಜು ಒಂದು ಕೋಟಿ ಎಂಭತ್ತೆರಡು ಲಕ್ಷ ರೂ.ಗಳು) ಹಣವು ಆರೆಸ್ಸೆಸ್ಸಿನ ಮತ್ತೊಂದು ಮುಖವಾಡ ಸಂಸ್ಥೆಯಾದ ಉತ್ಕಲ್ ಬಿಪನ್ನ ಸಾಹಿತ್ಯ ಸಮಿತಿ ಎಂಬ ಸಂಸ್ಥೆಗೆ ಕೊಡಲಾಗಿದೆ."

- ಆವಾಜ್ ಎಂಬ ಸಂಸ್ಥೆಯ ವರದಿ

"ನನ್ನ ಮಗನಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ಕೊಟ್ಟಿರುವುದು ಅವನು ರಾಷ್ಟ್ರಪತಿಯ ಮಗ ಎಂಬುದಕ್ಕಲ್ಲ, ಆತನಿಗೇ ಹೈಕಮಾಂಡ್ ಪರಿಚಯವಿದೆ. ಆತನೇ ಒಬ್ಬ ವ್ಯಕ್ತಿಯಾಗಿ ಹೈಕಮಾಂಡ್ ಬಳಿ ಹೋಗಿ ನನಗೆ ಟಿಕೆಟ್ ಬೇಕು ಎಂದು ಕೇಳಿದ. ಪಡೆದ."

-ದೇವ್‌ಸಿಂಗ್ ಶೇಖಾವತ್, ರಾಷ್ಟ್ರಾಧ್ಯಕ್ಷೆಯ ಪತಿ

"ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದು ನೆರೆ ಪರಿಹಾರವಲ್ಲ, ಬರ ಪರಿಹಾರ."

-ಕೃಷ್ಣ ಭೈರೇಗೌಡ, ಯುವ ಕಾಂಗ್ರೆಸ್ ನಾಯಕ

"ಎಂದಿನಂತೆ ಸಭಾಂಗಣಕ್ಕೆ ಆಗಮಿಸಿದ ಮುಖ್ಯ ನ್ಯಾಯಮೂರ್ತಿ ದಿನಕರನ್ ಅವರು 24 ನಿಮಿಷಗಳಲ್ಲಿ 27 ಪ್ರಕರಣಗಳ ವಿಚಾರಣೆ ನಡೆಸಿ ವಾಪಸ್ಸಾದರು."

-ಪತ್ರಿಕಾ ವರದಿ

ನಿಮ್ಮನ್ನು ಮಾತ್ರ ಸರ್ಕಾರವೇ ಕಾಪಾಡಬೇಕು!

"ಮಂತ್ರಾಲಯದಲ್ಲಿ ಪ್ರವಾಹದಲ್ಲಿ ಸಿಲುಕಿಕೊಂಡಿರುವ ಭಕ್ತರನ್ನು ದೇವರೇ ಕಾಪಾಡಬೇಕು."

-ಮಂತ್ರಾಲಯ ಮಠಾಧೀಶರು

ಆತ್ಮಘಾತುಕ ವಿಸ್ಮೃತಿ

"ನಾನು ಮೊದಲು ಭಾರತೀಯ. ಆ ನಂತರವೇ ದಲಿತ. ಈ... ಜಾತಿ-ಧರ್ಮದ ಜಂಜಡದಲ್ಲಿ ಸಿಲುಕಿಕೊಳ್ಳಲು ನಾನು ಇಷ್ಟಪಡುವುದಿಲ್ಲ... ಆದರೆ ಸಚ್ ಕಾ ಸಾಮ್ನಾ ಕಾರ್ಯಕ್ರಮದಲ್ಲಿ ಮಾತ್ರ ನಾನು ಹೇಳಿದ್ದೆಲ್ಲ... ಸತ್ಯ. ನನ್ನ ಬಣ್ಣ ಮತ್ತು ಜಾತಿಯ ಕಾರಣಕ್ಕಾಗಿಯೇ ನನ್ನನ್ನು ಇಂಡಿಯನ್ ಟೀಮಿನಿಂದ ಕೈಬಿಡಲಾಯಿತು."

-ವಿನೋದ್ ಕಾಂಬ್ಳಿ

ಧನಂಜಯಕುಮಾರನಿಗೂ ಮಾನವ ಹಕ್ಕುಗಳಿಗೂ ಸಂಬಂಧವಿಲ್ಲವೆನ್ನುವುದು ಮಾತ್ರ ನಿಜ!

"ಮಾನವ ಹಕ್ಕುಗಳಿಗೂ ಬಿಜೆಪಿಯ ಚಿಂತನಾ ಬೈಠಕ್ಕಿಗೂ ಏನು ಸಂಬಂಧ? ನೆರೆ ಮತ್ತು ಪ್ರವಾಹಗಳ ಬಗೆಗೆ ನಾಯಕ್‌ಗೆ ಏನು ಗೊತ್ತು... ಇವರು ಪರಿಹಾರ ಕಾರ್ಯದಲ್ಲಿ ಎಲ್ಲಾದರೂ ತೊಡಗಿ ಒಂದು ಹೆಣವನ್ನಾದರೂ ಎತ್ತಿಹಾಕಿದ್ದಾರಾ?"

-ಧನಂಜಯಕುಮಾರ್, ಬಿಜೆಪಿ ನಾಯಕ

ಹಂಗಿನ ನಾಲಿಗೆಯ ಪರಾಕು..

"ಅಶೋಕ್ ಖೇಣಿಯವರು ಪ್ರಸಿದ್ಧ ರಾಜಕಾರಣಿಯೂ ಅಲ್ಲ, ಜನಪ್ರಿಯ ನಟರೂ ಏನಲ್ಲ, ಆದರೂ ಅವರ ಹುಟ್ಟಿದ ಹಬ್ಬಕ್ಕೆ ಇಷ್ಟೊಂದು ಜನ ಸೇರುತ್ತಾರೆಂದರೆ ಅದು ಅವರು ಮಾಡಿರುವ ಜನಪರ ಕೆಲಸಗಳ ಪ್ರಭಾವ..."

-ರಜನೀಕಾಂತ್

ಕನ್ನಡಿಯಲ್ಲಿ ಕಂಡ ಭಾರತ

"ಯಾವುದು ನಿಜವಾದ ಭಾರತ? ಈ ದೇಶದಲ್ಲಿ 50ಕ್ಕೂ ಹೆಚ್ಚು ಬಿಲಿಯನಾಧೀಶರು ಇರುವುದು ನಿಜವೋ? ಅಥವಾ ಹಸಿವಿನಿಂದ ಪ್ರತಿದಿನ 6000 ಮಕ್ಕಳು ಸಾಯುತ್ತಿರುವುದು ನಿಜವೋ? ಹಲವಾರು ಆಧುನಿಕ ಆಸ್ಪತ್ರೆಗಳಿರುವ ದೆಹಲಿಯಲ್ಲಿ ಅತಿ ಹೆಚ್ಚು ಹೆರಿಗೆಗಳು ಫ್ಲೈ ಓವರ್ ಕೆಳಗೆ ಏಕೆ ನಡೆಯುತ್ತವೆ? ಇದನ್ನೆಲ್ಲಾ ಕೇಳಿದರೆ ನಾವು ಭಾರತಕ್ಕೆ ಅವಮಾನ ಮಾಡುತ್ತಿದ್ದೇವೆ ಎನ್ನಲಾಗುತ್ತದೆ. ನಾವು ನಮ್ಮ ಮುಖದ ಕುರೂಪವನ್ನು ಮರೆತು ಕನ್ನಡಿಗಳನ್ನು ದ್ವೇಷಿಸಲು ಪ್ರಾರಂಭಿಸಿದ್ದೇವೆ."


-ವಾರ್ತಾ ಭಾರತಿ ಸಂಪಾದಕೀಯದಲ್ಲಿ

ರೆ ಬಂದ ರಾಜ್ಯದಲ್ಲಿ ನೀರೋ ದೊರೆಗಳು



ರ್ನಾಟಕ ಮತ್ತು ಪಕ್ಕದ ಆಂಧ್ರ ಪ್ರದೇಶದ ಜನ ಕಂಡರಿಯದಂತಹ ಪ್ರಾಕೃತಿಕ ದಾಳಿಗೆ ತುತ್ತಾಗಿ ಷ್ಟ, ನಷ್ಟ, ನೋವುಗಳನ್ನು ಅನುಭವಿಸುತ್ತಿರುವು ದು ಇಡೀ ದೇಶವೇ ಕಣ್ಣೀರಿಡುತ್ತಿದೆ. ಲಕ್ಷಾಂತರ ರ ಮೇಲೊಂದು ಸೂರಿಲ್ಲದೆ, ಕೈತುತ್ತಿನಷ್ಟು ಲ್ಲದೆ, ಬಾಯಾರಿಕೆಯನ್ನು ತಣಿಸಲು ಕುಡಿಯುವ ೕ, ಪ್ರವಾಹದಲ್ಲಿ ತಮ್ಮ ಚೂರುಪಾರು ಲ್ಲದೆ ತಮ್ಮ ಇಡೀ ಬದುಕನ್ನೇ ಂಡು ಇನ್ನಷ್ಟು ಬರ್ಬರವಾದ ನ್ನು ಎದುರಿಸುತ್ತಿದ್ದಾರೆ.

ಸಂದರ್ಭದಲ್ಲಿ ಈ ದುರಂತ ಟ್ಟಿಗೆ ಪ್ರಕೃತಿಯ ವಿಕೋಪ, ಮಟ್ಟಿಗೆ ಮಾನವ ನಿರ್ಮಿತ ಲ್ಲರೂ ನೋಡಿಕೊಳ್ಳಬೇಕಿದೆ. ಾಡಿದಾಗ ಮಾತ್ರವೇ ಮುಂದೆ ಬಹುದಾದ ಇಂತಹ ದುರಂತ ತಡೆಯಲಾಗದಿದ್ದರೂ, ಕನಿಷ್ಠ ವನ್ನು ಎದುರಿಸುವ ಬಗೆಯಾ ಮಗೆ ಗೊತ್ತಿರುತ್ತದೆ.



ೃತಿಕ ವಿಕೋಪದ ಬಗ್ಗೆ ಹೇಳು ಮುನ್ನ ಈ ದುರಂತ ಎಷ್ಟರಮಟ್ಟಿಗೆ ಮಾನವ -ಅದರಲ್ಲೂ ನಮ್ಮ ರಾಜಕಾರಣಿಗಳ ಬೇಜವಾ ಿಂದಾಗಿ ಎಂತಹ ಹಾನಿಯಾಗಿದೆ-ಎಂಬುದರತ್ತ ರಿಸಬೇಕಿದೆ.

ಾಟಕದ ಜನರ ಅದೆಷ್ಟು ಜನ್ಮದ ಪುಣ್ಯದ ಫಲವೋ ಯೂರಪ್ಪನಂತಹ ಹೊಣೆಗೇಡಿಯನ್ನು ರಾಜ್ಯದ ಂತ್ರಿಯಾಗಿ ಪಡೆದಿದ್ದಾರೆ. ಈತ ಮುಖ್ಯಮಂತ್ರಿ ಹಲವೇ ವಾರಗಳಲ್ಲಿ ರಾಜ್ಯದೆಲ್ಲೆಡೆ ಬಿತ್ತನೆ ಬೀಜ ಗೊಬ್ಬರಕ್ಕೆ ಹಾಹಾಕಾರ ಎದ್ದಿತು. ರಾಜ್ಯದ ಕಡೆ ರೈತರು ಪ್ರತಿಭಟಿಸಿದರು. ಆದರೆ ಅವರ ತ್ತ ಕಿಂಚಿತ್ತೂ ಗಮನಹರಿಸದ ಯಡಿಯೂರಪ್ಪ ಬಿಜೆಪಿ ಪಕ್ಷ 'ಆಪರೇಷನ್ ಕಮಲ' ಎಂಬ ಜಕೀಯಕ್ಕೆ ಚಾಲನೆ ಕೊಟ್ಟು ಇತರೆ ಪಕ್ಷಗಳ ನ್ನ ಖರೀದಿಸಿ ತಮ್ಮ ಅಧಿಕಾರವನ್ನು ಗಟ್ಟಿ ಳ್ಳುವಲ್ಲೇ ಮಗ್ನರಾಗಿದ್ದರು. ಆಗ ರೈತರ ಕತೆ ಆಕ್ರೋಶವಾಗಿ ಪರಿವರ್ತಿತವಾಯಿತು. ರೂ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ರಪ್ಪ ಯೋಚಿಸಬಹುದಿತ್ತು, ಅದನ್ನೂ ಅವರಿಂದ ಗಲಿಲ್ಲ, ಪರಿಣಾಮವಾಗಿ ಪೊಲೀಸರ ಗೋಲಿ ಇಬ್ಬರು ರೈತರು ಪ್ರಾಣತೆತ್ತರು. ಈ ಯಡಿ ಮತ್ತಾತನ ಸಂಪುಟದ ಸಚಿವರು ಎಷ್ಟು ದರೆ ಅಂದು ಮಡಿದ ರೈತರ ಸಂಬಂಧಿಕರಿಗೆ ಪರಿಹಾರಧನವನ್ನು ನೀಡಿತ್ತಾದರೂ ಇಂದು ರ್ ಕುರಿತು ವಿಚಾರಣೆ ನಡೆಸುತ್ತಿರುವ ನ್ಯಾಯ ಜಗನ್ನಾಥ್ ಶೆಟ್ಟಿ ಆಯೋಗದ ಮುಂದೆ ಅಂದು ಗುಂಡೇಟಿಗೆ ಸತ್ತವರು ರೈತರೇ ಅಲ್ಲ ಎಂದು ದ್ದಾರೆ.

ಗಲಿ, ಆ ಪ್ರಕರಣದಿಂದಲಾದರೂ ಯಡಿಯೂರಪ್ಪ ತರೆ? ಊಹುಂ. ಹಾಗೊಮ್ಮೆ ಆತ ಮತ್ತಾತನ ರು ಪಾಠ ಕಲಿತಿದ್ದರೆ ಅತ್ತ ಉತ್ತರ ಕರ್ನಾಟಕದ ಮೇಲೆ ಧಾರಾಕಾರವಾದ ಮಳೆ ಬೀಳುತ್ತಿರುವಾಗ ತ್ತ ಮೈಸೂರಿನ ಸುತ್ತೂರು ಮಠದಲ್ಲಿ ನರಹಂತಕ ಮೋದಿಯ ತರಗತಿಗಳಲ್ಲಿ ಮೈಮರೆಯುತ್ತಿರಲಿಲ್ಲ; ಗಾಂಧಿಯನ್ನು ಕೊಂದ ಆರೆಸ್ಸೆಸ್‌ನ ಹಾಲಿ ಯಕರ ಮಾರ್ಗದರ್ಶನಕ್ಕೆ ಕಿವಿಗೊಡುತ್ತಿರಲಿಲ್ಲ; ಕ್ಷಾಂತರ ಜನ ಸಾವಿನಂಚಿನಲ್ಲಿದ್ದರೂ ಇವರೆಲ್ಲ ದೇಜೇಶೇಂದ್ರ ಸ್ವಾಮಿಯ ಮುಂದೆ ಮಂಡಿ ಅವರ ಪ್ರವಚನಕ್ಕೆ ತಲೆದೂಗುತ್ತಿರಲಿಲ್ಲ.

ಗಲಿ ಬಿಡಿ, ಇಲ್ಲಿಯತನಕ ಅಧಿಕಾರದ ರುಚಿ ಕಂಡಿರದ, ಆದಳಿತದ ಆಳಇಆ ಗೊತ್ತಿರದ ಯಡ್ಡಿ ಮತ್ತವರ ಪಟಾಲಂನ ಅರಿವಿಗೆ ಉತ್ತರ ಕರ್ನಾಟಕದ ಪರಿಸ್ಥಿತಿಯ ಭೀಕರತೆ ಬಂದಿರಲಿಲ್ಲ ಎಂದಿಟ್ಟುಕೊಳ್ಳುವ ಹಾಗೂ ಇಲ್ಲ. ಏಕೆಂದರೆ ಅಲ್ಲಿ ಏನಾಗುತ್ತಿದೆ ಎಂದು ಸ್ಪಷ್ಟವಾಗಿ ಇಡೀ ರಾಜ್ಯಕ್ಕೇ ಗೊತ್ತಾದ ನಂತರವೂ ಯಡಿಯೂರಪ್ಪನಾಗಲಿ, ಅವರ ಸಂಪುಟದ ಮಂತ್ರಿಗಳಿಗಾಗಲಿ, ಪಕ್ಷದ ಶಾಸಕರಾಗಲಿ ಯಾರೂ ಅದರ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳಲಿಲ್ಲ.

ಬಳ್ಳಾರಿ ಜಿಲ್ಲೆಯನ್ನೇ ಲೂಟಿ ಮಾಡಿ ಕೋಟ್ಯಾಧಿಪತಿಗಳಾಗಿರುವ ರೆಡ್ಡಿ ಸಹೋದರರಲ್ಲಿ ಒಬ್ಬನಾದ ಸೋಮಶೇಖರ ರೆಡ್ಡಿಗೆ ಇವತ್ತು ಅದೇ ಬಳ್ಳಾರಿ ಜಿಲ್ಲೆ ಸಮಾಧಿ ಆಗಿರುವುದು, ಅಲ್ಲಿನ ಜನ ತತ್ತರಿಸಿರುವುದು, ಅವರ ನೆರವಿಗೆ ತಾನು ಹೋಗಬೇಕೆಂಬುದು ಅರ್ಥವಾಗಲಿಲ್ಲ. ಬದಲಾಗಿ ಅದ್ಯಾವ ಹೊಸ ರಾಜಕೀಯ ತಂತ್ರವಾಗಿ ಹೊಸ ಯೋಜನೆಯನ್ನು ಹೆಣೆದಿದ್ದಾರೋ, ಅದರ ಭಾಗವಾಗಿ ಇಲ್ಲಿಯ ತನಕ ಅವರ ಆಜನ್ಮ ವೈರಿಯಂತಿದ್ದ ಯಡಿಯೂರಪ್ಪನಿಗೆ 'ಕ್ಷೀರ ಬಂಧು' ಎಂಬ ಬಿರುದನ್ನು ಬೆಂಗಳೂರು ಮತ್ತು ತುಮಕೂರಿನ ನಡುವೆ ಇರುವ ಡಾಬಸ್‌ಪೇಟೆಯಲ್ಲಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅದನ್ನು ಕೇಳಿ ಯಡಿಯೂರಪ್ಪ ಎಷ್ಟು ಪುಳಕಿತರಾದರೆಂದರೆ, ಮೊನ್ನೆ ಮೊನ್ನೆಯ ತನಕ ಇದೇ ರೆಡ್ಡಿ ಪಟಾಲಂ ತನ್ನ ಅಧಿಕಾರಕ್ಕೆ ಸೆಡ್ಡು ಹೊಡೆದಿದ್ದನ್ನು, ಸಚಿವ ಸಂಪುಟದ ಸಭೆಗೆ ಗೈರುಹಾಜರಾಗುವ ಮೂಲಕ ತನಗೆ ಸಾರ್ವಜನಿಕವಾಗಿ ಮುಖಭಂಗ ಮಾಡಿದ್ದನ್ನೆಲ್ಲ ಮರೆತರು.

ಅತ್ತ ಉತ್ತರ ಕರ್ನಾಟಕದ ಜನ ಅದು ಹೇಗೋ ತಮ್ಮ ಪ್ರಾಣ ಕಾಪಾಡಿಕೊಂಡಿದ್ದರೆ ಇತ್ತ ರೆಡ್ಡಿಗಳ ಈ 'ಕ್ಷೀರಬಂಧು' ಎಂಬ ಆಮಿಷವನ್ನು ಕಂಡು "ಬದುಕಿದೆಯಾ ಬಡ ಜೀವ" ಎಂದು ಯಡಿಯೂರಪ್ಪ ಆ ಸನ್ಮಾನ ಸಭೆಗೆ ದೌಡಾಯಿಸಿದರು. ಅಂದು ಆ ಸನ್ಮಾನ ಸಭೆಯಲ್ಲಿ ಅವರಿಗೆ ಹಾಕಿದ ಹಾರ, ಮೈಸೂರು ಪೇಟ, ನೀಡಿದ ನೆನಪಿನ ಕಾಣಿಕೆ, ಆಡಿದ ಭೋಪರಾಕ್‌ಗಳ ನಡುವೆ ಉತ್ತರ ಕರ್ನಾಟಕ ಜನರ ಚೀತ್ಕಾರ ಕೃಷ್ಣೆಯಲ್ಲಿ ಹಿಂಡಿದ ಹುಣಸೆ ಹುಳಿಯಂತಾಯಿತು.

ಬಿಡಿ, ಯಡಿಯೂರಪ್ಪನ ಅನನುಭವ, ಅದಕ್ಷತನವನ್ನು ಇಷ್ಟು ಹೀಯಾಳಿಸುವುದು ಬೇಡ ಎಂದೆನಿಸಿದರೂ ಇಷ್ಟೆಲ್ಲ ಆದನಂತರವೂ ಆತ ಮಾಡಿದ್ದೇನು ಎಂದು ನೋಡಿದರೆ ಮತ್ತಷ್ಟು ಬೇಸರವಾಗುತ್ತದೆ. ಇಡೀ ರಾಜ್ಯ ಮಾತ್ರವಲ್ಲ, ಇಡೀ ದೇಶ ಮಾತ್ರವಲ್ಲ, ಅಂತರರಾಷ್ಟ್ರೀಯ ಮಾಧ್ಯಮಗಳು ಕೂಡ ನೂರಾರು ವರ್ಷಗಳಲ್ಲಿ ಭಾರತ ಕಂಡಿರದ ಅತಿ ದೊಡ್ಡ ದುರಂತ ಇದೆಂದು ಹೇಳಿದ ನಂತರವೇ ಯಡಿಯೂರಪ್ಪ ತಮ್ಮ ಹೆಲಿಕಾಪ್ಟರ್‌ನ್ನೇರಿ ವೈಮಾನಿಕ ವೀಕ್ಷಣೆ ಮಾಡಿದರು ಸರಿ. ಆದರೆ ಆ ವೈಮಾನಿಕ ವೀಕ್ಷಣೆ ನಂತರ ಅವರು ಮಾಡಿದ ಮೊದಲ ಕೆಲಸ ಯಾವುದು? ರಾಯಚೂರು, ಕೊಪ್ಪಳ, ಬಿಜಾಪುರ, ಧಾರವಾಡ, ಗುಲ್ಬರ್ಗ, ಬಾಗಲಕೋಟೆ, ಗದಗ ಮತ್ತು ಇತರೆ ಜಿಲ್ಲೆಗಳಲ್ಲಿ ನಿರ್ಗತಿಕರಾಗಿದ್ದ ಬಡ ಜನರ ನೆರವಿಗೆ ಯಡಿಯೂರಪ್ಪ ಧಾವಿಸಿದರೆ? ಇಲ್ಲ! ಬದಲಾಗಿ ಲಕ್ಷಾಂತರ ಭಕ್ತ ಸಮೂಹವನ್ನು ಹೊಂದಿರುವ, ಕೋಟ್ಯಾಧಿಪತಿಯಾಗಿರುವ, ಕರ್ನಾಟಕ ರಾಜ್ಯದ ಗಡಿಯೊಳಗೆ ಇಲ್ಲದಿರುವ, ಮಂತ್ರಾಲಯದ ಸುಯತೀಂದ್ರ ಸ್ವಾಮಿ ಅವರನ್ನು ಸುರಕ್ಷಿತವಾಗಿ ಕರೆತರಲು ತಮ್ಮ ಆಪ್ತ ಸಚಿವೆ ಶೋಭಾ ಕರಂದ್ಲಾಜೆಯನ್ನು ಹೆಲಿಕಾಪ್ಟರ್‌ನೊಂದಿಗೆ ಕಳುಹಿಸಿದರು. ಆಕೆ ಕೂಡ ಅದೇ ಮಂತ್ರಾಲಯದಲ್ಲಿ ನಿರ್ಗತಿಕರಾಗಿದ್ದ ಸಾವಿರಾರು ಭಕ್ತರ ಬಗ್ಗೆ ಒಂದು ಕ್ಷಣವೂ ಯೋಚಿಸದೆ ಸ್ವಾಮಿಯನ್ನು ಕರೆದುಕೊಂಡು ಬಂದಿದ್ದೇ ಒಂದು ದೊಡ್ಡ ಸಾಹಸವೆಂಬಂತೆ ವರ್ತಿಸಿದರು.

ಮಂತ್ರಾಲಯದ ಸುಯತೀಂದ್ರ ಸ್ವಾಮಿಗಳನ್ನು ಅವಮಾನಿಸುವ ಅಥವಾ ಕಿಂಚಿತ್ತಾಗಿ ದೂಷಿಸುವ ಉದ್ದೇಶ ನಮ್ಮದಲ್ಲ, ಅವರದ್ದೂ ಒಂದು ಜೀವವೇ. ನೆರೆಯಿಂದ ಕಂಗಾಲಾಗಿರುವ ಇತರೆ ಜೀವಿಗಳಂತೆ ಅವರೂ ಮುಖ್ಯವೇ. ಇದು ಅವರ ಬಗೆಗಿನ ವಿಮರ್ಶೆಯಲ್ಲ, ಬದಲಾಗಿ ಯಡಿಯೂರಪ್ಪನ ನಿಲುವಿನ ಬಗೆಗಿನ ವಿಮರ್ಶೆ. ಹೇಳಿಕೇಳಿ ಮಂತ್ರಾಲಯ ಇರುವುದು ಆಂಧ್ರ ಪ್ರದೇಶದಲ್ಲಿ, ಅದರ ಆಸ್ತಿ, ಆದಾಯ, ಇತ್ಯಾದಿಗಳೆಲ್ಲ ಬರುವುದು ಆಂಧ್ರದ ಸುಪರ್ದಿಯೊಳಗೆ. ಆದ್ದರಿಂದ ಅವರ ರಕ್ಷಣೆ, ಸ್ವಾಮಿಗಳ ಸುರಕ್ಷತೆ ಇತ್ಯಾದಿಗಳ ಬಗ್ಗೆ ಯೋಚಿಸಬೇಕಾದದ್ದು ಆಂಧ್ರದ ಸರ್ಕಾರ. ಅದೆಲ್ಲವನ್ನು ಬದಿಗಿಟ್ಟು ಸುಯತೀಂದ್ರ ಸ್ವಾಮಿ ಅವರನ್ನು ರಕ್ಷಿಸುವುದು ಮುಖ್ಯವಾಗಿತ್ತು ಎಂದು ಒಪ್ಪಿಕೊಳ್ಳೋಣ. ಆದರೂ ಸಾಮಾನ್ಯ ಜನರ ಬಗ್ಗೆ ಯಡಿಯೂರಪ್ಪನಿಗಿರುವ ಅಸಡ್ಡೆ ಧೋರಣೆಯನ್ನು ಯಾವ ಕಾರಣಕ್ಕೂ ಕ್ಷಮಿಸಲಾಗುವುದಿಲ್ಲ. ಯಾಕೆಂದರೆ, ಪ್ರವಾಹಪೀಡಿತ ಪ್ರದೇಶಗಳಿಗೆ ಇದೇ ಯಡಿಯೂರಪ್ಪ ಮೊದಲು ಘೋಷಿಸಿದ ಪರಿಹಾರಗಳಲ್ಲಿ, ಕರ್ನಾಟಕಕ್ಕೆ ಸೇರದಿರುವ ಮಂತ್ರಾಲಯ ಎಂಬ ಚಿಕ್ಕ ಪ್ರದೇಶಕ್ಕೆ ಹತ್ತು ಕೋಟಿ ರೂಪಾಯಿಗಳು! ಅದೇ ಸಂದರ್ಭದಲ್ಲಿ ಪ್ರವಾಹಪೀಡಿತ ಪ್ರತಿ ಜಿಲ್ಲೆಗೆ (ಅಂದರೆ ಸಾವಿರಾರು 'ಮಂತ್ರಾಲಯ'ಗಳಷ್ಟು ವಿಸ್ತಾರವಾದ, ಅದಕ್ಕಿಂತಲೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ) ಯಡಿಯೂರಪ್ಪ ಪ್ರಕಟಿಸಿದ್ದು ಕೇವಲ ಹನ್ನೆರಡು ಕೋಟಿ ರೂಪಾಯಿಗಳನ್ನು! ಇದರ ಅರ್ಥ ಇಷ್ಟೇ; ಯಡಿಯೂರಪ್ಪ ಕರ್ನಾಟಕಕ್ಕೆ ಸೇರಿರದ ಮಂತ್ರಾಲಯಕ್ಕೆ ನೀಡಿದ್ದು ಬೆಣ್ಣೆ ಇದೇ ರಾಜ್ಯಕ್ಕೆ ಸೇರಿರುವ ಜಿಲ್ಲೆಗಳಿಗೆ ನೀಡಿದ್ದು ಸಗಣಿ!



ಇಂತಹ ಧೂರ್ತ ಶಿಖಾಮಣಿಯನ್ನು ಮುಖ್ಯಮಂತ್ರಿಯಾಗಿ ಪಡೆದಿರುವ ಕರ್ನಾಟಕ ಇನ್ನೆಂತೆಂತಹ ದುರಂತಗಳನ್ನು ಎದುರಿಸಬೇಕಿದೆಯೋ. ನೆರೆ ಹಾವಳಿಯಿಂದಾಗಿ ತಮ್ಮದೆಲ್ಲವನ್ನೂ ಕಳೆದುಕೊಂಡಿರುವ ಸಂತ್ರಸ್ತರನ್ನು ನೋಡಿ ಲಕ್ಷಾಂತರ ಜನ ಮರುಗುತ್ತಿದ್ದಾರೆ; ತಮ್ಮ ಕೈಲಾದಷ್ಟು ನೆರವನ್ನು ನೀಡಲು ಮುಂದಾಗಿದ್ದಾರೆ; ಜಾತಿ, ಧರ್ಮ, ವರ್ಗಗಳೆಂಬ ಗಡಿಗಳನ್ನು ಮೀರಿ ಮಾನವೀಯತೆಯನ್ನು ಪ್ರದರ್ಶಿಸುತಿದ್ದಾರೆ. ನಮ್ಮ ಜನರಲ್ಲಿರುವ ಈ ಕಾಳಜಿ ಯಡಿಯೂರಪ್ಪನಿಗಿಲ್ಲದಿರುವುದು ಈ ದುರಂತದಿಂದ ಸಾಬೀತಾಗಿದೆ.

******

ಈ ದುರಂತ ಎಷ್ಟರಮಟ್ಟಿಗೆ ಮಾನವ ನಿರ್ಮಿತ ಎಂಬುದರತ್ತ ಗಮನ ಹರಿಸೋಣ. ಮೊದಲೇ ಹೇಳಿದಂತೆ ಸೆಪ್ಟೆಂಬರ್ 29 ರಂದು ಉತ್ತರ ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಧಾರಾಕಾರವಾದ ಮಳೆ ಪ್ರಾರಂಭವಾದಾಗ ಬಿಜೆಪಿ ನಾಯಕರು ಹಿಂದೂತ್ವವಾದಿ ಚಿಂತನ ಬೈಠಕ್‌ನಲ್ಲಿ ತಲ್ಲೀನರಾಗಿದ್ದರು. ಆತ ಆಂಧ್ರದಲ್ಲೂ ವೈಎಸ್ ಆರ್ ನಿಧನದ ನಂತರ ಅವರ ಮಗ ಜಗನ್‌ನನ್ನು ಮುಖ್ಯಮಂತ್ರಿಯಾಗಿಸುವ ಕಸರತ್ತಿನಲ್ಲೇ ಅಲ್ಲಿನ ಕಾಂಗ್ರೆಸ್ ನಾಯಕರು ಬ್ಯುಸಿ ಆಗಿದ್ದರು. ಆ ಕಾರಣಕ್ಕೆ ಎರಡು ರಾಜ್ಯಗಳ ನಾಯಕರು ಪರಿಸ್ಥಿತಿಯ ಗಂಭೀರತೆಯನ್ನು ಅರಿಯದೇ ಹೋದರು.

ಇವರ ಅಪಾರ ನಿರ್ಲಕ್ಷದಷ್ಟೇ ಪ್ರಕೃತಿಯ ವಿಕೋಪವೂ ಇತ್ತು, ಎಷ್ಟರಮಟ್ಟಿಗೆ ಎಂದರೆ ಇಂತಹ ದುರಂತಗಳು ಸಂಭವಿಸುವ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡುವ ಸೆಂಟ್ರಲ್ ವಾಟರ್ ಕಮೀಷನ್ (CWC) ನೀಡಿದ್ದ ಲೆಕ್ಕಾಚಾರಗಳೂ ತಲೆಮೇಲಾದವು. ಉದಾಹರಣೆಗೆ ಸೆಪ್ಟೆಂಬರ್ 29 ರಂದು CWC 57 ಸಾವಿರ ಕ್ಯೂಸೆಕ್ಸ್ ಮಳೆ ಬೀಳಲಿದೆ ಎಂದು ಅಂದಾಜಿಸಿತ್ತು, ಆದರೆ ಅಂದು ಬಿದ್ದ ಮಳೆ ಅದರ ಎರಡರಷ್ಟು. ಹಾಗೆಯೇ ಸೆಪ್ಟೆಂಬರ್ 30 ರಂದು 1.16 ಲಕ್ಷ ಕ್ಯೂಸೆಕ್ಸ್ ಮಳೆಯಾಗಲಿದೆ ಎಂದು ನಂಬಲಾಗಿತ್ತು, ಆದರೆ ಅವತ್ತು ಸುರಿದ ಮಳೆ ಐದು ಲಕ್ಷ ಕ್ಯೂಸೆಕ್ಸ್‌ನ್ನು ಮೀರಿದ್ದು. ಹಾಗೆಯೇ ಮೂರನೆ ದಿನ (ಅಂದರೆ ಅಕ್ಟೋಬರ್ 1 ರಂದು) 5.95 ಲಕ್ಷ ಕ್ಯೂಸೆಕ್ಸ್ ಮಳೆ ಬೀಳಲಿದೆ ಎಂದು CWC ಅಂದಾಜಿಸಿತ್ತಾದರೂ ಅವತ್ತು ಬಿದ್ದ ಮಳೆ ಬರೋಬ್ಬರಿ 9.72 ಲಕ್ಷ ಕ್ಯೂಸೆಕ್ಸ್! ಹೀಗೆ ಮನುಷ್ಯನ ಲೆಕ್ಕಾಚಾರಗಳನ್ನು ಮೀರಿ ಸುರಿದ ವರುಣ ಸದಾ ಬರಗಾಲದಿಂದ ತತ್ತರಿಸುವ ಹತ್ತಾರು ಜಿಲ್ಲೆಗಳನ್ನೇ ಸಮುದ್ರವಾಗಿ ಪರಿವರ್ತಿಸಿತು.


ಹಾಗಿದ್ದಾಗ್ಯೂ 48 ಗಂಟೆಗಳ ಮುನ್ನವೇ CWC ನೀಡಿದ್ದ ಎಚ್ಚರಿಕೆಯನ್ನು ಎರಡೂ ರಾಜ್ಯಗಳ ನಾಯಕರು ಗಂಭೀರವಾಗಿ ಪರಿಗಣಿಸಿದ್ದರೆ ಈಗ ಆಗಿರುವ ದುರಂತವನ್ನು ಅರ್ಧದಷ್ಟಾದರೂ ತಡೆಯಬಹುದಿತ್ತು, ಈ ನಿಟ್ಟಿನಲ್ಲಿ ಅವರೆಲ್ಲ ಸೋತಿದ್ದರಿಂದ ಈ ದುರಂತವು ಒಂದು ರೀತಿಯಲ್ಲಿ ಮಾನವ ನಿರ್ಮಿತ ಎಂದೂ ಹೇಳಬಹುದು.

* * * * *

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕಿದೆ. ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ನೆರೆ ಹಾವಳಿ ಸಂಭವಿಸಿದ ಕೆಲದಿನಗಳ ಮುನ್ನ ಫಿಲಿಫೀನ್ಸ್, ವಿಯಟ್ನಾಮ್, ಕಾಂಬೋಡಿಯಾ ಮತ್ತು ಥೈಲ್ಯಾಂಡಿನ ಮೇಲೆ ತೂಫಾನ್ ಅಪ್ಪಳಿಸಿ ಆ ದೇಶಗಳ ಜನಜೀವನವನ್ನು ನುಜ್ಜು-ಗುಜ್ಜಾಗಿಸಿತ್ತು. ಹಾಗೆಯೇ ಜಗತ್ತಿನ ಇತರ ಕಡೆಗಳಲ್ಲೂ ಪ್ರಕೃತಿ ತನ್ನ ವಿಕೋಪವನ್ನು ಮೆರೆದಿದ್ದಾಳೆ. ಹೆಚ್ಚು ಮಳೆ ಬೀಳುತ್ತಿದ್ದ ಕಡೆ ಬರ, ಬರ ಇದ್ದ ಕಡೆ ಅತಿವೃಷ್ಟಿ, ಚಂಡ ಮಾರುತ, ತೂಫಾನ್, ಸುನಾಮಿಯಂತಹ ದುರಂತಗಳು ಸತತವಾಗಿ ಸಂಭವಿಸುತ್ತಿವೆ. ಒಂದು ಅಂದಾಜಿನ ಪ್ರಕಾರ 1990 ರ ದಶಕದಲ್ಲಿ ವರ್ಷವೊಂದಕ್ಕೆ ಸುಮಾರು 200 ಪ್ರಾಕೃತಿಕ ದುರಂತಗಳು ಸಂಭವಿಸುತ್ತಿದ್ದರೆ, 2000 ರ ದಶಕದಲ್ಲಿ ವರ್ಷವೊಂದಕ್ಕೆ ಅವುಗಳ ಸಂಖ್ಯೆ 350 ಮೀರಿದೆ. ಇದಕ್ಕೆಲ್ಲ ಕಾರಣ ಜಾಗತಿಕ ತಾಪಮಾನದ ಏರಿಕೆ ಎಂಬುದರಲ್ಲಿ ಅನುಮಾನವೇ ಇಲ್ಲ. ಹಾಗೆಯೇ ಆ ಏರಿಕೆಗೆ ಮೂಲಕಾರಣ ಅಪಾರ ಪ್ರಮಾಣದಲ್ಲಿ ಹಸಿರು ಮನೆ ಅನಿಲಗಳನ್ನು ಸೂಸುತ್ತಿರುವ ಅಭಿವೃದ್ಧಿ ಹೊಂದಿರುವ ದೇಶಗಳು ಎಂಬುದೂ ಈಗ ಸಾಬೀತಾಗಿದೆ. ಆ ದೇಶಗಳು ಈ ಅಪಾಯಕಾರಿ ಅನಿಲಗಳ ಸೂಸುವಿಕೆಯನ್ನು ತಡೆಯಬೇಕೆಂಬ ಭಾರತದಂತಹ ಬಡ ದೇಶಗಳ ಒತ್ತಾಯವನ್ನು ತಿರಸ್ಕರಿಸುತ್ತಲೇ ಇವೆ. ಮಾತ್ರವಲ್ಲ ಜಾಗತಿಕ ತಾಪಮಾನದ ಏರಿಕೆಗೆ ಭಾರತದಂತಹ ದೇಶಗಳೇ ಕಾರಣ ಎಂಬ ಭಂಡವಾದ ಮಾಡುತ್ತಿವೆ.

ಅಭಿವೃದ್ಧಿ ಹೊಂದಿರುವ ದೇಶಗಳ ಜನರ ಸುಖಜೀವನ ಹೆಚ್ಚಾದಷ್ಟೂ ನಮ್ಮವರು ಇಲ್ಲಿ ಪ್ರಾಣ ತೆತ್ತಬೇಕು; ಅವರು ಭಂಡವಾದ ಮಾಡಿದಷ್ಟೂ ಇಲ್ಲಿನವರು ಎಲ್ಲವನ್ನು ಕಳೆದುಕೊಂಡು ನಿರ್ಗತಿಕರಾಗಬೇಕು.

ಇದೆಂತಹ ನ್ಯಾಯ? ಇದೆಂತಹ ಜಗತ್ತು?



ಇದೂ ಸಾಧ್ಯವೆ?



ಮನುಷ್ಯನೇ ಬಹಳ ಬುದ್ಧಿವಂತ, ಚಾಣಾಕ್ಷ, ದಕ್ಷ ಎಂದೆಲ್ಲಾ ನಾವು ನಮ್ಮ ಬೆನ್ನುಗಳನ್ನು ತಟ್ಟಿಕೊಳ್ಳುತ್ತೇವೆ. ಪ್ರೀತಿ, ಪ್ರೇಮ, ತನ್ನವರೊಂದಿಗೆ ಬದುಕಬೇಕೆಂಬ ಉತ್ಕಟ ಆಕಾಂಕ್ಷೆ ಎಲ್ಲಾ ಪ್ರಾಣಿಗಳಿಗಿಂತ ಮನುಷ್ಯನಲ್ಲೇ ಹೆಚ್ಚಾಗಿರುತ್ತದೆ ಎಂದುಕೊಳ್ಳುತ್ತೇವೆ. ಈ ಎಲ್ಲಾ ಉದಾತ್ತ ಮೌಲ್ಯಗಳನ್ನು 'ಮಾನವೀಯತೆ' ಎಂದು ಕರೆಯುತ್ತೇವೆ. ಆದರೆ, ಒಮ್ಮೊಮ್ಮೆ ಮನುಷ್ಯನಿಗಿಂತ ಪ್ರಾಣಿಗಳೇ ಹೆಚ್ಚಿನ ಉದಾತ್ತ ಮೌಲ್ಯಗಳನ್ನು ಹೊಂದಿರುತ್ತವೆ ಎಂಬುದು ಸಾಕುಪ್ರಾಣಿಗಳನ್ನು ನೋಡಿದಾಗ ನಮ್ಮ ಅರಿವಿಗೆ ಬರುತ್ತದೆ. ಒಂದು ಪುಟ್ಟ ಸಾಕುನಾಯಿ ಅದರ ಮಾಲಿಕನನ್ನು ಪ್ರೀತಿಸುವ, ಅವನ ಮೇಲೆ ವಿಶ್ವಾಸವಿಡುವ ಪರಿಯನ್ನು ನೋಡಿದರೆ ನಿಜಕ್ಕೂ ಬೆರಗಾಗುತ್ತದೆ. ನಿಷ್ಠೆ ಮತ್ತು ವಿಶ್ವಾಸಗಳಿಗೆ ನಾಯಿ ಪ್ರತೀಕವಾಗಿರುವುದೂ ಉಂಟು. ಮೊನ್ನೆ ಆಸ್ಟ್ರೇಲಿಯದಲ್ಲಿ ನಡೆದ ಘಟನೆಯೊಂದನ್ನು ನೋಡಿದರೆ ಎಂಥ ಕಠಿಣ ಹೃದಯಿಗಳೂ ಕರಗಿಬಿಡುತ್ತಾರೆ. ಈ ಘಟನೆಯಲ್ಲಿ ಪಾತ್ರಧಾರಿಯಾಗಿರುವುದು ನಾಯಿಯಲ್ಲ, ಬದಲಿಗೆ ಬೆಕ್ಕು.


ಆಸ್ಟ್ರೇಲಿಯದ ಉತ್ತರ ಭಾಗದಲ್ಲಿರುವ ಕ್ಲೋನ್ಸರಿ ಎಂಬ ನಗರದಲ್ಲಿ ಆಶ್ಲೆ ಸುಲ್ಲಿವಾನ್ ಎಂಬ ಮಹಿಳೆ ವಾಸವಾಗಿದ್ದಾಳೆ. ಆಕೆ ಕ್ಲೈಡ್ ಎಂಬ ಒಂದು ಬೆಕ್ಕನ್ನು ಸಾಕಿದ್ದಳು. ಅದರ ಮೇಲೆ ಆಕೆಗೆ ಎಷ್ಟೊಂದು ಪ್ರೀತಿ ಎಂದರೆ ಹೋದಲ್ಲೆಲ್ಲಾ ಅದನ್ನು ಜೊತೆಗೆ ಕರೆದುಕೊಂಡೇ ಹೋಗುತ್ತಿದ್ದಳು. ಎಲ್ಲಾದರೂ ಅದು ಕಳೆದುಹೋದರೆ, ಯಾರಿಗಾದರೂ ಸಿಕ್ಕರೆ ಅದನ್ನು ತನಗೆ ಒಪ್ಪಿಸಲಿ ಎಂದು ಆ ಬೆಕ್ಕಿನ ಕೊರಳ ಕೆಳಗಿನ ಚರ್ಮದ ಮೇಲೆ ತನ್ನ ಗುರುತು, ವಿಳಾಸಗಳನ್ನೂ ಬರೆದಿದ್ದಳು. ಈಗ್ಗೆ ನಾಲ್ಕು ವರ್ಷಗಳ ಹಿಂದೆ ಆಕೆ ಕ್ಲೈಡ್ ಅನ್ನು ಕರೆದುಕೊಂಡು ಆಸ್ಟ್ರೇಲಿಯದ ದಕ್ಷಿಣದಲ್ಲಿರುವ ತಾಸ್ಮೇನಿಯ ಎಂಬ ದ್ವೀಪಕ್ಕೆ ಹೋಗಿದ್ದಳು. ದುರಾದೃಷ್ಟವಶಾತ್ ಆ ದ್ವೀಪದಲ್ಲಿ ಆಕೆಯ ಮುದ್ದಿನ ಬೆಕ್ಕು ಕ್ಲೈಡ್ ಕಳೆದು ಹೋಯಿತು. ಆ ಬೆಕ್ಕಿಗೆ ಆಗ ಕೇವಲ ಒಂದು ವರ್ಷ. ಸ್ವಂತ ಮಗನನ್ನೇ ಕಳೆದುಕೊಂಡಷ್ಟು ದುಃಖತಪ್ತಳಾದ ಆಕೆ ಇಡೀ ದ್ವೀಪದಾದ್ಯಂತ ಅದಕ್ಕಾಗಿ ಹುಡುಕಿದಳು. ಎಷ್ಟೇ ಪ್ರಯತ್ನಪಟ್ಟರೂ ಆ ಬೆಕ್ಕು ಮಾತ್ರ ಸಿಗಲಿಲ್ಲ. ಕೊನೆಗೆ ದುಃಖತಪ್ತ ಭಾರದ ಹೃದಯ ಹೊತ್ತುಕೊಂಡು ಆಸ್ಟ್ರೇಲಿಯದ ಉತ್ತರ ಭಾಗದಲ್ಲಿರುವ ತನ್ನ ಕ್ಲೋನ್ಸರಿ ನಗರಕ್ಕೆ ವಾಪಸ್ಸಾದಳು. ತನ್ನ ಮುದ್ದಿನ ಬೆಕ್ಕು ಮತ್ತೆ ಮರಳುತ್ತದೆಂಬ ಆಶೆ ಆಕೆಯಲ್ಲಿ ಕಮರಿಹೋಗಿತ್ತು.


ಮೊನ್ನೆ ನಡೆದ ಅಚ್ಚರಿಯೇನು ಗೊತ್ತೆ? ಈಗ ನಾಲ್ಕು ವರ್ಷ ಕಳೆದ ಮೇಲೆ ಆಕೆಯ ಬೆಕ್ಕು ಕ್ಲೈಡ್ ಕ್ಲೋನ್ಸರಿ ನಗರದಲ್ಲಿ ಸಿಕ್ಕುಬಿಟ್ಟಿದೆ! ಒಂದು ಆಸ್ಪತ್ರೆಯ ಆವರಣದಲ್ಲಿ ಓಡಾಡುತ್ತಿದ್ದ ಈ ಬೆಕ್ಕನ್ನು ಒಬ್ಬ ನರ್ಸ್ ನೋಡಿದಳು. ಬಳಲಿದಂತಿದ್ದ ಅದನ್ನು ತೆಗೆದುಕೊಂಡು ಒಬ್ಬ ಪಶು ವೈದ್ಯಾಧಿಕಾರಿಗಳಿಗೆ ತೋರಿಸಿ ಚಿಕಿತ್ಸೆ ಕೊಡಿಸಿ ತನ್ನ ಮನೆಯಲ್ಲೇ ಹಲವು ದಿನ ಇಟ್ಟುಕೊಂಡಿದ್ದಳು. ಕೊನೆಗೆ ಬೆಕ್ಕಿನ ಕೊರಳ ಕೆಳಗಿರುವ ಚರ್ಮದ ಮೇಲಿದ್ದ ವಿಳಾಸವನ್ನು ನೋಡಿ ಅದನ್ನು ಬೆಕ್ಕಿನ ಮಾಲಿಕಳಾದ ಆಶ್ಲೆ ಸುಲ್ಲಿವಾನ್‌ಳಿಗೆ ಒಪ್ಪಿಸಿದಳು.

ಇದೆಂಥ ಆಶ್ಚರ್ಯ ನೋಡಿ. ಕ್ಲೈಡ್ ಬೆಕ್ಕು ಕಳೆದದ್ದು ಆಸ್ಟ್ರೇಲಿಯದ ದಕ್ಷಿಣದಲ್ಲಿರುವ ತಾಸ್ಮೇನಿಯ ದ್ವೀಪದಲ್ಲಿ. ಈ ದ್ವೀಪದ ಸುತ್ತಲೂ ನೂರಾರು ಕಿ.ಮೀ. ವಿಶಾಲ ಸಮುದ್ರವಿದೆ. ಆಸ್ಟ್ರೇಲಿಯದ ಪ್ರಮುಖ ಭೂ ಪ್ರದೇಶ ಹಾಗೂ ಈ ದ್ವೀಪದ ನಡುವೆ 298 ಕಿ.ಮೀ. ಸಮುದ್ರವಿದೆ. ಇದನ್ನು ಬಾಸ್ ಜಲಸಂಧಿ ಎಂದು ಕರೆಯುತ್ತಾರೆ. ಆ ಪುಟ್ಟ ಬೆಕ್ಕು ಈ ಸಮುದ್ರವನ್ನು ದಾಟಿ ಹೇಗೆ ಆಸ್ಟ್ರೇಲಿಯದ ಪ್ರಮುಖ ಭೂ ಪ್ರದೇಶಕ್ಕೆ ಬಂತು ಎಂಬುದು ಸದ್ಯಕ್ಕೆ ಯಾರಿಗೂ ನಿಲುಕದ ಪ್ರಶ್ನೆ. ಅಲ್ಲದೇ, ದಕ್ಷಿಣದಲ್ಲಿರುವ ಈ ಸಮುದ್ರ ತಟ ಉತ್ತರದಲ್ಲಿರುವ ಕ್ಲೋನ್ಸರಿ ನಗರದಿಂದ ವಿನಿಲ್ಲವೆಂದರೂ 3,220 ಕಿ.ಮೀ. ದೂರವಿದೆ. ಇಷ್ಟೊಂದು ದೂರವನ್ನು ಹೇಗೆ ಆ ಪುಟ್ಟ ಬೆಕ್ಕು ದಾಟಿ ಬಂತೆಂಬುದು ಎಲ್ಲರಿಗೂ ಆಶ್ಚರ್ಯ. ತನ್ನ ಮನೆಯೊಡತಿಯನ್ನು ಸೇರುವುದಕ್ಕೆ 298 ಕಿ.ಮೀ. ಸಮುದ್ರವನ್ನೂ, 3220 ಕಿ.ಮೀ. ಭೂಮಾರ್ಗವನ್ನೂ ದಾಟಿ ಬಂದಿದೆಯೆಂದರೆ, ಅದಕ್ಕಾಗಿ ಅದು ಬರೋಬ್ಬರಿ ನಾಲ್ಕು ವರ್ಷಗಳನ್ನು ತೆಗೆದುಕೊಂಡಿದೆಯೆಂದರೆ ಅದಕ್ಕೆ ತನ್ನ ಮನೆಯೊಡತಿಯ ಮೇಲೆ ಇನ್ನೆಂಥಾ ಪ್ರೀತಿಯಿರಬೇಕು?










ಬಾಹ್ಯಾಕಾಶದಲ್ಲಿ ಸರ್ಕಸ್ ಉದ್ಯಮಿ!


ಇದುವರೆಗೆ 'ಪ್ರವಾಸ' ಎಂದರೆ ಭೂಮಿಯ ಮೇಲಿನ ಹಲವಾರು ಪ್ರಕೃತಿ ಸುಂದರ ತಾಣಗಳಿಗೆ, ಐತಿಹಾಸಿಕ ಸ್ಥಳಗಳಿಗೆ, ದೊಡ್ಡ ದೊಡ್ಡ ನಗರಗಳಿಗೆ, ಬೇಸಿಗೆ ಧಾಮಗಳಿಗೆ, ಧಾರ್ಮಿಕ ಕ್ಷೇತ್ರಗಳಿಗೆ ಅಥವಾ ಇಂತಹುದೇ ಇನ್ನಿತರ ಸ್ಥಳಗಳಿಗೆ ಹೋಗುವುದು ಮಾತ್ರವಾಗಿತ್ತು. ಆದರೆ, ಶರವೇಗದಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನ ಈ ವ್ಯಾಖ್ಯಾನವನ್ನೇ ಬದಲಿಸುವತ್ತ ಹೊರಟಿದೆ. ಭೂಲೋಕವನ್ನು ಬಿಟ್ಟು, ಅದರ ವಾಯುಮಂಡಲ ಹಾಗೂ ಗುರುತ್ವಾಕರ್ಷಣ ವಲಯದಾಚೆಗೆ ಹಾರುವ, ಬಾಹ್ಯಾಕಾಶದಲ್ಲಿ ನಿಂತು ನೀಲಿ ಚೆಂಡಿನಂತೆ ಕಾಣುವ ಭೂಮಿಯನ್ನು ನೋಡುವ, ಬಾಹ್ಯಾಕಾಶದಲ್ಲಿ ತಾವೇ ತೂಕ ರಹಿತರಾಗಿ ಹಾರುವ ಭಾಗ್ಯ ಇಲ್ಲಿಯತನಕ ಕೇವಲ ಕಲ್ಪನಾ ಚಾವ್ಲಾ, ಸುನಿತಾ ವಿಲಿಯಮ್ಸ್‌ನಂತಹ ಬೆರಳೆಣಿಕೆಯಷ್ಟು ಸಂಶೋಧಕರಿಗೆ, ಬಾಹ್ಯಾಕಾಶ ವಿಜ್ಞಾನಿಗಳಿಗೆ, ಎಂಜಿನಿಯರ್‌ಗಳಿಗೆ ಮಾತ್ರವೇ ಸಿಕ್ಕಿದೆ. ಬಾಹ್ಯಾಕಾಶಯಾನ ಎಂಬ ಅದ್ಭುತ ಕಲ್ಪನೆ ಜನಸಾಮಾನ್ಯರಿಗಿನ್ನೂ ಕಲ್ಪನೆಯಾಗಿಯೇ ಉಳಿದಿದೆ. ಆದರೆ, ಕೆಲವು ವರ್ಷಗಳು ಉರುಳಿದರೆ ಬಾಹ್ಯಾಕಾಶಯಾನ ಕೇವಲ ವಿಜ್ಞಾನಿಗಳಿಗೆ ಮಾತ್ರ ಸೀಮಿತವಾಗಿರದೆ ಉಳಿದವರಿಗೂ ವಿಸ್ತರಣೆಯಾಗುವ ಸೂಚನೆಗಳು ಸ್ಪಷ್ಟವಾಗಿ ಕಾಣುತ್ತಿವೆ. ಅದಕ್ಕೆ ಇತ್ತೀಚಿನ ಉದಾಹರಣೆ ಎಂದರೆ ರಶಿಯಾದ ಸೂಯೇಜ್ ಬಾಹ್ಯಾಕಾಶ ನೌಕೆಯಲ್ಲಿ ಕೆನಡಾದ ಉದ್ಯಮಿಯೊಬ್ಬ ಅಂತರಿಕ್ಷಯಾನ ಕೈಗೊಂಡಿರುವುದು.

ಆತನ ಹೆಸರು ಗಯ್ ಲ್ಯಾಲಿಬರ್ಟ್. ಈತ ಬಾಹ್ಯಾಕಾಶ ವಿಜ್ಞಾನಿಯೂ ಅಲ್ಲ ಅಥವಾ ಅದಕ್ಕೆ ಸಂಬಂಧಪಟ್ಟ ಎಂಜಿನಿಯರ್ ಕೂಡ ಅಲ್ಲ. ಆತ ಕೆನಡಾದ ಒಬ್ಬ ಸಾಮಾನ್ಯ ಸರ್ಕಸ್ ಉದ್ಯಮಿ. ಖುದ್ದು ಹಾಸ್ಯ ಕಲಾವಿದ. ಆದರೂ ಈಗ ಆತ ಕಳೆದ ಒಂದು ವಾರದಿಂದ ಭೂಮಿಯ ಮೇಲಿಲ್ಲ, ಅಂತರಿಕ್ಷದಲ್ಲಿದ್ದಾನೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ತನ್ನ ಜೊತೆಗಿರುವ ಬಾಹ್ಯಾಕಾಶ ವಿಜ್ಞಾನಿಗಳೊಂದಿಗೆ ಅಂತರಿಕ್ಷದ ಅದ್ಭುತಗಳನ್ನು ಅನುಭವಿಸುತ್ತಿದ್ದಾನೆ. ಸೆಪ್ಟೆಂಬರ್ 30ರಂದು ಸೂಯೆಜ್ ಬಾಹ್ಯಾಕಾಶ ನೌಕೆಯ ಮೂಲಕ ಈತ ಕಜಕಿಸ್ತಾನದ ಬೈಕೋನೂರ್ ಬಾಹ್ಯಾಕಾಶ ಕೇಂದ್ರದಿಂದ ಅಂತರಿಕ್ಷ ಪ್ರಯಾಣ ಕೈಗೊಂಡವನು ಇನ್ನೂ ವಾಪಸ್ ಭೂಮಿಗೆ ಬಂದಿಲ್ಲ.

ವಿಜ್ಞಾನಿ, ಇಂಜಿನಿಯರ್ ಅಲ್ಲದ ಇವನನ್ನು ಬಾಹ್ಯಾಕಾಶಕ್ಕೆ ಏಕೆ ಕರೆದುಕೊಂಡು ಹೋಗಲಾಯಿತು? ಕೇವಲ ಅಂತರಿಕ್ಷದ ಅದ್ಭುತಗಳನ್ನು ಅನುಭವಿಸುವುದಕ್ಕಾಗಿ ಮಾತ್ರ. ಈತ ಅಂತರಿಕ್ಷ ಪ್ರವಾಸಿ. 12 ದಿನಗಳ ಈ ಪ್ರವಾಸಕ್ಕಾಗಿ ಆತ ಸುರಿದಿರುವ ದುಡ್ಡು ಎಷ್ಟು ಗೊತ್ತೆ? ಬರೊಬ್ಬರಿ 35 ದಶಲಕ್ಷ ಡಾಲರ್! ಅಂದರೆ, ಒಂದು ನೂರಾ ಇಪ್ಪತ್ತೈದು ಕೋಟಿ ರೂಪಾಯಿಗಳು!

ಬಾಹ್ಯಾಕಾಶಕ್ಕೆ ಹಾರುತ್ತಿರುವ ಪ್ರವಾಸಿಗಳಲ್ಲಿ ಗಯ್ ಲ್ಯಾಲಿಬರ್ಟ್ ಏಳನೆಯವನು. ಇವನಿಗಿಂತ ಮುಂಚೆಯೇ ಆರು ಜನ ವಿಜ್ಞಾನಿಗಳಲ್ಲದ ಪ್ರವಾಸಿಗರು ಈಗಾಗಲೇ ಅಂತರಿಕ್ಷದ ಅದ್ಭುತಗಳನ್ನು ಸವಿದು ಬಂದಿದ್ದಾರೆ. ಅವರೆಲ್ಲಾ ಆಗರ್ಭ ಶ್ರೀಮಂತರು. ಹತ್ತು, ಹನ್ನೆರಡು ದಿನಗಳ ಈ ಪ್ರವಾಸಕ್ಕಾಗಿ ನೂರಾರು ಕೋಟಿಗಳನ್ನು ಸುರಿದವರು. ಹೀಗೆ, ನಿಧಾನವಾಗಿ ಬಾಹ್ಯಾಕಾಶಪ್ರವಾಸಿಗರ ಸಂಖ್ಯೆಯೂ ಭವಿಷ್ಯದ ದಿನಗಳಲ್ಲಿ ಏರುತ್ತದೆ.





ಭವಿಷ್ಯದಲ್ಲಿ ಬಾಹ್ಯಾಕಾಶ ಪ್ರವಾಸೋದ್ಯಮಕ್ಕಿರುವ ಅಂತಃಸ್ಸಾಮರ್ಥ್ಯವನ್ನು ಈಗಾಗಲೇ ಮನಗಂಡಿರುವ ಅಮೆರಿಕದ ಹಲವು ಕಂಪೆನಿಗಳು ಈ ನಿಟ್ಟಿನಲ್ಲಿ ಮಹತ್ವಪೂರ್ಣ ಸಂಶೋಧನೆಗಳಲ್ಲಿ ತೊಡಗಿ ಮಹತ್ವಾಕಾಂಕ್ಷಿ ಯೋಜನೆಗಳನ್ನು ಪ್ರಕಟಿಸಿವೆ. ಎಲ್ಲಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿರುವ ವರ್ಜಿನ್ ಗ್ರೂಪ್ ಎಂಬ ಸಂಸ್ಥೆ ಒಂದು ವರ್ಷದ ಹಿಂದೆಯೇ ಕ್ಯಾಲಿಫೋರ್ನಿಯದ ಮೊಜಾವೇ ಮರುಭೂಮಿಯ ಒಪ್ಪೋಪ್‌ನಲ್ಲಿ ವೈಟ್ ನೈಟ್ - 2 (ಬಿಳಿ ಕುದುರೆ) ಎಂಬ ವಿಮಾನವನ್ನು ಅನಾವರಣಗೊಳಿಸಿದೆ. ವರ್ಜಿನ್ ಗ್ರೂಪ್‌ನ ಅಧ್ಯಕ್ಷ ಸರ್. ರಿಚರ್ಡ್ ಬ್ರ್ಯಾನ್ಸನ್ ಅವರು ತಮ್ಮ ತಾಯಿಯ ಗೌರವಾರ್ಥವಾಗಿ ಈ ನೌಕೆಯನ್ನು ಅನಾವರಣಗೊಳಿಸಿದ್ದು ಬಾಹ್ಯಾಕಾಶಕ್ಕೆ ತೆರಳಲಿರುವ ಮೊದಲ ನಾಗರಿಕರಲ್ಲಿ ಅವರ ತಾಯಿಯೂ ಇದ್ದಾರೆಂದು ಪ್ರಕಟಿಸಿದ್ದರು. ಬಾಹ್ಯಾಕಾಶ ಪ್ರವಾಸ ಕೈಗೊಳ್ಳುವುದಕ್ಕೆ ಅವರು ಒಬ್ಬರಿಗೆ 85 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಇನ್ನೇನು ಅದು ಕೆಲವೇ ವರ್ಷಗಳಲ್ಲಿ ಪ್ರಾರಂಭವಾಗುವ ಲಕ್ಷಣಗಳೂ ಕಾಣುತ್ತಿವೆ. ಇನ್ನೊಂದು ವಿಚಾರ ಎಂದರೆ ಈಗಾಗಲೇ 220 ಜನ ದುಡ್ಡು ಕೊಟ್ಟು ಬಾಹ್ಯಾಕಾಶ ಯಾನ ಹೊರಡುವುದಕ್ಕೆ ಸಹಿ ಮಾಡಿದ್ದಾರೆ. ಇಷ್ಟೊಂದು ದುಡ್ಡು ಖರ್ಚು ಮಾಡಿ ಬಾಹ್ಯಾಕಾಶ ಯಾನ ಕೈಗೊಂಡರೂ ಕಿಟಕಿ ಬದಿಯ ಸೀಟು ಸಿಗದಿದ್ದರೆ ಏನು ಪ್ರಯೋಜನ ಎಂಬ ಆತಂಕ ಕಾಡಬಹುದು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡೇ ಇಡೀ ಬಾಹ್ಯಾಕಾಶ ನೌಕೆಯಲ್ಲಿ ಕೇವಲ ಕಿಟಕಿಬದಿಯ ಸೀಟುಗಳೇ ಇರುವಂತೆ ವಿನ್ಯಾಸಗೊಳಿಸಲಾಗಿದೆ.

ವೈಟ್‌ನೈಟ್ ಗಗನನೌಕೆಯಲ್ಲಿ ಪರಿಪೂರ್ಣ ಬಾಹ್ಯಾಕಾಶಯಾನ ಮಾಡುವುದು ಸಾಧ್ಯವಿಲ್ಲವಾದರೂ ಆ ನಿಟ್ಟಿನಲ್ಲಿ ಒಂದು ಮಹತ್ವಪೂರ್ಣ ಹೆಜ್ಜೆ ಎಂದು ಹೇಳಬಹುದು. ಏಕೆಂದರೆ, ಈ ವಿಮಾನವು ಭೂಮಿಯಿಂದ 50,000 ಅಡಿಗಳ ಎತ್ತರದಲ್ಲಿ ಪ್ರಯಾಣ ಮಾಡಲಿದೆ. ಇದು ಸಾಮಾನ್ಯ-ವಾಣಿಜ್ಯ ವಿಮಾನಗಳು ಹಾರುವುದಕ್ಕಿಂತ ಎತ್ತರದಲ್ಲಿ ಪ್ರಯಾಣಿಸುವುದು ನಿಜವಾದರೂ ಇದು ಸಂಪೂರ್ಣವಾಗಿ ಭೂಮಿಯ ಗುರುತ್ವಾಕರ್ಷಣೆಯಿಂದಾಚೆಗೆ ಹೋಗುವುದಿಲ್ಲ. ವೈಟ್‌ನೈಟ್ ನೌಕೆಯು ಒಂದು ರೀತಿಯಲ್ಲಿ ಮಾತೃನೌಕೆಯಾಗಿ ಕಾರ್ಯನಿರ್ವಹಿಸಲಿದ್ದು ಒಮ್ಮೆ ಅದು ಭೂಮಿಯಿಂದ 50,00 ಅಡಿಗಳಷ್ಟು ಎತ್ತರವನ್ನು ತಲುಪಿದ ತಕ್ಷಣ ತನ್ನೊಳಗಿಂ ಬಾಹ್ಯಾಕಾಶ ನೌಕೆಗಳನ್ನು ಹರಿಬಿಡುತ್ತದೆ. ಬಾಹ್ಯಾಕಾ ನೌಕೆ – 2 ಎಂದು ಹೆಸರಿಡಲಾದ ಈ ನೌಕೆಗಳ ತನ್ನದೇ ಆದ ಹೈಬ್ರಿಡ್ ರಾಕೆಟ್ ಶಕ್ತಿಯಿಂದ ಚಲಿಸು ಭೂಮಿಯ ಮೇಲ್ಮೈಯಿಂದ ಸುಮಾರು ಒಂದು ನೂರ ಕಿ.ಮೀ. ಎತ್ತರದಲ್ಲಿ ಹಾರಾಟ ನಡೆಸುತ್ತವೆ. ಅಂದರೆ ವೈಟ್‌ನೈಟ್ ವಿಮಾನವು ಭೂಮಿಯ ಗುರುತ್ವಾಕರ್ಷ ವ್ಯಾಪ್ತಿಯ ಒಳಗಿದ್ದುಕೊಂಡೇ ಬಾಹ್ಯಾಕಾಶ ನೌಕೆಗಳನ ಹಾರಿಬಿಡುವ ಮಾತೃನೌಕೆಯಾಗಿ ಅಥವಾ ಉಡಾವಣ ವಾಹನವಾಗಿ ಕಾರ್ಯನಿರ್ವಹಿಸುತ್ತದೆ. ಅದು ಬಿಡುಗ ಮಾಡುವ ಬಾಹ್ಯಾಕಾಶ ನೌಕೆಗಳು ಗುರುತ್ವಾಕರ್ಷಣ ವಲಯದಾಚೆಗೆ ಹೋಗುವುದರಿಂದ, ಅಂದರೆ ಭೂಮಂಡಲದ ಆಚೆಗೆ ಹೋಗುವುದರಿಂದ ಇದನ ಬಾಹ್ಯಾಕಾಶ ಯಾನ ಎಂದು ಕರೆಯಬಹುದು. ಸದ್ಯ ವೈಟ್‌ನೈಟ್-2 ವಿಮಾನವನ್ನು ಮಾತ್ರ ತಯಾರಿಸಲಾಗಿದ ಉಳಿದ ಬಾಹ್ಯಾಕಾಶ ನೌಕೆ-2ರ ನಿರ್ಮಾಣ ಕಾಯ ಮುಂದುವರೆದಿದೆ.

ಬಾಹ್ಯಾಕಾಶ ಪ್ರವಾಸದ ಸಮಯದಲ್ಲಿ ಪ್ರಯಾಣಿಕರ ತೂಕರಹಿತತೆಯ ಅತ್ಯಂತ ಅವಿಸ್ಮರಣೀಯ ಕ್ಷಣಗಳನ ಅನುಭವಿಸಬಹುದು. ಅಂದರೆ, ಮಾನವರನ್ನೂ ಒ ಗೊಂಡಂತೆ ಪ್ರತಿಯೊಂದು ವಸ್ತುವು ಭೂಮಿಯ ಗುರುತ್ವಾಕರ್ಷಣ ವಲಯದೊಳಗಿದ್ದಾಗ ಅವುಗಳಿಗೆ ಒಂದ ನಿರ್ದಿಷ್ಟ ತೂಕವಿರುತ್ತದೆ. ಗುರುತ್ವಾಕರ್ಷಣ ವಲಯವನ ದಾಟಿದಾಗ ಅವುಗಳನ್ನು ಸೆಳೆಯುವ ಯಾವುದೇ ಶ ಇಲ್ಲದಿದ್ದಾಗ ಆ ವಸ್ತುಗಳು ತಮ್ಮ ತೂಕವನ್ನ ಕಳೆದುಕೊಳ್ಳುತ್ತವೆ. ಅಂತೆಯೇ, ಬಾಹ್ಯಾಕಾಶ ಯಾ ಕೈಗೊಳ್ಳುವ ಪ್ರವಾಸಿಗರೂ ತಮಗೆ ಯಾವುದೇ ತೂ ಇಲ್ಲದಂತಹ ಅವಿಸ್ಮರಣೀಯ ಕ್ಷಣಗಳನ್ನು ಅನುಭವಿಸುವುದಕ್ಕೆ ಅವಕಾಶವಿರುತ್ತದೆ. ಬಾಹ್ಯಾಕಾಶಯಾನದ ವಿಸ್ಮಯಗಳಲ್ಲಿ ಇದೂ ಒಂದು.

ಅಂದರೆ, ಈಗ ನಾನು ತಾಜ ಮಹಲ್ ನೋಡಿದ್ದೇನೆ, ನಾನ ಸಿಂಗಾಪೂರ್‌ಗೆ ಹೋಗಿ ಬಂದಿದ್ದೇನೆ ನಾನು ನಯಾಗರ ಜಲಪಾತವನ ನೋಡಿದ್ದೇನೆ ಎಂದೆಲ್ಲಾ ಜನ ಮಾತ ನಾಡುತ್ತಾರಲ್ಲವೇ ಮುಂಬರುವ ದಿನಗಳಲ್ಲಿ ನಾನು ಚಂದ್ರಗ್ರಹಕ ಹೋಗಿಬಂದಿದ್ದೇನೆ, ನಾನು ಮಂಗಳ ಗ್ರಹಕ ಹೋಗಿಬಂದಿದ್ದೇನೆ, ನಾನು ಕ್ಷೀರಪಥ ಗ್ಯಾಲಾಕ್ಸಿಯ ಸುತ್ತಾಡಿಬಂದಿದ್ದೇನೆ ಎಂದು ಜನ ಮಾತನಾಡಿಕೊಳ್ಳು ದಿನಗಳು ದೂರವಿಲ್ಲ ಎನಿಸುತ್ತದೆ.

...ಮುಸ್ಲಿಮರ ...ಗಮನದಿಂದ ...ರತದ ...ೀಲಾದ ...ಭಾವ ಏನು?

...ಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಇತಿಹಾಸ ...ಪಕರಿದ್ದಾರೆ. ಅವರ ಹೆಸರು ಡಾ.ಮಸು. ಪ್ರಗತಿಪರ ... ಮಾನವಪ್ರೀತಿಗಳಂಥ ಉದಾತ್ತ ಮೌಲ್ಯಗಳನ್ನು ...ಡಿಸಿಕೊಂಡಿರುವ ಅವರು ಚರಿತ್ರೆಯನ್ನು ಯಾವುದೇ ...ಗ್ರಹವಿಲ್ಲದೆ ನಿಷ್ಪಕ್ಷಪಾತವಾಗಿ ಮತ್ತು ವಸ್ತುನಿಷ್ಠವಾಗಿ ...ಬೇಕೆಂಬ ಧೋರಣೆಯವರು. ಚರಿತ್ರೆ ಭವಿಷ್ಯದ ... ದೀವಟಿಗೆಯಾಗಬೇಕಾದರೆ ಅದನ್ನು ವಸ್ತುನಿಷ್ಠವಾಗಿ ...ಂಡಾಗ ಮಾತ್ರ ಸಾಧ್ಯ ಎಂದು ನಂಬಿರುವವರು. ... ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ವರ್ತಮಾನದ ...ಯದ ಬೇಳೆ ಬೇಯಿಸಿಕೊಳ್ಳುವುದಕ್ಕೆ ಗತದ ...ಯನ್ನು ತಮಗೆ ಬೇಕಾದಂತೆ ತಿರುಚಿರುವುದರ ಬಗ್ಗೆ ...ವಾಗಿ ಅಸಮಾಧಾನಗೊಂಡಿರುವವರು. ಅಂತೆಯೇ, ... ವಸ್ತುನಿಷ್ಠ ಮತ್ತು ನಿಷ್ಪಕ್ಷಪಾತಿ ನೆಲೆಯಲ್ಲಿ ಮತ್ತೊಮ್ಮೆ ...ಚಿಸಬೇಕೆಂಬ ತುಡಿತ ಉಳ್ಳವರು.

...ಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ವಿಭಾಗ ...ನಾತಕೋತ್ತರ ಅಧ್ಯಯನಕ್ಕಾಗಿ ಸೇರಿಕೊಳ್ಳಬೇಕೆಂದರೆ ... ಪರೀಕ್ಷೆ ಬರೆದು ಪಾಸಾಗಬೇಕು. ಕಳೆದ ವರ್ಷ ... ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಡಾ.ಮಸು ... ತಯಾರಿಸಿದ್ದರು. ಎಲ್ಲಾ ಪ್ರಶ್ನೆಗಳ ಜೊತೆಗೆ ...ತಲಕ್ಕಾಗಿ ಒಂದು ಪ್ರಶ್ನೆಯನ್ನು ಸೇರಿಸಿದ್ದರು. ಅದು ...ಮರ ಆಗಮನದಿಂದ ಭಾರತದ ಮೇಲಾದ ಪ್ರಭಾವ ..." ಎಂಬ ಪ್ರಶ್ನೆ. ಇದಕ್ಕೆ ವಿದ್ಯಾರ್ಥಿಗಳು ಐದು ...ಳಲ್ಲಿ ಉತ್ತರ ಬರೆಯುವಂತೆಯೂ ತಿಳಿಸಲಾಗಿತ್ತು, ... ಉತ್ತರ ಪತ್ರಿಕೆಗಳನ್ನು ತೆಗೆದು ಈ ಪ್ರಶ್ನೆಗೆ ಯಾರ್ಯಾರು ...ಗೆ ಉತ್ತರಿಸಿದ್ದಾರೆಂದು ನೋಡಿದಾಗ ಮಸು ಅವರಿಗೆ ...ರ್ಯ ಕಾದಿತ್ತು.

...ರೀಕ್ಷೆಗೆ ಕುಳಿತಿದ್ದ 300 ವಿದ್ಯಾರ್ಥಿಗಳಲ್ಲಿ ಅಷ್ಟೂ ... ಈ ಪ್ರಶ್ನೆಗೆ ಮೊದಲ ವಾಕ್ಯದಲ್ಲಿ "ಮುಸ್ಲಿಮರಿಂದ ...ೀತ್ಪಾದನೆ ಪ್ರಾರಂಭವಾಯಿತು" ಎಂದು ಬರೆದಿದ್ದರು. ...ಲು ವಿದ್ಯಾರ್ಥಿಗಳು ಎರಡನೇ ವಾಕ್ಯದಲ್ಲಿ "ಬುರ್ಖಾ ...ಜಾರಿಗೆ ಬಂತು" ಎಂದಿದ್ದರು. ಮೂರನೇ ವಾಕ್ಯದಲ್ಲಿ ...ಕಡಿಮೆ ಮುಕ್ಕಾಲು ವಿದ್ಯಾರ್ಥಿಗಳು "ಭಾರತದಲ್ಲಿ ...ಕಗಮನ ಪದ್ಧತಿ ಜಾರಿಗೆ ಬಂತು" ಎಂದು ...ದ್ದರು. ಇನ್ನು ಮೂರು ಮತ್ತು ನಾಲ್ಕನೇ ವಾಕ್ಯದಲ್ಲಿ ... ಕಡಿಮೆ ಇದೇ ತೆರನಾದ ಉತ್ತರಗಳನ್ನೇ ಬರೆದಿದ್ದರು.

...ನೆಗೆ ಆ ವಿದ್ಯಾರ್ಥಿಗಳಲ್ಲಿ ಕೆಲವರು ಪಾಸಾಗಿ ...ದ್ಯಾಲಯದಲ್ಲಿ ಪ್ರವೇಶ ಪಡೆದುಕೊಂಡರು. ಡಾ.ಮಸು ... ಅವರಿಗೆ ಮೊದಲ ಕ್ಲಾಸ್ ತೆಗೆದುಕೊಂಡು ಪ್ರವೇಶ ...ಯಲ್ಲಿ ಈ ನಿರ್ದಿಷ್ಟ ಪ್ರಶ್ನೆಗೆ ಅವರು ಬರೆದ ...ದ ಬಗ್ಗೆ ಅವರ ಗಮನ ಸೆಳೆದರು. "ಅಲ್ರೀ, ...ನ್ನಿರೋ ಮುಕ್ಕಾಲು ಭಾಗ ಹುಡುಗಿಯರು ...ದಾರ ಹಾಕುತ್ತೀರಿ. ಅದು ಮುಸ್ಲಿಮರ ಕೊಡುಗೆ ...ಗೊತ್ತಿಲ್ವಾ ನಿಮಗೆ? ನಮ್ಮಲ್ಲಿ ಎಲ್ಲರೂ ಹೊಲಿದ ...ಳನ್ನು ಹಾಕಿಕೊಳ್ಳುತ್ತೇವೆ. ಹೊಲಿಗೆ ಕಲೆಯನ್ನು ...ಕ್ಕೆ ತಂದಿದ್ದೇ ಮುಸ್ಲಿಮರು ಅಂತ ಗೊತ್ತಿಲ್ವಾ ನಿಮಗೆ? ...ಗಲಿ, ಬಿರಿಯಾನಿ ಎಂದರೆ ನಿಮ್ಮಲ್ಲಿ ಹಲವರ ...ಲ್ಲಿ ನೀರೂರುತ್ತೆ, ಕನಿಷ್ಠ ಅದು ಮುಸ್ಲಿಮರ ಕೊಡುಗೆ ...ನೂ ನೆನಪಿಗೆ ಬರಲಿಲ್ವಾ?" ಎಂದೆಲ್ಲಾ ವಿವರಿಸಿದರು.


...ಸ್ತವ ಏನೆಂದರೆ, ಈ ವಿದ್ಯಾರ್ಥಿಗಳೆಲ್ಲಾ ತಮ್ಮ ...ರ್ಷಗಳ ವಿದ್ಯಾರ್ಥಿ ಜೀವನದಲ್ಲಿ ಕಲಿತದ್ದನ್ನೇ ಎಂ.ಎ. ... ಪರೀಕ್ಷೆಯಲ್ಲಿ ಬರೆದಿದ್ದಾರೆ. ಅವರಿನ್ನೂ ಎಳೆಯ ...ಗಿದ್ದಾಗಲೇ ಪ್ರಾಥಮಿಕ ಶಾಲೆಯಿಂದಲೇ ಅವರ ...ಗೆ ...ಷ್ಟ ಪೂರ್ವಾಗ್ರಹಪೀಡಿತವಾದ, ಸಂಕುಚಿತ ...ಷಗಳನ್ನೇ ತುಂಬುತ್ತಾ ಬರಲಾಗಿದೆ. ಅದಕ್ಕಾಗಿಯೇ ...ಮನ್ನೇ ತಿದ್ದಿ, ತಿರುಚಿ ಬರೆಯಲಾಗಿದೆ. ಅದನ್ನೇ ...ತ್ತಾ, ಓದುತ್ತಾ ಬಂದ ವಿದ್ಯಾರ್ಥಿಗಳು ತಿರುಚಲ್ಪಟ್ಟ ...ಯನ್ನೇ ಸತ್ಯವೆಂದು ನಂಬಿದ್ದಾರೆ. ತಾವು ನಂಬಿದ್ದನ್ನೇ ... ಪರೀಕ್ಷೆಯಲ್ಲಿ ಬರೆದಿದ್ದಾರೆ. ಅವರಿಗೆ ಸತ್ಯದ ... ಮಾಡಿಸಬೇಕಾದರೆ ತಿರುಚಲ್ಪಟ್ಟ ಚರಿತ್ರೆಯನ್ನು ...ಷ್ಠವಾಗಿ ಪುನರ್‌ರಚಿಸುವ ಅವಶ್ಯಕತೆಯಿದೆ. ಡಾ. ...ಂಥ ನಿಷ್ಪಕ್ಷಪಾತಿ ಪ್ರಾಧ್ಯಾಪಕರು, ಚರಿತ್ರೆಕಾರರು ...ಷ್ಟೂ ಉಳಿದಿರುವುದರಿಂದ ವಸ್ತುನಿಷ್ಠ ನೆಲೆಯಲ್ಲಿ ... ಪುನರ್‌ರಚನೆಯ ಕೆಲಸವೂ ನಡೆಯುತ್ತದೆ ಎಂದು ...ಣಣ. ●

ವಸೂಲಿ ಹೋಮ

ತನ್ನ ಬಾಯಿಬಡುಕುತನದಿಂದಲೇ ಫೇಮಸ್ ಆಗಿರುವ ಈ ದಾಂಡಿಗ ಜ್ಯೋತಿಷಿ ನರೇಂದ್ರಬಾಬು ಶರ್ಮ ಹಣ ಎತ್ತುವುದರಲ್ಲಿ ಅಷ್ಟೇ ನಿಸ್ಸೀಮ. ಛಾನೆಲ್‌ಗೆ ಕರ ಮಾಡುವ ಜನರನ್ನು ತನ್ನ ಖಾಸಗಿ ಅಡ್ಡಗೂ ಸೆಳೆದು ಲಕ್ಷಗಟ್ಟಲೆ ಸುಲಿಯಲು ಆರಂಭಿಸಿದ್ದಾನೆ. ಅಷ್ಟೇ ಅಲ್ಲ, ಬರುವ ಡಿಸೆಂಬರ್ 4ರಂದು ಬೆಂಗಳೂರಿನ ಪ್ಯಾಲೆಸ್ ಗ್ರೌಂಡಿನಲ್ಲಿ "ಮಹಾ ಕಾಳಸರ್ಪ ಯಾಗ ಮಾಡುತ್ತೇನೆ. ಅಲ್ಲಿ 78 ಕೋಟಿ ದೇವತೆಗಳನ್ನು ಆರಾಧಿಸಿ ಹೋಮ ಮಾಡುತ್ತೇನೆ'' ಎಂದು ಒಂದಷ್ಟು ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಒಂದು ಸಾವಿರದಿಂದ ಹಿಡಿದು ಐದು ಲಕ್ಷ ರೂಪಾಯಿಗಳವರೆಗೆ ವಸೂಲಿ ಮಾಡುತ್ತಿದ್ದಾನೆ.

ಇವನ ಬುರುಡೆ ಮಾತುಗಳಿಗೆ ಮರುಳಾಗಿರುವ ದುಡ್ಡಿನ ಗಿರಾಕಿಗಳು ಲಕ್ಷಗಟ್ಟಲೆ ಹಣವನ್ನು ಈ ಬ್ರಹ್ಮಾಂಡನ ಅಂಡಿನ ಕೆಳಗೆ ತುಂಬುತ್ತಿದ್ದಾರೆ. ಹೀಗಾಗಿ ಈ ಖಾಕಡಾ ಜ್ಯೋತಿಷಿ ಶರ್ಮ ಈವರೆಗೆ ಜನರಿಂದ ಸುಮಾರು 5 ಕೋಟಿಗೂ ಹೆಚ್ಚು ಹಣ ಗುಂಜಿದ್ದಾನೆ. ●

ಬ್ರಹ್ಮಾಂಡ ಬಾಯಿಬಡುಕ ಶರ್ಮ



ಸುವರ್ಣ ವಾಹಿನಿಯವರಿಗೆ ನರೇಂದ್ರ ಬಾಬು ಶರ್ಮ ಎಂಬ ಬ್ರಹ್ಮಾಂಡ ಬಾಯಿಬಡುಕ ಜ್ಯೋತಿಷಿಯನ್ನು ಕಟ್ಟಿಕೊಂಡು ದಿನೇದಿನೇ ಆತಂಕದಿಂದ ಬದುಕುವಂತಾಗಿದೆ.

ನರೇಂದ್ರಬಾಬು ಶರ್ಮನ ದಾಂಡಿಗ ದೇಹದಂತೆ ಆತನ ಪೂರ್ವಾಪರಗಳೂ ದೊಡ್ಡದು. ಒಂದು ಕಾಲದಲ್ಲಿ ದಿನಕ್ಕೆ ನೂರೈವತ್ತು ರೂಪಾಯಿ ಸಂಭಾವನೆ ಪಡೆಯುವ ಜೂನಿಯರ್ ಆರ್ಟಿಸ್ಟ್ ಆಗಿದ್ದ ಈ ನರೇಂದ್ರ ಬಾಬು ಶರ್ಮ. ಕಪ್ಪು ಬಿಳುಪು ಕಾಲದ ಬಿ.ಆರ್. ಪಂತುಲು ಚಿತ್ರಗಳಲ್ಲೇ ಬಾಲನಟನಾಗಿ ನಟಿಸಿದ್ದ ಈತ ಆನಂತರ ದೊರೆ-ಭಗವಾನ್ ಮತ್ತು ರಾಜೇಂದ್ರಬಾಬು ನಿರ್ದೇಶನದ ಚಿತ್ರಗಳಲ್ಲಿ ಸಣ್ಣಪುಟ್ಟ ರೋಲ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ. ಈತ ಈವರೆಗೆ ಸುಮಾರು 570 ಚಿತ್ರಗಳಲ್ಲಿ ಸಹಕಲಾವಿದನಾಗಿ ನಟಿಸಿದ್ದಾನೆ. ಅವೆಂತಹ ಪಾತ್ರಗಳೆಂದರೆ: ಡಿ.ರಾಜೇಂದ್ರ ಬಾಬು ನಿರ್ದೇಶನ 'ಕುರುಬನ ರಾಣಿ'ಯಲ್ಲಿ ಶಿವಣ್ಣನ ಸೈಡಲ್ಲಿ ನಿಂತುಕೊಳ್ಳುವ ರೋಲು, 'ಉಪ್ಪಿದಾದಾ ಎಂಬಿಬಿಎಸ್'ನಲ್ಲಿ ಟಾಯ್ಲೆಟ್ ತೊಳೆಯುವ ಪಾತ್ರ, ಸುದೀಪ್ ಅಭಿನಯದ 'ನಂದಿ' ಚಿತ್ರದಲ್ಲಿ ಗಿಳಿಶಾಸ್ತ್ರ ಹೇಳುವ ಜ್ಯೋತಿಷಿಯ ಪಾತ್ರ.. ಇಂತಹವೇ.

ಹಿಂದೆಲ್ಲ ದಿನದ ಲೆಕ್ಕದಲ್ಲಿ ಹಣ ಸಂಪಾದಿಸಿ ಜೀವನ ಸಾಗಿಸುತ್ತಿದ್ದ ನರೇಂದ್ರ ಬಾಬು ಶರ್ಮ, ಕಸ್ತೂರಿ ವಾಹಿನಿ ಆರಂಭವಾದಾಗ ಡಿ. ರಾಜೇಂದ್ರ ಬಾಬು ಅವರಿಂದ ಇನ್‌ಫ್ಲೂಯೆನ್ಸ್ ಮಾಡಿಸಿ ಕಸ್ತೂರಿ ಛಾನೆಲ್‌ನಲ್ಲಿ ಬೆಳಬೆಳಗ್ಗೆ ಭವಿಷ್ಯ ಹೇಳುವ ಕಾಯಕವನ್ನು ಪ್ರಾರಂಭಿಸಿದ. ಹೀಗೆ ಟೀವಿಯಲ್ಲಿ ಜ್ಯೋತಿಷಿಯಾಗಿ ಅವತಾರವೆತ್ತಿದ ನರೇಂದ್ರ ಬಾಬು ಎಂಬ ಸೈಡ್ ಆಕ್ಟರ್ ಇವತ್ತು ಡಾಲರ್ಸ್ ಕಾಲೋನಿಯಲ್ಲಿ ಬಂಗಲೆ, ಓಡಾಡಲಿಕ್ಕೆ ಸಫಾರಿ ಕಾರು.. ಇತ್ಯಾದಿಗಳನ್ನು ಸಂಪಾದಿಸಿ ಆಡಂಬರದ ಜೀವನ ನಡೆಸುತ್ತಿದ್ದಾನೆ.

ಆರೆಸ್ಸೆಸ್ ಹುಳ

"ಒಂದು ಕಡೆಯಿಂದ ನಾನು ಶೃಂಗೇರಿ ಜಗದ್ಗುರು ಚಂದ್ರಶೇಖರ ಭಾರತಿ ಸ್ವಾಮಿಗಳ ಮರಿಮೊಮ್ಮಗ. ಹಾಗೆಯೇ ಇನ್ನೊಂದು ಕಡೆಯಿಂದ ಕಂಚಿ ಚಂದ್ರಶೇಖರ ಸರಸ್ವತಿಯವರ ಮೊಮ್ಮಗ ಕೂಡ. ಸರ್ ಎಂ.ವಿಶ್ವೇಶ್ವರಯ್ಯ ಕೂಡಾ ನಮ್ಮ ರಿಲೇಷನ್ನು'' ಎಂದು ಬಡಾಯಿಕೊಚ್ಚಿಕೊಳ್ಳುವ ನರೇಂದ್ರ ಬಾಬು ಶರ್ಮ ಈಗ್ಗೆ ಕೆಲ ವರ್ಷಗಳ ಹಿಂದೆ ಆರೆಸ್ಸೆಸ್‌ನ ಪುಡಿ ಕಾರ್ಯಕರ್ತನೂ ಆಗಿದ್ದ. ಸಿಕ್ಕಸಿಕ್ಕಲ್ಲೆಲ್ಲ ಹಿಂದೂ ಧರ್ಮವನ್ನು ಉಳಿಸಬೇಕು ಎಂದು ಅಂದು ಬಡಿದುಕೊಳ್ಳುತ್ತಿದ್ದ ಈ ಪಿಂಡದ ಪೂಜಾರಿ 'ಸಂಪೂರ್ಣ ಸನಾತನ ಧರ್ಮ ರಕ್ಷಣಾ ಸಮಿತಿ' ಮತ್ತು 'ಸಂಪೂರ್ಣ ವರಮಹಾಲಕ್ಷ್ಮಿ ಸಂಸ್ಥಾನ' ಎಂಬೆರಡು ಸಂಸ್ಥೆಗಳನ್ನು ಹೊಂದಿದ್ದಾನೆ. ಅಷ್ಟೇ ಅಲ್ಲ, ತನ್ನೆಲ್ಲಾ ಅಡ್ಡಕಸುಬುಗಳಿಗೆ ಆ ಸಂಸ್ಥೆಗಳನ್ನೇ ಬಳಸಿಕೊಳ್ಳುತ್ತಿದ್ದಾನೆ.

ಹರುಕು ಬಾಯಿ

ಮಹಿಳಾ ಪ್ರೇಕ್ಷಕರಿಗೆ ಮಂಕುಬೂದಿ ಎರಚಿರುವ ನರೇಂದ್ರ ಬಾಬು ಶರ್ಮ ಬಾಯಿಬಿಟ್ಟರೆ ಬೈಗುಳಗಳೇ ಉದುರುತ್ತವೆ. ಕಳೆದ ತಿಂಗಳು ಕಾರಣಾಂತರಗಳಿಂದ ಈತನ ಕಾರ್ಯಕ್ರಮದ ಪ್ರಸಾರ ಕಡಿತಗೊಂಡಿತ್ತು. ಆಗ ಈತ ಏನಂದಿದ್ದ ಗೊತ್ತೆ? "ನಮ್ಮ ಕಾರ್ಯಕ್ರಮದ ಪ್ರಸಾರದ ಸಂದರ್ಭದಲ್ಲಿ ಕೇಬಲ್ ಕಟ್ ಮಾಡುವ ಆಪರೇಟರ್‌ಗಳ ನರ ಕಟ್ ಆಗಲಿ'' ಎಂದು ಶಾಪ ಹಾಕಿದ್ದನಲ್ಲದೇ "ಅಂಥವರನ್ನು ಗನ್ ತೆಗೆದುಕೊಂಡು ಶೂಟ್ ಮಾಡ್ಬೇಕು...'' ಎಂದು ನೇರಪ್ರಸಾರದಲ್ಲೇ ಬಡಬಡಿಸಿದ್ದ. ಈ ಪ್ರಕರಣ ಯಾವ ಮಟ್ಟಕ್ಕೆ ಹೋಗಿತ್ತೆಂದರೆ, ಸುವರ್ಣ ವಾಹಿನಿಯನ್ನೇ ಆಫ್ ಮಾಡಲು ಆಪರೇಟರ್‌ಗಳು ಮುಂದಾಗಿದ್ದರು. ಆಗ ವಾಹಿನಿಯ ಮುಖ್ಯಸ್ಥ ಅನೂಪ್ ಚಂದ್ರಶೇಖರ್ ಮತ್ತು ವಿನೋದ್ ಅವರೇ ಕೇಬಲ್ ಆಪರೇಟರ್‌ಗಳ ಅಸೋಸಿಯೇಷನ್‌ಗೆ ಹೋಗಿ "ಇನ್ನು ಹದಿನೈದು ದಿನ ಟೈಂ ಕೊಡಿ. ಆತನಿಂದ ಕ್ಷಮೆ ಕೇಳಿಸುತ್ತೇವೆ'' ಎಂದು ಬೇಡಿಕೊಂಡಿದ್ದರು. ನರೇಂದ್ರ ಬಾಬು ತನ್ನ ಕಾರ್ಯಕ್ರಮದಲ್ಲಿ ಕೇಬಲ್ ಆಪರೇಟರುಗಳ ಕ್ಷಮೆ ಕೋರಿದ ನಂತರವೇ ಈ ವಿವಾದ ಶಮನಗೊಂಡಿದ್ದು.

'ನೇರ ದಿಟ್ಟ ನಿರಂತರ' ಕಟ್



ಅನೂಪ್ ಚಂದ್ರಶೇಖರ್

ಸುವರ್ಣ ವಾಹಿನಿಯ 'ನೇರ ದಿಟ್ಟ ನಿರಂತರ' ಎಂಬ ಧ್ಯೇಯವಾಕ್ಯಕ್ಕೆ ಅಕ್ಷರಶಃ ಕಟಿಬದ್ಧನಾಗಿ ವರ್ತಿಸುತ್ತಿರುವವನು ಈ ನರೇಂದ್ರ ಬಾಬು ಶರ್ಮ ಮಾತ್ರ! ಅವುಗಳ ಕೆಲ ಸ್ಯಾಂಪಲ್‌ಗಳು ಹೀಗಿವೆ: ಒಮ್ಮೆ ಕಾರ್ಯಕ್ರಮಕ್ಕೆ ಕರೆ ಮಾಡಿದ ಹೆಣ್ಣುಮಗಳೊಬ್ಬಳು "ನನ್ನ ಗಂಡನಿಂದ ಡೈವೋರ್ಸ್ ಆಗಿದೆ. ಆತ ನನ್ನ ಪಾಲಿನ ಆಸ್ತಿ ಕೊಡದೇ ಸತಾಯಿಸುತ್ತಿದ್ದಾನೆ. ಕೋರ್ಟು ಮೆಟ್ಟಿಲೇರಿದರೂ ನನ್ನ ಸಮಸ್ಯೆ ಪರಿಹಾರವಾಗಿಲ್ಲ'' ಎಂದಿದ್ದಳು. ಆಕೆ ಈತ ಸೂಚಿಸಿದ ಪರಿಹಾರವೇನು ಗೊತ್ತಾ? ಆಕೆ ತಮಿಳುನಾಡಿನಲ್ಲಿರುವ ದೇವಸ್ಥಾನವೊಂದಕ್ಕೆ ಹೋಗಿ ಪೂಜೆ ಸಲ್ಲಿಸಲು ಹೇಳಿದ ನರೇಂದ್ರ ಬಾಬು ಶರ್ಮ "ಆ ದೇವಸ್ಥಾನದಲ್ಲಿ ಕೊಡುವ ಬೂದಿಯನ್ನು ತಂದಿಟ್ಟುಕೊಂಡರೆ, ಜಡ್ಜ್ ಅಲ್ಲ, ಅವರಪ್ಪನೇ ಬಂದು ನಿನಗೆ ನ್ಯಾಯ ಒದಗಿಸುತ್ತಾನೆ..'' ಎಂದಿದ್ದ. ನ್ಯಾಯಾಲಯದ ಬಗ್ಗೆ ಹಾಗೆಲ್ಲ ಹಗುರವಾಗಿ ಮಾತನಾಡಬಾರದು ಎಂಬ ಕನಿಷ್ಠಮಟ್ಟದ ಅರಿವೂ ಈತನಿಗಿಲ್ಲ.

ಮತ್ತೊಂದು ಬಾರಿ ವ್ಯಕ್ತಿಯೊಬ್ಬ ಕರೆ ಮಾಡಿ ತನ್ನ ಮಗಳು ಯಾರನ್ನೋ ಪ್ರೀತಿಸುತ್ತಿದ್ದಾಳೆ ಎಂದ ಕೂಡಲೇ ಈ ಅವಿವೇಕಿ ನರೇಂದ್ರ ಬಾಬು "ನಿನ್ನ ಮಗಳು ಓಡಿಹೋದರೆ ಕಷ್ಟ, ಹುಷಾರು'' ಎಂದಿದ್ದ. ಇನ್ನೊಮ್ಮೆ ಯುವಕನೊಬ್ಬನಿಗೆ "ನೀನು ಕೈಕಾಲು ಊನವಾಗಿರುವ ಹುಡುಗಿಯನ್ನೇ ಮದುವೆಯಾಗಬೇಕು. ಒಂದು ವೇಳೆ ಚೆನ್ನಾಗಿರುವ ಹೆಣ್ಣಿನೊಂದಿಗೆ ನೀನು ಮದುವೆಯಾದರೆ ಇನ್ನೊಂದು ವರ್ಷದಲ್ಲಿ ನಿನಗೆ ಆಕ್ಸಿಡೆಂಟ್ ಆಗಿ ಕೈಕಾಲು ಊನವಾಗುತ್ತೆ...'' ಎಂದು ಹೇಳಿ ಗಾಬರಿ ಹುಟ್ಟಿಸಿದ್ದ. ಎಷ್ಟೋ ಬಾರಿ ವಿವಾಹವಾಗದ ಹೆಣ್ಣುಮಕ್ಕಳು ಕರೆ ಮಾಡಿದಾಗ "ನಿನಗೆ ಈ ಜನ್ಮದಲ್ಲಿ ಮದುವೆಯಾಗುವ ಯೋಗವೇ ಇಲ್ಲ'' ಎಂದು ಹೇಳಿ ಮೊದಲೇ ನೊಂದವರನ್ನು ಮತ್ತಷ್ಟು ಭೀತಿಗೊಳಿಸಿದ್ದಾನೆ. ಪ್ರತೀ ಸಂಚಿಕೆಯಲ್ಲೂ ಇಂತಹ ಹಲವಾರು ಅವಾಂತರಗಳನ್ನೇ ಸೃಷ್ಟಿಸುವ ನರೇಂದ್ರ ಬಾಬು ಶರ್ಮನ ಕಿತಾಪತಿಗಳನ್ನು ಹೇಳುತ್ತಾ ಹೋದರೆ ಅದು ಬೃಹತ್ ಕೃತಿಯೇ ಆದೀತು.

ನರೇಂದ್ರ ಬಾಬು ಶರ್ಮನ ಎಲುಬಿಲ್ಲದ ನಾಲಗೆಗೆ ಹೆದರಿದ ಸುವರ್ಣ ವಾಹಿನಿಯವರು 'ಈ ಕಾರ್ಯಕ್ರಮಕ್ಕೂ ವಾಹಿನಿಗೂ ಸಂಬಂಧವಿಲ್ಲ, ಎಲ್ಲದಕ್ಕೂ ನರೇಂದ್ರ ಬಾಬು ಶರ್ಮರೇ ಜವಾಬ್ದಾರಿ' ಎಂಬ ಬರಹವನ್ನು ಕಾರ್ಯಕ್ರಮದ ಆರಂಭದಲ್ಲೇ ತೋರಿಸುತ್ತಿದ್ದಾರೆ. ಮಾತ್ರವಲ್ಲ, ಈತನ ನೇರಪ್ರಸಾರದ ಕಾರ್ಯಕ್ರಮವನ್ನು ರದ್ದು ಮಾಡಿ, ಶರ್ಮನ 'ನೇರ ದಿಟ್ಟ ನಿರಂತರ' ಮಾತುಗಳಿಗೆ ಕಡಿವಾಣ ಹಾಕಿದ್ದಾರೆ.

ಮೊನ್ನೆ ಈ ಶರ್ಮಾ ಮತ್ತೊಂದು ಎಡವಟ್ಟು ಮಾಡಿದ. ಅಂದು "ಇಸ್ಕಾನ್‌ನವರು ಬಡ ಮಕ್ಕಳನ್ನು ತೋರಿಸಿ ದುಡ್ಡು ಮಾಡುತ್ತಿದ್ದಾರೆ'' ಎಂದು ತನ್ನ ಕಾರ್ಯಕ್ರಮದಲ್ಲಿ ಹೇಳಿದ. ಅದು ನಿಜವೇ ಆಗಿದ್ದರೂ ಅದರ ಹಿಂದೆ ಈ ನರೇಂದ್ರ ಬಾಬು ಶರ್ಮಾನ ದುರುದ್ದೇಶವೂ ಇತ್ತು. ಈತ ಹುಟ್ಟುಹಾಕಿರುವ 'ಸಂಪೂರ್ಣ ಸನಾತನ ಧರ್ಮ ರಕ್ಷಣಾ ಸಮಿತಿ' ಎಂಬ ಸಂಸ್ಥೆಯ ಮೂಲಕ ಐದು ಸಾವಿರ ಮಕ್ಕಳನ್ನು ದತ್ತು ತೆಗೆದುಕೊಂಡು ಅವರ ವಿದ್ಯಾಭ್ಯಾಸ ಮತ್ತು ಆರೈಕೆ ಮಾಡುತ್ತಿದ್ದಾನಂತೆ. ಹಾಗೆಯೇ ಕುಶಾಲನಗರದ ಬಳಿ ಅನಾಥಾಶ್ರಮ ಮತ್ತು ವೃದ್ಧಾಶ್ರಮವನ್ನೂ ನಡೆಸುತ್ತಿದ್ದಾನಂತೆ. ಇಸ್ಕಾನ್‌ಗೆ ದೊರೆಯುತ್ತಿರುವ ಸವಲತ್ತು ಮತ್ತು ಪ್ರಚಾರ ತನಗೆ ಸಿಗುತ್ತಿಲ್ಲ ಎಂಬ ಅಸೂಯೆ ಈ ಶರ್ಮನದ್ದು. ಆ ಕಾರಣಕ್ಕಾಗಿಯೇ ಈತ ಇಸ್ಕಾನ್ ವಿರುದ್ಧ ಮಾತಾಡಿದ್ದನೇ ಹೊರತು ಯಾವ ಸಾಮಾಜಿಕ ಕಾಳಜಿಯಿಂದಲ್ಲ. ಈಗ ಇಸ್ಕಾನ್ ಸಂಸ್ಥೆಯ ಧರ್ಮಾಧಿಕಾರಿಗಳು ಈಗ ನರೇಂದ್ರ ಬಾಬು ಶರ್ಮನ ವಿರುದ್ಧ ಕೇಸು ಜಡಿಯಲು ತೀರ್ಮಾನಿಸಿದ್ದಾರಂತೆ. ಒಟ್ಟಾರೆಯಾಗಿ ಮಕ್ಕಳ ಹೆಸರಲ್ಲಿ ಅಪಾರ ಹಣ ಮಾಡುತ್ತಿರುವ ಇಸ್ಕಾನ್ ಜೊತೆ ಮತ್ತೊಬ್ಬ ಗೋಲ್‌ಮಾಲ್ ವೀರ ಶರ್ಮಾ ವಾದಕ್ಕಿಳಿದಿರುವುದು ಕಾಮಿಡಿ ಶೋದಂತೆ ಕಾಣುತ್ತಿದೆ.

ನರೇಂದ್ರ ಬಾಬು ಶರ್ಮನ ಎಲ್ಲ ತರಲೆ ತಪರಾಕಿಗಳಿಂದ ಸುವರ್ಣ ವಾಹಿನಿಯವರು ಭ್ರಮನಿರಸನಗೊಂಡಿದ್ದರೂ ಈತನ ಕಾರ್ಯಕ್ರಮಕ್ಕೆ ಯಥೇಚ್ಛವಾದ ಟಿಆರ್‌ಪಿ ಇರುವುದರಿಂದ ಈತನ ಎಲ್ಲ ಚೇಷ್ಟೆಗಳನ್ನೂ ಸಹಿಸಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿದ್ದಾರೆ. ಟಿವಿ ಚಾನೆಲ್‌ಗಳು ಪೈಪೋಟಿಗೆ ಬಿದ್ದು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ನರೇಂದ್ರ ಬಾಬು ಶರ್ಮಾನಂಥ ಭೋಂಗು ವ್ಯಕ್ತಿಗಳನ್ನು ಅವಲಂಬಿಸಿರುವುದು ಅವರ ದುರಂತವಲ್ಲದೆ ಮತ್ತಿನ್ನೇನು?

● ಅರುಣ್‌ಕುಮಾರ್ ಜಿ.

ಕಸ್ತೂರಿಯಿಂದ ಕಾಲುಕಿತ್ತ...



ಮೊದಲಿಗೆ ಕಸ್ತೂರಿ ವಾಹಿನಿಯಲ್ಲಿ ತನ್ನ 'ಅಂಡ ಪಿಂಡ ಬ್ರಹ್ಮಾಂಡ' ಶಾಸ್ತ್ರದ ಕಸುಬು ಆರಂಭಿಸಿದ ನರೇಂದ್ರ ಬಾಬು ಶರ್ಮನನ್ನು ಅನಿತಾ ಕುಮಾರಸ್ವಾಮಿ ಉಗಿದು ಹೊರ ಅಟ್ಟಿದ್ದರು. ನಂತರ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿ ಕರೆದ ಈ ಶರ್ಮಾ "ಕಸ್ತೂರಿ ವಾಹಿನಿಯವರು ನನಗೆ ಪೇಮೆಂಟ್ ಕೊಟ್ಟಿಲ್ಲ'' ಎಂದು ಲಬೊ ಲಬೊ ಬಾಯಿಬಡಿದುಕೊಂಡಿದ್ದ.

ಊರಿಗೆಲ್ಲ ಭವಿಷ್ಯ ಹೇಳುವ ಈ ಬುರುಡೆ ಪಂಡಿತನಿಗೆ ತನಗೆ 'ಕಸ್ತೂರಿ'ಯವರು ಕಾಸು ಕೊಡುವುದಿಲ್ಲ ಎಂಬ ಸೂಚನೆ ಮೊದಲೇ ಇರಲಿಲ್ಲವೆಂದರೆ ಇವನು ನುಡಿಯುವ ಭವಿಷ್ಯ ಇನ್ನೆಷ್ಟು ನಿಜವಿದ್ದೀತು?!

ಹಿಂದೆ ಶ್ರೀಧರ ಭಟ್ಟಾಚಾರಿ ಎಂಬ ಮತ್ತೊಬ್ಬ ವಂಚಕ ಜ್ಯೋತಿಷಿ ಸುವರ್ಣ ವಾಹಿನಿಗೆ ಅಟಕಾಯಿಸಿಕೊಂಡು ಜನರನ್ನು ಯಾಮಾರಿಸುತ್ತಿದ್ದ. ಆತನ ಚರಿತ್ರೆಯನ್ನು 'ಲಂಕೇಶ್' ಬೆಳಕಿಗೆ ಚೆಲ್ಲಿದ ನಂತರ ಭಟ್ಟಾಚಾರಿಯನ್ನು ಸುವರ್ಣ ಹೊರದಬ್ಬಿತು. ಆದರೆ ಭಟ್ಟಾಚಾರಿ ಖಾಲಿ ಮಾಡಿದ್ದ ಜಾಗವನ್ನು ಈ ದಢೂತಿ ಶರ್ಮಾ ತುಂಬಿದ. ಈಗ ಶರ್ಮಾ ಎಂಬ ಬುರುಡೆ ಬಸವ ಭಟ್ಟಾಚಾರಿಯನ್ನೂ ಮೀರಿಸುವಂತೆ ಮಾರಕವಾಗಿ ಬೆಳೆದುನಿಂತಿದ್ದಾನೆ. ●



ಕ್ರಿಕೆಟ್ ಬೆಟ್ಟಿಂಗ್ ಜಾಲ


ಮೈಸೂರಿನ ಜುಗಾರಿ ದೊರೆಗಳು

ಅದೂ ಭಾರತ ಮತ್ತು ಪಾಕಿಸ್ತಾನದ ವಿರುದ್ಧದ ಮ್ಯಾಚ್ ಆಗಿರಲಿಲ್ಲ. ಅಕ್ಟೋಬರ್ ಮೂರರಂದು ಪಾಕಿಸ್ತಾನದ ವಿರುದ್ಧ ನ್ಯೂಜಿಲ್ಯಾಂಡ್‌ನ ಸೆಮಿಫೈನಲ್ ಮ್ಯಾಚಿತ್ತಲ್ಲ; ಯಾವುದೋ ದೇಶಗಳು ಕ್ರಿಕೆಟ್ ಆಡುತ್ತಿದ್ದರೆ ಇತ್ತ ಮೈಸೂರಿನಲ್ಲಿ ಕೇವಲ ಎರಡೆ ಎರಡು ಗಂಟೆಯಲ್ಲಿ ಮೂವತ್ತೇಳೂವರೆ ಲಕ್ಷ ರೂಪಾಯಿಗಳ ಬೆಟ್ಟಿಂಗ್ ನಡೆದುಹೋಗಿತ್ತು. ಬಹುಶಃ ಬೆಂಗಳೂರಿನ ಕೆಲ ಪಂಟರ್‌ಗಳೂ ಮೈಸೂರಿನ ಬುಕ್ಕಿಗಳ ಬಳಿ ಬೆಟ್ ಮಾಡಿರಬಹುದು. ಆ ಮಟ್ಟದ ಕ್ರಿಕೆಟ್ ಬೆಟ್ಟಿಂಗ್ ಜಾಲ ಮೈಸೂರಿನಲ್ಲಿ ಬೇರು ಬಿಟ್ಟಿತ್ತೆಂದರೆ ಇನ್ನು ಭಾರತದ ಮ್ಯಾಚುಗಳಿಗೆ ಇನ್ನೆಂಥ ಬೆಟ್ಟಿಂಗ್ ನಡೆಯಬೇಡ?


ಕೇವಲ ಮೈಸೂರಿಗಷ್ಟೇ ಅಲ್ಲ, ಬೆಂಗಳೂರಿಗೆ ಹೋಲಿಸಿದರೂ ಇದು ದೊಡ್ಡ ಬೇಟೆಯೇ!

ಒಂದೂವರೆ ಡಜನ್ ಕ್ರಿಕೆಟ್ ಬುಕ್ಕಿಗಳನ್ನು ಒಂದೇ ಏಟಿಗೆ ಹಿಡಿದು ಹಾಕಿದ್ದಾರೆ ಮೈಸೂರಿನ ಪೊಲೀಸ್ ಕಮೀಷನರ್ ಸುನೀಲ್ ಅಗರ್‌ವಾಲ್. ಕ್ರಿಕೆಟ್ ಬೆಟ್ಟಿಂಗ್ ಎಂಬುದು ಈ ಮಟ್ಟದ ಬೃಹತ್ ಜುಗಾರಿಯೆಂದಾಗಲಿ, ಮೈಸೂರಿನಂಥ ಊರೊಂದರಲ್ಲಿ ಅದಕ್ಕೆ ಇಷ್ಟೊಂದು ಆಳವಾದ ಬೇರುಗಳಿವೆ ಎಂಬುದಾಗಲಿ ಯಾರಿಗೆ ಗೊತ್ತಿತ್ತು?

ಅಕ್ಟೋಬರ್ ಮೂರರಂದು ಸಂಜೆ ಮೈಸೂರು ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದ ಕ್ರಿಕೆಟ್ ಬುಕ್ಕಿಗಳ ಒಟ್ಟು ಸಂಖ್ಯೆಯೇ ಹದಿನೆಂಟು. ಹುಣಸೂರು ರಸ್ತೆಯ ಪ್ರತಿಷ್ಠಿತ ಹೋಟೆಲ್‌ಗಳಾದ ಗ್ರ್ಯಾಂಡ್ ಮೌರ್ಯ ಮತ್ತು ಮೋನಾರ್ಕ್‌ನಲ್ಲಿ



ಎರಡೆರಡು ರೂಮುಗಳನ್ನು ಹಿಡಿದು ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ಬುಕ್ಕಿಗಳ ತಾಕತ್ತೆಷ್ಟಿತ್ತೆಂದರೆ; ಒಂದಲ್ಲ ಎರಡಲ್ಲ ಒಟ್ಟು ನೂರಾ ಹನ್ನೆರಡು ಮೊಬೈಲುಗಳನ್ನು ಬಾಜಿಗೆ ಬಳಸಲಾಗಿತ್ತು. ಹನ್ನೊಂದು ಲ್ಯಾಂಡ್‌ಫೋನ್‌ಗಳು, ಏಳು ಲ್ಯಾಪ್‌ಟಾಪ್‌ಗಳು, ನಾಲ್ಕು ಪ್ರಿಂಟರ್‌ಗಳು, ಹನ್ನೆರಡು ಟೇಪ್‌ರೆಕಾರ್ಡರ್‌ಗಳು, ಮೂರು ವಾಯ್ಸ್ ರೆಕಾರ್ಡರ್‌ಗಳು, ಮೂವತ್ತೊಂದು ಲಕ್ಷ ರೂಪಾಯಿ ನಗದು, ಒಂಬತ್ತು ಮೋಟಾರ್ ಬೈಕ್‌ಗಳು, ಒಂದು ಮಾರುತಿ ಕಾರು; ಇವಿಷ್ಟೂ ಕ್ರಿಕೆಟ್ ಬುಕ್ಕಿಗಳಿಂದ ಮೈಸೂರು ಪೊಲೀಸರು ಜಪ್ತಿ ಮಾಡಿಕೊಂಡ ಸರಂಜಾಮುಗಳು!



ಅದೂ ಭಾರತ ಮತ್ತು ಪಾಕಿಸ್ತಾನದ ವಿರುದ್ಧದ ಮ್ಯಾಚ್ ಆಗಿರಲಿಲ್ಲ. ಅಕ್ಟೋಬರ್ ಮೂರರಂದು ಪಾಕಿಸ್ತಾನದ ವಿರುದ್ಧ ನ್ಯೂಜಿಲ್ಯಾಂಡ್‌ನ ಸೆಮಿಫೈನಲ್ ಮ್ಯಾಚಿತ್ತಲ್ಲ; ಯಾವುದೋ ದೇಶಗಳು ಕ್ರಿಕೆಟ್ ಆಡುತ್ತಿದ್ದರೆ ಇತ್ತ ಮೈಸೂರಿನಲ್ಲಿ ಕೇವಲ ಎರಡೆ ಎರಡು ಗಂಟೆಯಲ್ಲಿ ಮೂವತ್ತೇಳೂವರೆ ಲಕ್ಷ ರೂಪಾಯಿಗಳ ಬೆಟ್ಟಿಂಗ್ ನಡೆದುಹೋಗಿತ್ತು. ಬಹುಶಃ ಬೆಂಗಳೂರಿನ ಕೆಲ ಪಂಟರ್‌ಗಳೂ ಮೈಸೂರಿನ ಬುಕ್ಕಿಗಳ ಬಳಿ ಬೆಟ್ ಮಾಡಿರಬಹುದು. ಆ ಮಟ್ಟದ ಕ್ರಿಕೆಟ್ ಬೆಟ್ಟಿಂಗ್ ಜಾಲ ಮೈಸೂರಿನಲ್ಲಿ ಬೇರು ಬಿಟ್ಟಿತ್ತೆಂದರೆ ಇನ್ನು ಭಾರತದ ಮ್ಯಾಚುಗಳಿಗೆ ಇನ್ನೆಂಥ ಬೆಟ್ಟಿಂಗ್ ನಡೆಯಬೇಡ?

ಇಂತಹದೊಂದು ಶಕ್ತಿಶಾಲಿ ಬೆಟ್ಟಿಂಗ್ ಜಾಲದ ಅಧಿಪತಿಯ ಹೆಸರು ತುಳಸಿರಾಮ್ ಭಾಗ್ರೆ. ಮೂಲತಃ ಮುಂಬಯಿಯ ಸಿಂಧಿಯಾದ ತುಳಸಿಯ ಮಗ ಕುನಾಲ್ ಸದ್ಯ ಪೊಲೀಸರಿಗೆ ಸಿಕ್ಕು ಬಿದ್ದಿದ್ದನಾದರೂ ಅಪ್ಪ ಮಾತ್ರ ಈತನಕ ಸಿಕ್ಕಿಲ್ಲ. ತುಳಸೀರಾಮ್ ಭಾಗ್ರೆಯ ಇಡೀ ಬೆಟ್ಟಿಂಗ್ ಪಡೆಯನ್ನೇ ಮೈಸೂರು ಪೊಲೀಸರು ಹಿಡಿದುಹಾಕಿದ್ದಾರೆ. ಮೈಸೂರಿನ ಗೋಕುಲಂ ಮೂರನೇ ಸ್ಟೇಜ್‌ನ ಜಯರಾಂ, ಎನ್ನಾರ್ ಮೊಹಲ್ಲಾದ ಓಂಪ್ರಕಾಶ್ ಉರ್ಫ್ ಪ್ರಕಾಶ್, ನಜರ್‌ಬಾದ್‌ನ ರಾಜೀವ್‌ಕುಮಾರ್ ಅಗರ್‌ವಾಲ್ ಸಿದ್ಧಾರ್ಥ ಲೇಔಟಿನ ಅಶೋಕ್ ಇತ್ಯಾದಿ ಐದು ತಂ[ಡ] ಮೂಲಕ (ಮಗ ಕುನಾಲ್ ಸೇರಿದಂತೆ) ತುಳಸಿ ಬೆಟ್ಟಿ[ಂಗ್] ನಡೆಸುತ್ತಿದ್ದ.

ಇಂಥ ಐವರು ಗ್ಯಾಂಗ್ ಲೀಡರುಗಳ ಕೈಕೆಳಗ[ೆ] ಸರಸ್ವತಿಪುರದ ಕಿರಣ್, ಉದಯಗಿರಿ ಎಸ್‌ಬಿಎಂ ಕಾಲೋನಿಯ ಸಂಜಯ್, ಎನ್ನಾರ್ ಮೊಹಲ್ಲಾದ ಸುರೇಶ್, ತಿಲಕನಗರದ ರಾಜೇಂದ್ರ, ಗೋಕುಲಂ ಮೂರನೇ ಸ್ಟೇಜ್‌ನ ಸಂಪತ್‌ಕುಮಾರ್, ನಾಯ್ಡು ನಗರದ ಆದಿಲ್, ವಿಶ್ವನಾಥ್, ಕುವೆಂಪುನಗರದ ಶ್ರೀನಿವಾಸ್, ಸಿದ್ಧಾರ್ಥ ಲೇಔಟ್‌ನ ಚಂದನ್ ಮ[ತ್ತು] ಕನ್ನಯ್ಯ ಲಾಲ್, ಬನ್ನಿಮಂಟಪದ ಗುರು, ಸಿದ್ಧಾರ್ಥನಗರದ ಚಂದ್ರಭಾನು, ವಿಜಿತ್ ಮುಂತಾದ ಏಜೆಂಟರ ಬೃಹತ್ ಜಾಲವೇ ಇತ್ತು. ಸದ್ಯ ಬೆಟ್ಟಿಂಗ್ ದೊರೆ ತುಳಸಿಭಾಗ್ರೆಯ ಜೊತೆ ಪ್ರಕಾಶ್ ಭತಿಜಾ, ಸಿದ್ಧಾರ್ಥ ಲೇಔಟಿನ ಮಹೇಂದರ್ ಮತ್ತು ಶಶಿಭಾಯಿ ತಲೆಮರೆಸಿಕೊಂಡಿದ್ದಾರೆ. ಬಹುತೇಕ ಕ್ರಿಕೆಟ್ ಬೆಟ್ಟಿಂಗ್ ಜಾಲವನ್ನು ಪೊಲೀಸರು ಲಾಕಪ್ಪಿಗೆ ತಳ್ಳಿದ್ದಾರೆ.

ಹಾಗಂತ ಮೈಸೂರಿನ ಕ್ರಿಕೆಟ್ ಬೆಟ್ಟಿಂಗ್ ದ[ಂಧೆ] ನಿಕಾಲಿಯಾಯಿತೆಂದಾಗಲೀ, ಇಲ್ಲಿಗೇ ಅ[...] ಮುಗಿಯಿತೆಂದಾಗಲೀ ಅರ್ಥವಲ್ಲ. ಕಳೆದ ಐ[...] ವರ್ಷಗಳಿಂದ ನಿರಂತರವಾಗಿ ಮೈಸೂರಿನಲ್ಲಿ ಕ್ರಿಕೆ[ಟ್] ಜುಗಾರಿ ನಡೆದೇ ಇತ್ತು. ಇತ್ತ ಬೆಂಗಳೂರಿನಲ್ಲಿ ಜ[...] ಕಮೀಷನರ್ ಅಲೋಕ್‌ಕುಮಾರ್ ಪಡೆ ಸಿಕ್ಕ ಸಿಕ್ಕ ಕ್ರಿಕೆ[ಟ್] ಬುಕ್ಕಿಗಳನ್ನು ಹಿಡಿದು ಜೈಲಿಗೆ ದಬ್ಬುತ್ತಿದ್ದ[...] ಮೈಸೂರಿನಲ್ಲದು ಯಾವು[...] ಅಳುಕಿಲ್ಲದೇ ಬೆಳೆದು ನಿಂತಿ[...] ಅದರ ದೊರೆ ತುಳಸೀರಾ[ಮ್] ಭಾಗ್ರೆ ಮೂಲ[ತಃ] ಮುಂಬಯಿಯವನು. ಈ[...] ತಂಡದಲ್ಲಿದ್ದ ಬಹುತೇಕರ[ು] ಮುಂಬಯಿ ಮೂಲ[ದ] ಮಾರ್ವಾಡಿಗಳೇ.


ಹೇಗೆ ಕುದುರೆ ರೇ[ಸ್] ಮಟಕಾ, ಲಾಟರಿ ನಡೆಯುತ್ತ[...] ಅದಕ್ಕಿಂತಲೂ ದೊಡ್ಡಮಟ್ಟದಲ್ಲಿ ನಡೆಯುವುದು ಕ್ರಿಕೆ[ಟ್] ಜುಗಾರಿ. ಅದಕ್ಕೆ ಭಾರತ ತಂಡದ ಮ್ಯಾಚೇ ಇರಬೇಕೆಂದಿ[...] ವರ್ಷದುದ್ದಕ್ಕೂ ಪ್ರಪಂಚದ ಯಾವ್ಯಾವುದೋ ದೇಶ[ಗಳ] ನಡುವೆ ನಡೆಯುವ ಯಾವುದೇ ಕ್ರಿಕೆಟ್ ಮ್ಯಾಚಾದರ[ೂ] ಸಾಕು ಮೈಸೂರಿನ ಬುಕ್ಕಿಗಳ ಪಾಲಿಗದು ಜುಗ[ಾರಿ] ಹಬ್ಬವಿದ್ದಂತೆ. ಐಷಾರಾಮಿ ಹೋಟೆಲ್‌ಗಳಲ್ಲಿ ಎರಡೆರ[ಡು] ರೂಮು ಹಾಕುತ್ತಾರೆ. ಇಲ್ಲಿ ರೇಸ್ ಪಂಟರುಗಳ[...] ಕ್ರಿಕೆಟ್ ಪಂಟರುಗಳದ್ದೇ ನಿಗೂಢ ಜಾಲವಿದೆ. ಇಂ[...] ದಿನ ಇಂತಿಂಥ ದೇಶಗಳ ನಡುವಿನ ಕ್ರಿಕೆಟ್ ಮ್ಯಾ[ಚ್] ಬೆಟ್ಟಿಂಗ್ ಶುರುವಾಗುತ್ತದೆಯೆಂಬ ಮಾಹಿತಿ ಸಂಬಂಧಪ[ಟ್ಟ] ಎಲ್ಲರಿಗೂ ಮೊದಲೇ ರವಾನೆಯಾಗುತ್ತದೆ. ಯಾ[...] ಬೆಟ್ಟಿಂಗ್‌ನಲ್ಲಿ ಭಾಗವಹಿಸುತ್ತಾರೆಂಬ ಬಗ್ಗೆ ಬುಕ್ಕಿಗಳ[ಿಗೆ] ಮೊದಲೇ ತಿಳಿವಳಿಕೆಯಿರುತ್ತದೆ. ಅಂತಹವರ ಮೊಬೈ[ಲ್] ನಂಬರ್ ಕೂಡ ಲ್ಯಾಪ್‌ಟಾಪ್‌ನಲ್ಲಿ ದಾಖಲಾಗಿರುತ್ತ[ದೆ].

ಮ್ಯಾಚ್ ಶುರುವಾಗುತ್ತಿದ್ದಂತೆ ಅಸಂಖ್ಯಾ[ತ] ಮೊಬೈಲ್‌ಗಳಿಂದ ಕರೆ ಬರುತ್ತದೆ. ಹೀಗೆ ಬಂದ ಕರೆಯ[...] ಸ್ವೀಕರಿಸಿ ಅದರ ಬೆಟ್ಟಿಂಗ್ ವಿವರಗಳನ್ನು ಕಂಪ್ಯೂಟರ್‌ನ[...]

▶▶▶

ರಾಮದಾಸ್ ಕೋಟೆಗೆ ಆರ್ಕೆಸ್ಟ್ರಾ ಮಂಜನ ಲಗ್ಗೆ





ಕಳೆದ ಐದಾರು ವರ್ಷಗಳಿಂದ ರಾಜಾರೋಷವಾಗಿ ನಡೆಯುತ್ತಿದ್ದ ಮೈಸೂರಿನ ಕ್ರಿಕೆಟ್ ಬೆಟ್ಟಿಂಗ್ ಖದೀಮರ ಪೈಕಿ ಬಹುತೇಕರೆಲ್ಲ ಲೋಕಲ್ ಬಿಜೆಪಿ ಎಲಿಮೆಂಟುಗಳೆ. ಕಳೆದ ಚುನಾವಣೆಯಲ್ಲಿ ಇದೇ ಬೆಟ್ಟಿಂಗ್ ದೊರೆ ಭಾಗ್ರೆ ಗ್ಯಾಂಗ್ ಕೃಷ್ಣರಾಜ ಕ್ಷೇತ್ರದಲ್ಲಿ ಬಿಜೆಪಿ ಶಾಸಕ ರಾಮದಾಸ್‌ಗೆ ಫೈನಾನ್ಸ್ ಮಾಡಿತ್ತು. ಭಾಗ್ರೆ ಗ್ಯಾಂಗಿನ ಬೆಟ್ಟಿಂಗ್ ಕಲಿಗಳಾದ ಪ್ರಕಾಶ್ ಭತಿಜಾ, ಕುನಾಲ್, ರಾಜೇಂದ್ರಕುಮಾರ್ ಅಗರ್‌ವಾಲ್, ಶಶಿಭಾಯಿ ಮುಂತಾದವರೆಲ್ಲ ಬಿಜೆಪಿ ಬಾವುಟ ಹೊತ್ತು ರಾಮದಾಸ್ ಗೆಲುವಿಗೆ ಹೆಣಗಾಡಿದವರೆ.

ಸದ್ಯ ಮೈಸೂರಿನಲ್ಲಿ ಹೊಗೆಯಾಡುತ್ತಿರುವ ವದಂತಿಯೇನೆಂದರೆ ಜಿಲ್ಲಾ ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ರಾಮದಾಸ್ ತೊಡೆ ತಟ್ಟಿದ್ದರಿಂದಾಗಿಯೇ ಜಿದ್ದಿಗೆ ಬಿದ್ದ ಶೋಭಕ್ಕ ಬೆಟ್ಟಿಂಗ್ ದಂಧೆಕೋರರ ಬುಡಕ್ಕೆ ಕೊಳ್ಳಿಯಿಟ್ಟಿದ್ದಾರೆ. ಆ ಮೂಲಕ ರಾಮದಾಸ್ ಬಾಲ ಕತ್ತರಿಸುವುದು ಶೋಭಾ ನಿಷ್ಠುರ ಹುನ್ನಾರವಂತೆ. ಹೀಗೆ ರಾಮದಾಸ್ ಪೋಷಿತ ಬೆಟ್ಟಿಂಗ್ ಖದೀಮರ ಬಗ್ಗೆ ಪೊಲೀಸರಿಗೆ ಮಾಹಿತಿ ಕೊಟ್ಟಿದ್ದು ಲೋಕಲ್ ಬಿಜೆಪಿಯ ಮತ್ತೊಬ್ಬ ಪಂಟರ್ ಬಿ.ಸಿ. ಮಂಜುನಾಥ್ ಅಲಿಯಾಸ್ ಆರ್ಕೆಸ್ಟ್ರಾ ಮಂಜ ಎಂಬುದೂ ಮತ್ತೊಂದು ರೂಮರ್.

ಆರ್ಕೆಸ್ಟ್ರಾ ಮಂಜನನ್ನು ರಾಮದಾಸ್ ವಿರುದ್ಧ ಎತ್ತಿಕಟ್ಟಿ ಬೆಳೆಸುತ್ತಿರುವ ಕರಂದ್ಲಾಜೆಯ ಸೂಚನೆ ಮೇರೆಗೇ ಪೊಲೀಸ್ ರೇಡಾಗಿದೆಯಂತೆ. ಸದ್ಯ ಬೆಟ್ಟಿಂಗ್ ದೊರೆಗಳ್ಯಾರೂ ಮಾಮೂಲಿನಂತೆ ರಾಮದಾಸ್ ಮೂಲಕ ಆಪರೇಟ್ ಮಾಡುತ್ತಿಲ್ಲ. ರಾಮದಾಸ್ ನೆಚ್ಚಿಕೊಂಡರೆ ಅದು ತಮಗೇ ಉಲ್ಟಾ ಹೊಡೆಯುತ್ತದೆಯೆಂಬುದು ಗೊತ್ತಾಗಿಯೇ ಭಾಗ್ರೆ ಪಟಾಲಮ್ ಆರ್ಕೆಸ್ಟ್ರಾ ಮಂಜನನ್ನು ಓಲೈಸುತ್ತಿದೆ. ಮಂಜನ ಮನೆಯಿರುವ ಸಿದ್ಧಾರ್ಥ ಲೇಔಟಿನಲ್ಲೇ ಬೆಟ್ಟಿಂಗ್ ದೊರೆ ಭಾಗ್ರೆಯ ಬಂಗಲೆ ಬೇರೆ ಏಳುತ್ತಿದೆ.

ಬಿಜೆಪಿಯ ಕಚ್ಚಾಟದಲ್ಲೇ ಹುಟ್ಟಿಕೊಂಡ ಬೆಟ್ಟಿಂಗ್ ಖದೀಮರ ಸಂಕಟಗಳಿಗೆ ಬಿಜೆಪಿಯಲ್ಲೇ ಪರಿಹಾರ ಸಿಕ್ಕರೆ ಅದು ಮೈಸೂರಿನ ದುರಂತವಲ್ಲದೇ ಮತ್ತೇನು?

...ಯೇ ನಿಷ್ಠ ಸಿಬ್ಬಂದಿಯಿರುತ್ತಾರೆ. ಬೆಟ್ಟಿಂಗ್‌ನಲ್ಲೂ ...ರಿಯ ವೆರೈಟಿಗಳಿವೆ. ಅದನ್ನು ಆನ್‌ಲೈನ್ ...ಎನ್ನುತ್ತಾರೆ. ಇಂಥದ್ದೇ ತಂಡ ಗೆಲ್ಲುತ್ತದೆ ಎಂಬುದು ...ತಿಯ ಬೆಟ್ಟಿಂಗಾದರೆ, ಪಂದ್ಯದ ಪ್ರತಿ ಓವರಿಗೂ ...ದು ಬಾಲಿಗೂ ಚಿತ್ರವಿಚಿತ್ರ ಬೆಟ್ಟಿಂಗುಗಳಿವೆ. ...ವ ಬಾಲಿಗೆ ಇಂಥ ಬ್ಯಾಟ್ಸ್‌ಮನ್ ಬೌಂಡರಿ ...ತ್ತಾನಾ? ಸಿಕ್ಸರ್ ಹೊಡೆಯುತ್ತಾನಾ? ಅಥವಾ ...ಗುತ್ತಾನಾ? ಎಂಬುದರಿಂದ ಹಿಡಿದು ಇಂಥ ...ನ್ ಐವತ್ತು ರನ್ ಬಾರಿಸುತ್ತಾನಾ? ಸೆಂಚುರಿ ...ಸುತ್ತಾನಾ? ಇಂಥ ತಂಡದ ಒಟ್ಟು ಮೊತ್ತ ಎಷ್ಟಾಗ ...?? ಎಷ್ಟು ರನ್ನುಗಳೊಳಗೆ ಔಟಾಗಬಹುದು? ...ಪ್ರತಿಯೊಂದು ವಿಷಯಕ್ಕೂ ಬಾಜಿ ಕಟ್ಟುವವರಿರು... ಕರೆಯನ್ನೂ ವ್ಯವಸ್ಥಿತವಾಗಿ ರೆಕಾರ್ಡ್ ಮಾಡ... ಕೇವಲ ಬಾಯಿಮಾತಿನ ಆಧಾರದ ಮೇಲೆಯೇ ...ಮಾಡಲಾಗುತ್ತದೆ. ಕೇವಲ ಬಾಯಿಮಾತಿನ ಮೇಲೆಯೇ ಬೆಟ್ಟಿಂಗ್ ನಡೆಯುತ್ತದೆ. ಒಮ್ಮೆ ...ಟ್ಟು ಬೆಟ್ ಮಾಡಿದವನು ಯಾವುದೇ ... ಮಾತು ತಪ್ಪುವಂತಿಲ್ಲ. ಹಾಗೆ ಕರೆ ನೀಡಿ ...ಮಾಡಿದವನ ಬೆಟ್ಟಿಂಗ್ ಹಣವನ್ನು ಆತನಿದ್ದಲ್ಲಿಗೆ ...ಲೆಕ್ಟ್ ಮಾಡಲು ಹುಡುಗರು ರೆಡಿಯಾಗಿರುತ್ತಾರೆ. ...ಚ್ ಮುಗಿದ ಮೇಲೆ ಅಷ್ಟೇ ವ್ಯವಸ್ಥಿತವಾಗಿ ...ತಲುಪಿಸುತ್ತಾರೆ. ವಸೂಲಿಯಲ್ಲೂ ಅಷ್ಟೇ ...ಯುತ್ತಾರೆ. ಪಕ್ಕಾ ಮುಂಬಯಿ ಅಂಡರ್‌ವರ್ಲ್ಡ್ ...ಲ್ಲೇ ನಡೆಯುವ ಕ್ರಿಕೆಟ್ ಬೆಟ್ಟಿಂಗ್ ದಂಧೆಯನ್ನು ...ು ವ್ಯವಸ್ಥಿತವಾಗಿ ಮೈಸೂರಿನಲ್ಲಿ ಕಟ್ಟಿ ಬೆಳೆಸಿದ ...ಮ್ ಭಾಗ್ರೆ ಮೈಸೂರಿನ ಅಷ್ಟೂ ಮಂದಿ ...ಗೆ ಮಾಮೂಲಿ ಕೊಡುತ್ತಿದ್ದ. ಸಕಲ ಸರ್ಕಾರಿ ...ಗೂ ಪರ್ಸೆಂಟೇಜ್ ಫಿಕ್ಸ್ ಮಾಡಿದ್ದ. ಹೀಗಾಗಿ ...ದ ಪೊಲೀಸರಿಂದ ಹಿಡಿದು ಮೇಲಧಿಕಾರಿಗಳಿಗೆ ...ಯೇ ಸಿಗುತ್ತಿರಲಿಲ್ಲ.

...ಮತ್ತು ಸುನೀಲ್ ಅಗರ್‌ವಾಲ್ ಮೈಸೂರಿನ ... ಕಮೀಷನರ್ ಆಗಿ ಬಂದರೋ ಗ್ಯಾಂಬ್ಲರ್ ... ಗ್ರಹಗತಿ ಕೆಟ್ಟಿದೆ. ಕಮೀಷನರ್ ಸುನೀಲ್‌ಗೆ ...ನ ಜಂಟಿ ಕಮೀಷನರ್ ಅಲೋಕ್‌ಕುಮಾರ್ ...ಸ್ನೇಹಿತ. ಬೆಂಗಳೂರಿನ ಕೆಲ ಕ್ರಿಕೆಟ್ ಬುಕ್ಕಿಗಳು ...ರಿನ ಬುಕ್ಕಿಗಳ ಮೂಲಕ ಬೆಟ್ಟಿಂಗ್ ...ದ್ದಾರೆಂಬ ಕ್ಲೂ ಅಲೋಕ್ ಕುಮಾರ್ ಮೂಲಕ ... ಅಗರ್‌ವಾಲ್‌ಗೆ ರವಾನೆಯಾಗಿದೆ. ಈ ...ಗಲೇ ಇಂಡಿಯಾ-ಪಾಕ್ ಮ್ಯಾಚ್‌ನಿಂದ ಕೋಟಿ ...ಮುಗಾರಿ ಸಂತೆಯೊಂದನ್ನು ಭಾಗ್ರೆ ಮುಗಿಸಿ ...ನ್ಯೂಜಿಲ್ಯಾಂಡ್ ಪಂದ್ಯಾವಳಿಗೆ ಅಣಿಯಾಗಿದ್ದ. ...ರ್ ಮೂರರ ಹಿಂದಿನ ರಾತ್ರಿಯೇ ಹುಣಸೂರು ... ವೋನಾರ್ಕ್ ಮತ್ತು ಗ್ರಾಂಡ್‌ಮೌರ್ಯ ...ಗಳಲ್ಲಿ ಭಾಗ್ರೆ ಗ್ಯಾಂಗ್ ಎರಡೆರಡು ಐಷಾರಾಮಿ ...ನನ್ನು ಬುಕ್ ಮಾಡಿತ್ತು.

...ಟಾಪ್, ಕಂಪ್ಯೂಟರ್ ಇತ್ಯಾದಿ ಪರಿಕರಗ... ಬಂದಿದ್ದ ಬೆಟ್ಟಿಂಗ್ ಏಜೆಂಟರು ತಾವು ಸಾಫ್ಟ್ ...ಇಂಜಿನಿಯರ್‌ಗಳೆಂದೇ ಹೇಳಿಕೊಂಡಿದ್ದರಿಂದಾಗಿ ... ಸಿಬ್ಬಂದಿಗೆ ಗುಮಾನಿ ಬರಲಿಲ್ಲ. ಅಕ್ಟೋಬರ್ ... ಹೊತ್ತಿಗೆ ಪಾಕ್-ನ್ಯೂಜಿಲ್ಯಾಂಡ್ ಮ್ಯಾಚ್ ...ಯುತ್ತಿದ್ದಂತೆ ಕೇವಲ ಎರಡೇ ಗಂಟೆಗಳಲ್ಲಿ ಮೂವ...ಸಿ ಲಕ್ಷ ರೂಪಾಯಿಗಳ ಬೆಟ್ಟಿಂಗ್ ನಡೆದಾಗಿತ್ತು. ... ಮ್ಯಾಚ್ ಮುಗಿಯುವ ಹೊತ್ತಿಗದು ಕೋಟಿ ...ಮೀರುತ್ತಿತ್ತೇನೋ? ಅಷ್ಟರಲ್ಲೇ ಡಿಸಿಪಿ ರವಿಕಾಂತೇ...ನೇತೃತ್ವದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಜಯಕುಮಾರ್ ...ವಿಜಯನಗರದ ಇನ್ಸ್‌ಪೆಕ್ಟರ್ ಜಯಕುಮಾರ್ ...ವಿಜಯನಗರದ ಇನ್ಸ್‌ಪೆಕ್ಟರ್ ಅರುಣ್ ನಾಗೇಗೌಡರ ...ದು ಬಿದ್ದಿದೆ.


...ದಾಳಿಯ ರಭಸ ಹೇಗಿತ್ತೆಂದರೆ ಒಂದೆಡೆ ...ು ಸಿಕ್ಕಸಿಕ್ಕ ಬುಕ್ಕಿಗಳನ್ನು ಎಳೆದೊಯ್ಯುತ್ತಿದ್ದರೆ, ...ದ್ದ ನೂರಕ್ಕೂ ಹೆಚ್ಚು ಮೊಬೈಲುಗಳು ...ಲ್ಲೇ ಇದ್ದವು! ಇಷ್ಟಾಗಿಯೂ ಬೆಟ್ಟಿಂಗ್ ಜಾಲದ ... ಭಾಗ್ರೆ ಪರಾರಿಯಾಗಿಬಿಟ್ಟಿದ್ದ!

... ಮಗ ಕುಣಾಲ್ ಸಿಕ್ಕಿಬಿದ್ದನಾದರೂ ಭಾಗ್ರೆಯ ...ಬಲಗೈಗಳಂತಿದ್ದ ಶಿವಭಾಯಿ, ಮಹೇಂದರ್, ಪ್ರಕಾಶ್ ...ಕೂಡಾ ಪರಾರಿಯಾಗಿದ್ದಾರೆ. ಕರ್ನಾಟಕದ ಅತ್ಯಂತ ...ಮತ್ತು ಶಕ್ತಿಶಾಲಿ ಬೆಟ್ಟಿಂಗ್ ಜಾಲವೊಂದನ್ನು ... ದಕ್ಷದ ಮೈಸೂರು ಪೊಲೀಸರ ಕಾಳಜಿ ...ವಿ, ಸಾಂಸ್ಕೃತಿಕ ರಾಜಧಾನಿಯಾಗಿದ್ದ ಮೈಸೂರು ... ಬೆಟ್ಟಿಂಗ್ ಜಾಲಿಗೆ ಅಭಯಾರಣ್ಯವಾಗಿದ್ದ ...ದ್ದದ್ದೇ ಮತ್ತೇನು?

...ಮುಕೋರ ಮಾರ್ವಾಡಿ ಗ್ಯಾಂಗ್ ಅನ್ನು ಬೇರು ...ಕೀಳುವವನಾರು?

● ರಾ. ಸೋಮನಾಥ್

ಭಟ್ಟನಿಗೆ ಮತ್ತೆ ಮದುವೆಯಂತೆ



ಕೇವಲ ಹದಿನೈದು ತಿಂಗಳ ಹಿಂದೆ ತನ್ನ ಹೆಂಡತಿ ಪದ್ಮಪ್ರಿಯಾಳನ್ನು ಆತ್ಮಹತ್ಯೆ ಎಂತಹ ದುರಂತಕ್ಕೆ ದೂಡಿದ್ದ; ಒಂದು ತಿಂಗಳ ಹಿಂದೆ ಅದೇ ಪದ್ಮಪ್ರಿಯಾಳ ಶೀಲದ ಬಗ್ಗೆ ನ್ಯಾಯಾಲಯದ ಮುಂದೆ ಗುಮಾನಿ ವ್ಯಕ್ತಪಡಿಸಿದ್ದ ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ಟ ಮತ್ತೊಂದು ಮದುವೆಯಾಗಲಿದ್ದಾನೆ ಎಂಬ ಸುದ್ದಿ ಕರಾವಳಿಯಾದ್ಯಂತ ಹಬ್ಬಿದೆ.

ಆದರೆ ಶಿವಳ್ಳಿ ಬ್ರಾಹ್ಮಣ ಜಾತಿಗೆ ಸೇರಿದ ಈ ರಘುಪತಿ ಭಟ್ಟನ 'ರಸಿಕತೆ'ಗಳು ಅದೆಷ್ಟು ವ್ಯಾಪಕವಾಗಿ ಹರಡಿವೆ ಎಂದರೆ ಆ ಸಮುದಾಯಕ್ಕೆ ಸೇರಿರುವ ಯಾವ ಪ್ರಜ್ಞಾವಂತರೂ ತಮ್ಮ ಹೆಣ್ಣು ಮಗಳನ್ನು ಈ ಕೀಚಕನಿಗೆ ಕೊಟ್ಟು ಮದುವೆ ಮಾಡಲು ತಯಾರಿಲ್ಲ. ಅದನ್ನು ಬಲ್ಲ ಭಟ್ಟ ಸಿರ್ಸಿ ಹತ್ತಿರದ ಒಂದು ಹಳ್ಳಿಯಲ್ಲಿರುವ ಬಡ ಶಿವಳ್ಳಿ ಬ್ರಾಹ್ಮಣ ಕುಟುಂಬವೊಂದನ್ನು ಒಪ್ಪಿಸಿ ಅವರ ಮಗಳನ್ನು ಮದುವೆಯಾಗಲು ಹೊರಟಿದ್ದಾನಂತೆ.

ಬಲ್ಲ ಮೂಲಗಳ ಪ್ರಕಾರ ರಘುಪತಿ ಭಟ್ಟ "ದೂರದ ದೇವಸ್ಥಾನವೊಂದರಲ್ಲಿ ವಿವಾಹ ವಿಧಿ ವಿಧಾನಗಳು ನಡೆಯುತ್ತವೆ; ದೊಡ್ಡ ಸಮಾರಂಭವಿರುವುದಿಲ್ಲ, ಹೊರಗಿನವರಿಗೆ ಗೊತ್ತಾಗುವುದೂ ಇಲ್ಲ" ಎಂಬ ಷರತ್ತನ್ನು ವಿಧಿಸಿದ್ದಾನಂತೆ.

ಈ ರಘುಪತಿ ಭಟ್ಟನಿಗೆ ಎರಡನೆ ಹೆಂಡತಿಯಾಗಿ ತಮ್ಮ ಮಗಳನ್ನು ನೀಡಲು ಹೊರಟಿರುವ ತಂದೆ-ತಾಯಿ ಎಷ್ಟು ಮುಗ್ಧರೆಂದರೆ ಸ್ಥಳೀಯ ಜನ ಅವರನ್ನು "ಪಾಪದವರು" ಎಂದೇ ಕರೆಯುತ್ತಿದ್ದಾರೆ. ಅಷ್ಟೇ ಅಲ್ಲ, "ರಘುಪತಿ ಭಟ್ಟ ಶಾಸಕರಂತೆ ಹೌದೆ?" ಎಂದು ವಿಚಾರಿಸುವಷ್ಟು ಅಮಾಯಕರು ಅವರು!

ರಘುಪತಿ ಭಟ್ಟನ ಹೆಂಡತಿಯ ಅವಶ್ಯಕತೆಗಿಂತ ಹೆಚ್ಚಾಗಿ ಆತನ ಇಬ್ಬರು ಪುಟ್ಟಮಕ್ಕಳಿಗೆ ತಾಯಿಯೋರ್ವಳ ಪ್ರೀತಿಯಂತೂ ಬೇಕೇಬೇಕಿದೆ. ಆ ಕಾರಣಕ್ಕಾದರೂ ಭಟ್ಟ ಇನ್ನು ಮುಂದೆ ತನ್ನ 'ರೀನಾ, ಮೀನಾ, ಡೀನಾ' ತರಹದ ಡಿಂಗ್‌ಡಾಂಗ್‌ಗಳನ್ನು ಬಿಟ್ಟು ಈ ಹೊಸ ದಾಂಪತ್ಯದಲ್ಲಾದರೂ ಸ್ವಲ್ಪ ಜವಾಬ್ದಾರಿ ತೋರುವಂತಾಗಲಿ....

ಡಾಗ್‌ಶೆಡ್ಡಿಗಾಕಿ ಡಾಗ್‌ಫುಡ್ ಕೊಟ್ಟಿದ್ದೇಕೆ ಗೊತ್ತಾ?

ಅತ್ತ ಸುತ್ತೂರು ಮಠದಲ್ಲಿ ಸತ್ತಂತೆ ಶವಾಸನ ಹಾಕಿದ್ದ ಚೆಡ್ಡಿ ಮಂತ್ರಿಗಳು ತಮ್ಮ ರೋಗಗ್ರಸ್ತ ದೇಹಗಳನ್ನು ರಿಪೇರಿ ಮಾಡಿಕೊಳ್ಳುತ್ತಿರುವಾಗ, ಇತ್ತ ಉತ್ತರ ಕರ್ನಾಟಕದ ಆಗಸದಲ್ಲಿ ಕಾರ್ಮೋಡಗಳು ದಟ್ಟೈಸುತ್ತಿದ್ದವಲ್ಲಾ, ಗುಜರಾತಿನಿಂದ ಬಂದಿದ್ದ ನರಹಂತಕ ಮೋದಿಯಿಂದ ನಯವಂಚಕತನದ ಆಡಳಿತವನ್ನು ಹೇಗೆ ನಡೆಸಬೇಕೆಂದು ಬ್ರೈನ್ ಬೋಧನೆ ಮಾಡಿಸಿಕೊಳ್ಳುತ್ತಿದ್ದಾಗ, ಕಾರವಾರದಿಂದ ಹಿಡಿದು ರಾಯಚೂರಿನವರೆಗೂ ಪ್ರವಾಹ ಏರತೊಡಗಿದಂತಲ್ಲಾ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಇಡೀ ಕರ್ನಾಟಕವನ್ನು ಸಂಪೂರ್ಣ ಚೆಡ್ಡಿಮಯ ಮಾಡುವುದೇಗೆಂದು ಮಂತ್ರಿಗಳು ಚಿಂತಿಸುತ್ತ ಹುರಿಗಾಳು ಅಗಿಯುತ್ತಿದ್ದಾಗ, ಉತ್ತರ ಕರ್ನಾಟಕದ ಜನತೆ ಜನಜಾನುವಾರು, ಬೆಳೆ ಕಳೆದುಕೊಂಡು ಎತ್ತರವಾದ ದಿಬ್ಬ ಮರ ಹುಡುಕಿಕೊಂಡು ಅಲೆಯುತ್ತಿದ್ದರಂತಲ್ಲಾ. ರಕ್ಷಿಸಬೇಕಾದ ಜನರ ಸುಳಿವೇಯಿಲ್ಲದ ಹೊತ್ತಿನಲ್ಲಿ ಜೀವ ತಡೆಯದೆ ಮಾನವಹಕ್ಕು ರಕ್ಷಣಾ ನ್ಯಾಯಮೂರ್ತಿ ಕೊಚ್ಚಿ ಹೋಗುತ್ತಿರುವ ಮಾನವರ ಬಗ್ಗೆ ಮಾತನಾಡಿದ್ದು ಅಮಾನವೀಯ ಎಂದು ದಕ್ಷಿಣ ಕನ್ನಡದ ಬೃಹನ್ನಳೆಯೊಂದು ಕಿಡಿಕಾರಿದೆಯಂತಲ್ಲಾ, ಥೂತ್ತೇರಿ!

******

ದಕ್ಷಿಣ ಕನ್ನಡದ ಬೃಹನ್ನಳೆಯ ಪ್ರಕಾರ ಮಾನವ ಹಕ್ಕಿನ ರಕ್ಷಣೆ ಹೊತ್ತವರು. ಪ್ರವಾಹದಲ್ಲಿ ಸತ್ತವರ ಹೆಣ ಹೊರಲೇಬೇಕಂತಲ್ಲಾ. ಒಂದೂ ಹೆಣ ಹೊರದೆ ಚೆಡ್ಡಿಗಳ ಬ್ರೈನ್ ಬಗ್ಗೆ ಮಾತನಾಡುವಂತಿಲ್ಲವಂತಲ್ಲಾ, ಹಾಗಾದರೆ ಮಾನವಹಕ್ಕಿನ ರಕ್ಷಣೆಯ ನ್ಯಾಯಮೂರ್ತಿ ಎಸ್.ಆರ್. ನಾಯಕ್ ಹೆಣ ಹೊತ್ತಿಲ್ಲದ ಕಾರಣ ಅವರಿಗೆ ಮಾತನಾಡುವ ಹಕ್ಕಿಲ್ಲ ಎನ್ನುವುದಾದರೆ, ಈ ಬೃಹನ್ನಳೆ ಪ್ರವಾಹದಲ್ಲಿ ಸಿಕ್ಕು ಸತ್ತವರ ಹೆಣ ಹೊತ್ತಿದೆಯೇ ಎಂಬ ಚರ್ಚೆ ಹುಲುಮಾನವರ ನಡುವೆ ಶುರುವಾಗಿದೆಯಂತಲ್ಲಾ, ಅದೇನೆ ಆಗಲಿ ಮಾನವ ಹಕ್ಕಿನ ರಕ್ಷಣೆ ಇರುವುದು ಮಾನವನ ರಕ್ಷಣೆಗಾಗಿ, ಅವನು ಕಣ್ಣೆದುರೇ ಸಾಯುತ್ತಿದ್ದಾನೆ, ಸತ್ತವನ ಎದುರು ಯಾವ ಹಕ್ಕೂ ಉಳಿಯಲಾರವು, ಇಂತಹ ಹೊತ್ತಿನಲ್ಲಿ ಅದಕ್ಕಾಗಿಯೇ ಇರುವ ನ್ಯಾಯಾಧೀಶ ಸಂಬಂಧಪಟ್ಟವರನ್ನು ಎಚ್ಚರಿಸಿದರೆ, ಬೃಹನ್ನಳೆಯ ಚೆಡ್ಡಿಯಲ್ಲಿ ತುರಿಕೆ ಕಾಣಿಸಿಕೊಳ್ಳುವುದು ಸಹಜ ಎಂದು ಚೆಡ್ಡಿ ಕಂಡರಾಗದವರು ಆಡಿಕೊಳ್ಳುತ್ತಿದ್ದಾಗಲೇ ಪ್ರವಾಹದ ಪರಿಹಾರಾರ್ಥವಾಗಿ ಒಂದು ವಾರ ಉಪವಾಸವನ್ನು ಬೃಹನ್ನಳೆ ಕೈಗೊಂಡಿತಂತಲ್ಲಾ, ಥೂತ್ತೇರಿ!

ಥೂತ್ತೇರಿ

▸ ಯಾಹೂ

******

ಪ್ರವಾಹದ ಪರಿಣಾಮ ನೋಡಲೆಂದು ಸೋನಿಯಾಗಾಂಧಿ ಬಳ್ಳಾರಿಗೆ ಬಂದಾಗ ಕರುಣಾಕರ ರೆಡ್ಡಿ ಎಂಬ ಮಂತ್ರಿ ಸೋನಿಯಾ ಬಳಿ ಹೋಗಿ ಪರಿಚಯಿಸಿಕೊಳ್ಳಲು ಯತ್ನಿಸಿತಂತಲ್ಲಾ. ಅದು ಸಾಧ್ಯವಾಗದಿದ್ದಾಗ ಹ್ಯಾಪುಮೋರೆಯೊಂದಿಗೆ ನಿಂತಿದ್ದ ರೆಡ್ಡಿ ಸೋನಿಯಾ ಪ್ರವಾಹಕ್ಕೆ ಸಿಕ್ಕಿದವರನ್ನು ನೋಡಲು ಹೆಲಿಕಾಪ್ಟರ್ ಏರಿದ ಕೂಡಲೇ ರೆಡ್ಡಿ ತಾನೂ ಒಳನುಗ್ಗಿ ಕೂರಲು ಹೋದನಂತಲ್ಲಾ. ಈತನ ನಡವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದ ಸೋನಿಯಾ ಬೆರಳಸನ್ನೆಯಿಂದಲೇ ಔಟ್ ಎಂಬ ಸೂಚನೆ ಕೊಟ್ಟಳಂತಲ್ಲಾ. ಇದೇ ಸಮಯವೆಂದು ಎಡೂರಾಚಾರಿ ಇಬ್ಬರೂ ಒಳ ನುಗ್ಗಿ, ಜೊತೆಗೆ ಚಿದಂಬರನೂ ಸೇರಿಕೊಂಡ ನಂತರ, ಹೆಲಿಕಾಪ್ಟರ್ ಹೊರಡಲಾಗಿ ಕರುಣಾಕರ ರೆಡ್ಡಿ ಕರುಣಾಜನಕವಾಗಿ ಹಾಗೇ ನಿಂತಿದ್ದನಂತಲ್ಲಾ. ರೆಡ್ಡಿಗಾದ ಅವಮಾನ ಗ್ರಹಿಸಿದ ಬಳ್ಳಾರಿ ಬಿಜೆಪಿಗಳು "ಈ ಮೂರ್ಖ ರೆಡ್ಡಿಗಳು ಇಂತಹ ಅವಮಾನ ಮಾಡಿಕೊಳ್ಳುವುದಕ್ಕಿಂತಲೂ ಬಳ್ಳಾರಿ ಮಣ್ಣಿನ ದುಡ್ಡಿನಲ್ಲಿ ಅರ್ಧ ಖರ್ಚು ಮಾಡಿದರೂ ಸಾಕು. ಇಡೀ ಬಳ್ಳಾರಿ ಜಿಲ್ಲೆಯಲ್ಲಿ ಕೊಚ್ಚಿಹೋದ ಮನೆಗಳನ್ನು ಪುನಃ ನಿರ್ಮಿಸಿಕೊಡಬಹುದು" ಎಂದುಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!

******

ಕರ್ನಾಟಕದ ಕಾಂಗ್ರೆಸ್ ಕಲಿಗಳು ಬೆದೆಯೆದ್ದ ಮುದಿ ಹೋರಿಗಳಂತೆ ನುಗ್ಗಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಿದ ಪರಿಣಾಮವಾಗಿ ಪೊಲೀಸರಿಂದ ಅರೆಸ್ಟಾಗಿ ಡಾಗ್ ಶೆಡ್‌ಗಳಲ್ಲಿ ತುಂಬಿಸಿಕೊಂಡಿದ್ದೂ ಅಲ್ಲದೆ, ಡಾಗ್ ಫುಡ್ಡನ್ನೇ ತಿಂದು ಹಾಕಿದರಂತಲ್ಲಾ. ಈ ತರದ ಶೆಡ್ಡು ಮತ್ತು ಫುಡ್ಡಿನ ಹಿಂದೆ ಯಾರದಾದರೂ ಷಡ್ಯಂತ್ರವಿದೆಯೇ ಎಂದು ಶ್ವಾನ ಬುದ್ಧಿಯ ಕೆಲವು ಕಾಂಗ್ರೆಗಳು ವಾಸನೆ ಹಿಡಿಯಲಾಗಿ, ಎಲ್ಲದರ ಹಿಂದೆ ಶಂಕರಬದರಿ ಎಂಬ ಬಿದಿರು ಬಡಿಗೆಯ ಕೈವಾಡವೇ ಎದ್ದು ಕಂಡಿತಂತಲ್ಲಾ. ಈ ಶಂಕರಬದರಿ ಎಂಬ ಬಡಿಗೆ ಜೆ.ಎಚ್. ಪಟೇಲರ ಕಾಲದಲ್ಲಿ ಯದ್ವಾತದ್ವಾ ಮೆರೆದಿತ್ತಂತೆ. ಅದರಲ್ಲೂ ಪಟೇಲರೇ ಒಂದು ಭಾಗವಾದರೆ ಈತನೇ ಒಂದು ಭಾಗವೆಂಬಂತೆ ವರ್ತಿಸಿದ್ದನಂತೆ. ಇದನ್ನು ಕಣ್ಣಾರೆ ಕಂಡಿದ್ದ ಕಾಂಗ್ರೆಗಳು ಎಸ್ಸೆಂ ಕೃಷ್ಣರ ಕಾಲದಲ್ಲಿ ಬದರಿ ಕೈಗೆ ಬರೀ ಬಿದಿರುಕೋಲನ್ನು ಮಾತ್ರ ಕರುಣಿಸಿ ಯಾವ ತರದ ಅಧಿಕಾರವೂ ಇಲ್ಲದ ಜಾಗದಲ್ಲಿ ಕೂರಿಸಿ ಗೋಳು ಹುಯ್ದುಕೊಂಡರಂತೆ. ಇಂತಹ ಸ್ಥಿತಿಯುಂಟು ಮಾಡಿದ್ದ ಕಾಂಗ್ರೆಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ ಬದರಿ ಕೈಗೆ ಕಡೆಗೂ ಕಾಂಗ್ರೆಗಳು ಸಿಕ್ಕಲಾಗಿ, ಡಾಗ್ ಶೆಡ್ಡಿಗೆ ತುಂಬಿ ಡಾಗ್ ಫುಡ್ಡನ್ನು ಕೊಟ್ಟನಂತಲ್ಲಾ, ಥೂತ್ತೇರಿ!

******




ನೆರೆಯಿಂದ ಸಂಭವಿಸಿರುವ ಹಾನಿಯನ್ನು ತಜ್ಞರು ಅಂದಾಜು ಮಾಡುತ್ತಿರುವಾಗಲೇ ಎಡೂರಪ್ಪ ಕೇಂದ್ರ ಸರ್ಕಾರಕ್ಕೆ ಹತ್ತು ಸಾವಿರ ಕೋಟಿ ಬೇಡಿಕೆಯನ್ನಿತ್ತರಂತಲ್ಲಾ, ಆದರೆ ಕರ್ನಾಟಕದಲ್ಲಿ ಸಂಭವಿಸಿರುವ ಹಾನಿಯ ಅಂದಾಜು ಸುಮಾರು ಹದಿನಾರು ಸಾವಿರ ಕೋಟಿಯೆಂದು ಅಧಿಕಾರಿಗಳೇ ಅಂದಾಜು ಮಾಡಿ ಎಡೂರಪ್ಪನಿಗೆ ಹೇಳಿದರೆ "ಹತ್ತು ಸಾವಿರ ಕೋಟಿ ಬೇಡ. ಕೇಂದ್ರ ಸರ್ಕಾರ ಕೇವಲ ಎರಡು ಸಾವಿರ ಕೋಟಿ ಕೊಡ್ಲಿ, ನೋಡೋಣ" ಎಂದರಂತಲ್ಲಾ. ಕಕ್ಕಾಬಿಕ್ಕಿಯಾದ ಅಧಿಕಾರಿಗಳು ತಮ್ಮ ತಮ್ಮಲ್ಲೇ ಅಂದಾಜು ಮಾಡುತ್ತ "ನಿಜ, ಎಡೂರಪ್ಪ ಮುಖ್ಯಮಂತ್ರಿಯಾದ ಮೇಲೆ ಮಾಡಿರುವ ಆಸ್ತಿ ಮಾರಿದರೆ ಮೂರು ಜಿಲ್ಲೆ ಸಂತ್ರಸ್ತರಿಗೆ ವಸತಿ ಊಟದ ಸೌಕರ್ಯವಾಗುತ್ತದೆ. ಈಶ್ವರಪ್ಪನ ಹೊಸ ಆಸ್ತಿ ಮಾರಿದರೆ ಇಡೀ ದಾವಣಗೆರೆ ಜಿಲ್ಲೆ ರಿಪೇರಿ ಮಾಡಬಹುದು. ಇನ್ನು ರೆಡ್ಡಿಗಳ ಹಣದಿಂದ ಬಳ್ಳಾರಿ, ರಾಯಚೂರನ್ನು ಕೃಷ್ಣ ದೇವರಾಯನ ಕಾಲವೇ ನಾಚುವಂತೆ ಮಾಡಬಹುದು. ಒಟ್ಟಿನಲ್ಲಿ ಪುನರ್ವಸತಿ ಸಂಪತ್ತು ಇಲ್ಲೇ ಇದೆ. ಖದೀಮರು ಮನಸ್ಸು ಮಾಡಬೇಕಷ್ಟೇ" ಎಂದುಕೊಂಡು ಬರೂವಾದರಂತಲ್ಲಾ, ಥೂತ್ತೇರಿ!

ಗಂಗವ್ವಗೆ ಕರುಣೆಯಿಲ್ಲ



ಸರ್ಕಾರಕ್ಕೆ ಕಣ್ಣಿಲ್ಲ

ಯಡ್ಡಿ-ಶ್ರೀಗಳ ಕ್ಷೀರೋತ್ಸವ!



ಮಂತ್ರಾಲಯ ಮುಳುಗಿದೆ. ಅಲ್ಲಿ ವಾಸಿಸುವ ಮೂರು ಸಾವಿರದಷ್ಟು ಜನ ಕಂಗಾಲಾಗಿದ್ದಾರೆ. ನೀರಿನಿಂದಾವೃತವಾದ ರಾಯರ ಮಠದೊಳಗೆ ಮುದುರಿ ಕುಳಿತಿದ್ದ ಸುಯತೀಂದ್ರ ಸ್ವಾಮಿಗಳು 'ಹಾಲಲ್ಲಾದರೂ ಹಾಕು, ನೀರಲ್ಲಾದರೂ ಹಾಕು ರಾಘವೇಂದ್ರ' ಎಂದು ಜಪ ಮಾಡುತ್ತಾರೆ. ಆತನ ಅಂತರ್ವಾಣಿ ಸೊಯ್ಯಂತ ಆಂಧ್ರದ ಗಡಿ ದಾಟಿ ಬೆಂಗಳೂರು ಕಡೆಯ ದಾಬಸ್‌ಪೇಟೆ ತಲುಪುತ್ತದೆ. ಅಲ್ಲಿ ಕ್ಷೀರರಾಜ, ಕ್ಷೀರರತ್ನ ಇತ್ಯಾದಿ ತಗಡು ಬಿರುದುಗಳನ್ನು ಧರಿಸುತ್ತಿದ್ದ ಸಿ.ಎಂ.ಯಡಿಯೂರಪ್ಪ ತಕ್ಷಣ ಜಾಗೃತನಾಗುತ್ತಾನೆ. ಹೇಳಿಕೇಳಿ ಕ್ಷೀರರಾಜನಲ್ಲವೆ... ಮಂತ್ರಾಲಯ ಶ್ರೀಗಳ ಆರ್ತನಾದಕ್ಕೆ ಧ್ವನಿಕೊಟ್ಟು ರಾತ್ರೋರಾತ್ರಿ ಹೆಲಿಕಾಪ್ಟರ್ ಕಳಿಸುತ್ತಾನೆ. ಶೋಭಾ ಕರಂದ್ಲಾಜೆ ಹೋಗಿ ಸ್ವಾಮಿಯನ್ನು ನೀರಿನಿಂದ ಎತ್ತಿ ತಂದು ಹಾಲಿಗೆ ಹಾಕುತ್ತಾರೆ. ಸದಾ ಮಡಿ-ಮೈಲಿಗೆ ಎನ್ನುವ ಸ್ವಾಮಿ ಅವತ್ತು 'ಮಾಡು ಇಲ್ಲವೇ ಮಡಿ' ಅನ್ನುತ್ತಾ ಶೂದ್ರರೊಂದಿಗೆ ಹೆಲಿಕಾಪ್ಟರ್‌ನಲ್ಲಿ ಹಾರಿ ಜೀವ ಉಳಿಸಿಕೊಳ್ಳುತ್ತಾರೆ. 'ಜನರನ್ನು ದೇವರೇ ಕಾಪಾಡಬೇಕು' ಎಂದು ಹಲುಬುತ್ತಾರೆ.


ರಾಯರ ಮಠ ರಕ್ಷಿಸಲು, ಸುಯತೀಂದ್ರ ಸ್ವಾಮಿಯನ್ನು ರಕ್ಷಿಸಲು ಸರ್ಕಾರ ಬೇಕು, ಜನರು ಮಾತ್ರ ದೇವರ ಮೇಲೆ, ರಾಯರ ಮೇಲೆ ಭಾರ ಹಾಕಿ ಸಾಯಬೇಕು. ಮಂತ್ರಾಲಯದ ಮಠಕ್ಕೆ ಸರ್ಕಾರದ 10 ಕೋಟಿ ಮಾತ್ರ ಬೇಕೇಬೇಕು! ಜೈ ರಾಘವೇಂದ್ರ.....

ಗೋಮಾತೆ ಕುರಿತು ಮಾತೇ ಇಲ್ಲ!

ಹಸುವನ್ನು ಗೋಮಾತೆ, ಗೋಮಾತೆ ಎಂದು ಹೇಳುತ್ತ ಹುಸಿ ಆರಾಧನೆ ಮಾಡುವ ಹಿಂದುತ್ವ ಆರಾಧಕರಿಗೆ ಮಂತ್ರಾಲಯ ಮಠದ 60ಕ್ಕೂ ಹೆ ಹಸುಗಳು ಮುಳುಗಿ ಸತ್ತಿದ್ದು ಕಾಣಿಸುವುದೇ ಇಲ್ಲ. ಸುಯತೀಂದ್ರನನ್ನು ಉಳಿಸುವಲ್ಲಿ ತೋರುವ ಕಾಳಜಿಯನ್ನು ಗೋಮಾತೆಯನ್ನು ರಕ್ಷಿಸಲು ತೋರುವುದಿ ಗೋವಿನ ಹೆಸರಲ್ಲಿ ದುಡ್ಡುಹೊಡೆಯುವುದು, ದ್ವೇಷ ಬಿತ್ತುವುದನ್ನೇ ದಂಧೆ ಮಾಡಿಕೊಂಡಿರುವ ಚಡ್ಡಿಗಳಿಗೆ, ಚಡ್ಡಿಮಠಗಳಿಗೆ ಗೋಮಾತೆಯ ಸಾವು ಅದ್ಯ ಬಾಧಿಸೀತು?


ಉದ್ಧಟ ಬಿಜೆಪಿ ಶಾಸಕರಿಗೆ ಒದೆ

ಅಧಿಕಾರ ಬಂದ ಮೇಲೆ ಸ್ವಂತ ಆಸ್ತಿ ಮಾಡುತ್ತ ಉಂಡಾಡಿಗುಂಡರಂತೆ ಬೆಂಗಳೂರಲ್ಲಿ ಮೊಕ್ಕಾಂ ಹೂಡಿದ್ದ ಭಂಡ ಬಿಜೆಪಿ ಶಾಸಕರು ನೆರೆ ಸಂತ್ರಸ್ತರ ವಿಚಾರದಲ್ಲಿ ಉದ್ಧಟತನ ಪ್ರದರ್ಶಿಸುತ್ತಿದ್ದಾರೆ. ಬೀದಿ ಪಾಲಾದ ಜನರಿಗೆ ಸಾಂತ್ವನ ಹೇಳುವ ಕನಿಷ್ಠ ಸೌಜನ್ಯವೂ ಇಲ್ಲದ ಈ ಅಯೋಗ್ಯರು ನೆರೆಪೀಡಿತ ಜನರನ್ನು ದಬಾಯಿಸಲು ನೋಡುತ್ತಿದ್ದಾರೆ. ಇನ್ನು ಕೆಲವರಂತೂ ಅಡ್ರೆಸ್‌ಗೇ ಇಲ್ಲ. ಇವರ ಅಧಿಕ ಪ್ರಸಂಗದ ಮಾತುಗಳು, ಬೇಜವಾಬ್ದಾರಿತನ ಕಂಡ ಜನ ಸರಿಯಾಗಿಯೇ ಪಾಠ ಕಲಿಸುತ್ತಿದ್ದಾರೆ. ಬಾಗಲಕೋಟೆಯ ಚಡ್ಡಿ ಶಾಸಕ ಚರಂತಿ ಮಠನಿಗೆ ಈಗಾಗಲೇ ಒದೆ ಬಿದ್ದಾಗಿದೆ. ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಅರವಿಂದ ಲಿಂಬಾವಳಿ ಸ್ವಲ್ಪದರಲ್ಲೇ ಪಾರಾಗಿದ್ದಾನೆ. ಹಾಗೆಯೇ ಗದಗ ಜಿಲ್ಲೆ ನರಗುಂದದ ಶಾಸಕ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಸಿ.ಸಿ. ಪಾಟೀಲನಿಗೆ ಇಷ್ಟರಲ್ಲೇ ಧರ್ಮದೇಟು ಬೀಳುವುದು ಖಂಡಿತ.




ಲಿಂಬಾವಳಿ

ಬಾಗಲಕೋಟೆ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಹುನಗುಂದ ತಾಲ್ಲೂಕಿನ ಹಲವಾರು ಹಳ್ಳಿಗಳು ಮಲಪ್ರಭೆಯ ಮುನಿಸಿಗೆ ಒಳಗಾಗಿ ಜರ್ಜರಿತಗೊಂಡಿವೆ. ದಲಿತರು, ಲಂಬಾಣಿಗರು ವಾಸಿಸುವ ಹಿರೇಮಾಗಿ ಎಂಬ ಹಳ್ಳಿ ನಡುಗಡ್ಡೆಯಂತಾಗಿ ಹೋಗಿದೆ. ಜನರನ್ನು ಸುರಕ್ಷಿತವಾಗಿ ಅಲ್ಲಿಂದ ಹೊರತರುವ ಪ್ರಯತ್ನವನ್ನು ಶಾಸಕ ವೀರಣ್ಣ ಚರಂತಿಮಠ ಮಾಡಲಿಲ್ಲ. ಎರಡು ದಿನ ಅನ್ನ, ನೀರಿಲ್ಲದೇ ಜನ ಒದ್ದಾಡಿದರು. ಕೊನೆಗೆ ಜಿಲ್ಲಾಡಳಿತ ಒಂದು ಥರ್ಡ್‌ಕ್ಲಾಸ್ ದೋಣಿಯನ್ನು ಕಳಿಸಿತು. ನೂರಾರು ಜನ. ಒಂದೇ ದೋಣಿ. ಮೂರ್ಖ ಅಧಿಕಾರಿಗಳು ದೋಣಿ ತುಂಬಾ ಜನರನ್ನು ತುಂಬಿದರು. ದೋಣಿ ಪಲ್ಟಿಯಾಗಿ ನಾಲ್ವರು ಮಕ್ಕಳು ಸೇರಿದಂತೆ ಐವರು ಜಲಸಮಾಧಿಯಾದರು. ಗಂಗವ್ವನ ಆಕ್ರೋಶದಿಂದ ಹೇಗೋ ಪಾರಾಗಿದ್ದ ಜನರನ್ನು ಚರಂತಿಮಠ ನಡುನೀರಲ್ಲಿ ಮುಳುಗಿಸಿಬಿಟ್ಟ. ಕಾಟಾಚಾರಕ್ಕೆ ಈ ಊರ ಜನರಿಗೆ ಸಾಂತ್ವನ ಹೇಳಲು ಹೋದ ಚರಂತಿಮಠ ಉದ್ಧಟನಂತೆ ವರ್ತಿಸಿಬಿಟ್ಟ. 'ನಿಂದ್ಯಾಕ ಮನಿಯಿಲ್ಲ, ದನ ಕಟ್ಟಾಕ ಜಾಗಯಿಲ್ಲ, ವಿಚಾರ ಮಾಡ್ರಿ ಯಪ್ಪಾ' ಎಂದು ನೊಂದ ಜನ ಅಹವಾಲು ಸಲ್ಲಿಸಿದರೆ ಮುಕುಳಿ ಸೊಕ್ಕಿನಲ್ಲಿ ಮಾತಾಡಿದ ಚರಂತಿಮಠ, 'ನಾಯೇನ್ ಮಾಡಾಕಾಗ್ತ... ದನ ಮಾಳಿಗಿ ಮ್ಯಾಲಿ ಕಟ್ರಿ. ನೀವ್ ಎಲ್ಲೇರ ಮಠದಾಗ ಬೀಳ್ರಿ' ಎಂದು ಕ್ರೂರವಾಗಿ ಮಾತಾಡಿದ್ದಾನೆ. ಶಾಸಕನ ಬೇಜವಾಬ್ದಾರಿತನದಿಂದ ಮೊದಲೇ ಮಕ್ಕಳನ್ನು ಕಳೆದುಕೊಂಡಿದ್ದ ಜನ ಚರಂತಿಮಠನನ್ನು ಹಿಡಿದು ಎಳೆದಾಡಿ ಮುಕುಳಿ ಮೇಲೆ ನಾಲ್ಕು ಒದ್ದು ಓಡಿಸಿದ್ದಾರೆ. ಈಗಲೂ ಚರಂತಿಮಠನಿಗೆ ಬುದ್ಧಿ ಬಂದಿಲ್ಲ. ಆತನೂರು ಬಾಗಲಕೋಟೆಯಲ್ಲೇ ಮತ್ತೆ ಒದೆ ಬೀಳುವ ಎಲ್ಲ ಲಕ್ಷಣಗಳಿವೆ.




ಬೆಂಗಳೂರಿನ ಮಹದೇವಪುರ ಕ್ಷೇತ್ರದಿಂದ ಗೆದ್ದು ಉನ್ನತ ಶಿಕ್ಷಣ ಸಚಿವನಾಗಿ ಹೋಪ್‌ಲೆಸ್ ಕೆಲಸಗಳಲ್ಲಿ ಮುಳುಗಿರುವ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಅರವಿಂದ ಲಿಂಬಾವಳಿ ಜನರ ಆಕ್ರೋಶದಿಂದ ಸ್ವಲ್ಪದರಲ್ಲೇ ಪಾರಾಗಿದ್ದಾನೆ. ಹುನಗುಂದ ತಾಲ್ಲೂಕಿನ ಬಿಸ್ಲಾಳಕೊಪ್ಪಕ್ಕೆ ಬಂದ ಲಿಂಬಾವಳಿಗೆ 'ಚಿಮಣಿ ಎಣ್ಣಿ ಇಲ್ಲ, ಕಡ್ಡಿ ಪೆಟ್ಗಿಲ್ಲ, ಒಲಿಯರ ಹ್ಯಂಗ ಹಚ್ಚಾಣ್ರಿ' ಎಂದು ಕೇಳಿದ್ದಾರೆ. ಜನರೊಂದಿಗೆ-ಅದೂ ಈ ಸಂಕಷ್ಟದ ಸಮಯದಲ್ಲಿ-ಹೇಗೆ ವರ್ತಿಸಬೇಕೆಂದು ಗೊತ್ತಿಲ್ಲದ ಆರ್‌ಎಸ್‌ಎಸ್ ಸಂಸ್ಕೃತಿಯ ಲಿಂಬಾವಳಿ 'ನಂಗ ಕೇಳಿದ್ರ ಏನ್ ಮಾಡ್ಲಿ, ಲಬ್ ಲಬ್ ಹೊಯ್ಕೊಂಡು ಸಾಯ್ರಿ' ಅಂತಾ ಬೊಗಳಿದ್ದಾನೆ. ಇನ್ನೇನು ಜನ ಸರಿಯಾಗಿ ಬಾರಿಸಲಿದ್ದರು, ಆದರೆ ಪೊಲೀಸರು ರಕ್ಷಣೆ ನೀಡಿದ್ದರಿಂದ ಉಳಿದುಕೊಂಡಿದ್ದಾನೆ.

ಬೀಳಗಿ ಶಾಸಕ, ಸಚಿವ ಮುರುಗೇಶ ನಿರಾಣಿ 'ಉದ್ಯಮಿಗಳೇ ಹಣ ನೀಡಿ' ಎಂದು ಜಾಹೀರಾತು ನೀಡಿ ಕೈ ತೊಳೆದುಕೊಂಡಿದ್ದಾನೆ. ಸಕ್ಕರೆ ಮತ್ತು ಸಿಮೆಂಟ್ ಕಾರ್ಖಾನೆಗಳನ್ನು ಹೊಂದಿರುವ ತಾನು ಮಾತ್ರ ನಯಾಪೈಸೆ ಬಿಚ್ಚಿಲ್ಲ. 13 ಬ್ರ್ಯಾಂಚ್‌ಗಳಿರುವ ವೀರಪುಲಕೇಶಿ ಗ್ರಾಮೀಣ ಬ್ಯಾಂಕಿನ ಒಡೆಯ, ಬಾದಾಮಿ ಶಾಸಕ ಪಟ್ಟಣಶೆಟ್ಟಿ ಸಮಸ್ಯೆಗೆ ಬೆನ್ನು ತಿರುಗಿಸಿದ್ದಾನೆ. 'ಜನರಿಗೆಲ್ಲ ಒಳ್ಳೆದಾಗಲಿ ಎಂದು ಮಹಾ ಕೂಟೇಶ್ವರದಲ್ಲಿ ಅಭಿಷೇಕ ಮಾಡಿಸುವೆ' ಎಂದು ಮುಠ್ಠಾಳನಂತೆ ಮಾತಾಡುತ್ತಿದ್ದಾನೆ. ಈ ಪುಣ್ಯಾತ್ಮನ ಬಾಸು ಯಡಿಯೂರಪ್ಪ ಈ ಹಿಂದೆ 'ಮಠಗಳಿಗೆ ಹಣ ನೀಡಿದರೆ ಮಳೆ ಆಗುತ್ತದೆ' ಎಂದು ಹೇಳಿದ್ದನ್ನು ನೆನೆಸಿಕೊಂಡ ಜನ ಈ ಮಹಾಮಳೆ ನೋಡಿ ಯಡ್ಡಿಯನ್ನು ಶಪಿಸುತ್ತಿದ್ದಾರೆ.




ಜನ ಬೀದಿಯಲ್ಲಿ ಅನಾಥರಾಗಿ ಬಿದ್ದಿರುವಾಗ ಜಮಖಂಡಿಯ ಪರಮಚಡ್ಡಿ ಎಂಎಲ್‌ಎ ಶ್ರೀಕಾಂತ ಕುಲಕರ್ಣಿ ಬಾಗಲಕೋಟೆಯಲ್ಲಿ ಆರ್.ಎಸ್.ಎಸ್. ಪಥಸಂಚಲನದಲ್ಲಿ ಚಡ್ಡಿ ತೊಟ್ಟು ಭಾಗವಹಿಸಿದ್ದಾನೆ. ಮುಧೋಳ ಶಾಸಕ, ಸಚಿವ ಗೋವಿಂದ ಕಾರಜೋಳ ಸತ್ತವರ ಮನೆ ಮುಂದೆ ಪೇಪರುಗಳಿಗೆ ಪೋಸು ಕೊಡುತ್ತಿದ್ದರೆ, ಬಿಜಾಪುರ ಸಂಸದ ರಮೇಶ ಜಿಗಜಿಣಗಿ ಕಾಣೆಯಾಗಿದ್ದಾನೆ. ಆತ ನೀರಲ್ಲಿ ಮುಳುಗಿರಲಾರ ಎಂಬುದೊಂದೇ ಆಶಾಭಾವನೆ ಇದೆ ಜನಕ್ಕೆ. ಹುನಗುಂದದ ಬಿಜೆಪಿ ಶಾಸಕ ದೊಡ್ಡನಗೌಡ ತನ್ನ ಕಲ್ಲುಕ್ವಾರಿಗಳಲ್ಲಿ ಸೇರಿರುವ ನೀರನ್ನು ಹೊರ ಹಾಕಿಸುವಲ್ಲಿ ಬ್ಯುಸಿ ಆಗಿದ್ದಾನೆ.



ನಿರಾಣಿ


ಗದಗ ಜಿಲ್ಲೆಯ ನರಗುಂದ ಶಾಸಕ ಸಿ.ಸಿ. ಪಾಟೀಲ್‌ಗೆ ಸದ್ಯದಲ್ಲೇ ಮುಖಮೂತಿ ನೋಡದೇ ಹೊಡೆಯಲಿದ್ದಾರೆ ನರಗುಂದ, ರೋಣ ತಾಲ್ಲೂಕಿನ ಜನ. ಕುರ್ಲಗೇರಿಯಲ್ಲಿ ಪಾರ್ವತೆವ್ವ ಎಂಬ ಹೆಣ್ಮಗಳು, 'ದೀಡು ವರ್ಷದ ಹಿಂದ ಹೀಂಗ ಆಗಿತ್ತು, ಅವತ್ತಿಂದ ಶೆಡ್ಡಿನ್ಯಾಗ ಅದೀವಿ. ಈಗ ನೋಡಿದ್ರ ಶೆಡ್ಡು ಮುಳುಗೈತಿ, ಜಲ್ದು ಮನೆ ಕಟ್ಟಿಸಿ ಕೊಡಾಕ ನಿನಗೇನು ಧಾಡಿ ಆಗೈತಿ?' ಎಂದು ಶಾಸಕನನ್ನು ತರಾಟೆಗೆ ತೆಗೆದುಕೊಂಡಿದ್ದಾಳೆ. ಕೆಲಸಗೇಡಿ, ಮಾನಗೇಡಿ ಶಾಸಕ ಅರಚಾಡುತ್ತಾ, 'ನೋಡ್ರ್ಯಪಾ ನೋಡ್ರಿ. ಇಲ್ಲಿ ಆದಾಳಲ್ಲ ಪಾರ್ವತೆವ್ವ ಭಾರಿ ಜೋರು ಮಾತಾಡಕಹತ್ಯಾಳ. ಈಕೀನ ನಿಮ್ಗೆಲ್ಲಾ ಮನಿ ಕಟ್ಟಿಸಿಕೊಡ್ತಾಳೆ' ಎಂದು ಹೇಳಿ ದರ್ಪ ಮೆರೆದು ಜಾಗ ಖಾಲಿ ಮಾಡಿದ್ದಾನೆ. ಸುಮಾರು ಹಳ್ಳಿಗಳಲ್ಲಿ ಹೀಗೇ ವರ್ತಿಸಿ ಜನರ ಆಕ್ರೋಶಕ್ಕೆ ತುತ್ತಾಗಿರುವ ಸಿ.ಸಿ. ಪಾಟೀಲ್‌ಗೆ ಎಲ್ಲಿ ಯಾವಾಗ ಒದೆ ಬೀಳುತ್ತವೋ ಗೊತ್ತಿಲ್ಲ. ಗದಗ ಜಿಲ್ಲಾ ಉಸ್ತುವಾರಿ ಸಚಿವ ಶ್ರೀರಾಮುಲು ಹೀಗೆ ಬಂದು ಹಾಗೆ ಬಳ್ಳಾರಿಯ ತನ್ನ ಮಾಲೀಕ ಜನಾರ್ದನ ರೆಡ್ಡಿ ಸೇವೆಗೆ ವಾಪಸ್ ಹೋಗಿದ್ದಾನೆ. ಅಲ್ಲಿ ಕೆ.ಎಸ್.ಆರ್.ಪಿ. ಬೆಟಾಲಿಯನ್ ರಕ್ಷಣೆಯ ತಿರುಗುತ್ತಿದ್ದಾನೆ. ರೋಣದ ಶಾ ಕಳಕಪ್ಪ ಬಂಡಿ ಈ ದುರಂತಕ್ಕೂ ತನಗೂ ಸಂಬಂಧವೇ ಇಲ್ಲ ಎಂದು ಗೂಳಿಯಂತೆ ತಿರುಗುತ್ತಿದ್ದಾನೆ.



ಇತ್ತ ಕೊಪ್ಪಳದಲ್ಲೂ ಅಷ್ಟೇ ಜಿಲ್ಲಾ ಉಸ್ತುವಾರಿ ಸಚಿವ ಕಾರಜೋಳ ಈ ಕಡೆ ಮುಖ ಮಾಡಿಲ್ಲ. ಸಚಿವ ಶಿವರಾಜ ತಂಗಡಗಿ ಸಾಯೋರು ಸಾಯ್ಲಿ ಎನ್ನುತ್ತಿದ್ದಾನೆ. ಕರುಣಾಕರ ರೆಡ್ಡಿ ಹೆಲಿಕಾಪ್ಟರ್‌ನಲ್ಲಿ ಹಾಯಾಗಿ ಹಾರಾಡಿ ಹೋಗಿದ್ದಷ್ಟೇ ಬಂತು. ಜಿಲ್ಲೆಯ ಐವರು ಶಾಸಕ ಜನರಿಂದ ತಪ್ಪಿಸಿಕೊಂಡು ತಿರುಗುತ್ತಿದ್ದಾರೆ.

ಸೆಪ್ಟೆಂಬರ್ 24 ರಂದು ಇಲ್ಲಿಗೆ ಡಿ.ಸಿ. ಆಗಿ ಬರಬೇಕಿದ್ದ ಗುಲ್ಬರ್ಗಾದ ಡಿ.ಸಿ. ಸತ್ಯಮೂರ್ತಿ ಇಲ್ಲಿಗೆ ಬಂದಿದ್ದೇ ಅಕ್ಟೋಬರ್ 1 ರ ರಾತ್ರಿ! ಸೆಪ್ಟೆಂಬರ್ 28 ರಿಂದಲೇ ಮಳೆ ಹಾವಳಿ ಶುರುವಾದರೂ ಈ ಸೋಮಾರಿ ಬೆಂಗಳೂರ ಠಿಕಾಣಿ ಹೂಡಿದ್ದ. ಗುಲ್ಬರ್ಗಾದಲ್ಲಿ ಮಾಜಿ ಸಚಿವ ದರ್ಶನಾಪೂರ 'ಮಳೆ ನಿಲ್ಲಾಕ ಆಗುತ್ತೇನು?' ಎಂದು ಉಡಾಫೆ ತೋರಿಸುತ್ತಿದ್ದಾನೆ.

ಆರು ತಿಂಗಳ ಹಿಂದೆಯೇ ಹಿರೇಹಳ್ಳ ಬ್ರಿಡ್ಜ್ ದು ಗೊಳಿಸಿದ್ದರೆ ಕೊಪ್ಪಳ ಈ ಕಷ್ಟಕ್ಕೆ ಬೀಳುತ್ತಿರಲಿಲ್ಲ. ಹಿರೇ ಬ್ರಿಡ್ಜ್ ರಿಪೇರಿ ಮಾಡುವ 6.5 ಕೋಟಿ ರೂ. ಯೋ ಯನ್ನು ಜಾರಿ ಮಾಡಲಾ ಜನಪ್ರತಿನಿಧಿ ಗಳಿಗೆ ಯಾವುದ ಹೊಡೆಯೋದು ಎಂದು ಕಾಯುತ್ತಿದ್ದಾರೆ. ರಾಯಚೂ ರ ಜನಪ್ರತಿನಿಧಿಗಳಿಗೆ ಜನ ಹಿ ಮುಗ್ಗಾ ಉಗಿಯುತ್ತಿದ್ದಾರೆ. ರ ಅಮರಪ್ಪ ನಾಯಕನ ಮ ಜೀಪುಗಳಿಗೆ ಬೆಂಕಿ ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಒಟ್ಟಿನಲ್ಲಿ ಅನುಭವವೇ ಇ ಅತ್ಯಂತ ನಾಲಾಯಕ್ ಸರ್ಕಾ ಜನಪ್ರತಿನಿಧಿಗಳು ತಾವೆಷ್ಟು ಅಯೋಗ್ಯರು ಎಂ ಸಾಬೀತು ಮಾಡುತ್ತಿದ್ದಾರೆ.

● ಮಲ್ಲನಗೌಡ

ಯಡ್ಡಿ, ಮಠ-money

ಬಜೆಟ್ಟಿನಲ್ಲಿ ಮಠಗಳಿಗೆ ಅಷ್ಟೊಂದು ದುಡ್ಡು ಕೊಟ್ಟಿದ್ದನ್ನು ಪತ್ರಕರ್ತರು ಪ್ರಶ್ನಿಸಿದ್ದಾಗ, ಮುಖ್ಯಮ ಯಡಿಯೂರಪ್ಪ 'ಮಠಮಾನ್ಯಗಳಿಗೆ ದುಡ್ಡು ಕೊಟ್ಟರೆ ಒಳ್ಳೆ ಮಳೆ ಆಗುತ್ತೆ' ಎಂದು ಸಮರ್ಥಿಸಿಕೊಂಡಿದ್ದ. ಆತನ ಆಸೆ ಈ ರೀತಿಯಾಗಿ ಮಹಾಮಳೆಯ ಮೂಲಕ ಈಡೇರಿದೆ. ಯಡ್ಡಿಯ ಮಠ-mon ಸೂತ್ರದಿಂದ ಜನ ಮಠ ಮನೆ ಕಳೆದುಕೊಂಡು ಬೀದಿಗೆ ಬೀಳುವಂತಾಗಿದೆ!


ಇನ್ನೊಂದು ಕಡೆ ಮೂರ್ಖಮಂತ್ರಿ ರಾಮಚಂದ್ರೇಗೌಡ 'ನನಗೆ ಜ್ಯೋತಿಷ್ಯದಲ್ಲಿ ಭಾರೀ ನಂಬಿಕೆ ಜ್ಯೋತಿಷಿಗಳು ಮೊದಲೇ ಹೇಳಿದ್ದರೆ ನಾವು ಇದನ್ನೆಲ್ಲ ತಡೆಯುತ್ತಿದ್ದವು' ಎಂದು ಪೆದ್ದುಂಭಟ್ಟನಂತೆ ಗಿ ಅರಚುತ್ತಿದ್ದಾನೆ.

ಮಂತ್ರಾಲಯಕ್ಕೆ ಬೆಣ್ಣೆ ಲಿಂಗಾಯತರಿಗೆ ಸುಣ್ಣ?

ಸಾವಿನ ಸುರಿಮಳೆಯಲ್ಲೂ ಯಡ್ಡಿ ಸರ್ಕಾರ ಚಿಡ್ಡಿ ಬುದ್ಧಿಯನ್ನು ಬಿಡಲಿಲ್ಲ.

ಮಂತ್ರಾಲಯ ಹೇಳಿಕೇಳಿ ಬ್ರಾಹ್ಮಣರ ...ಣ್ಯಕ್ಷೇತ್ರ. ನೆರೆಯ ಆಂಧ್ರಪ್ರದೇಶದಲ್ಲಿದ್ದರೂ, ...ಧ್ರಸರ್ಕಾರದ ಅಧಿಕಾರಿಗಳ ಹಿಂದೇ ...ಂತ್ರಾಲಯಕ್ಕೆ ಮುಗಿಬಿದ್ದರೂ ರಾಜ್ಯ ಸರ್ಕಾರ ...ದೆ ಮುಂದೆನ್ನದೇ ಹತ್ತುಕೋಟಿ ಮಂಜೂರು ...ಡುತ್ತದೆ. ಆದರೆ ದೇವದುರ್ಗ ತಾಲ್ಲೂಕಿನ ...ಗಲ್ಲು ಶಿವಶರಣರ ಪಾಲಿಗೆ ...ಂತ್ರಾಲಯಕ್ಕಿಂತಲೂ ಮಹತ್ವದ್ದೆಂಬುದನ್ನೇ ಯಡ್ಡಿ ...ರ್ಕಾರ ಮರೆತಿತ್ತು. ಬಸವಾದಿ ಶಿವಶರಣರ ಪೈಕಿ ...ಲ್ಲಮಪ್ರಭು ಶೂನ್ಯಪೀಠಾಧ್ಯಕ್ಷರಾಗಿದ್ದವರು. ...ವದುರ್ಗ ತಾಲ್ಲೂಕಿನ ಗೂಗಲ್ಲು ಅವರ ಐಕ್ಯಸ್ಥಳ. ...ಮ್ಮ ಕೊನೆಗಾಲವನ್ನು ಅಲ್ಲೇ ಕಳೆದು ಅಲ್ಲೇ ಐಕ್ಯರಾದ ಅಲ್ಲಮಪ್ರಭು ಕಾರಣಕ್ಕೆ ಲಿಂಗಾಯತರಲ್ಲಿ ಮಂತ್ರಾಲಯಕ್ಕಿಂತಲೂ ದೊಡ್ಡ ಪಾವಿತ್ರ್ಯ ಗೂಗಲ್ಲಿಗಿದೆ.

ಮೊನ್ನೆ ಬಂದ ಪ್ರವಾಹದಲ್ಲಿ ಇಡೀ ಗೂಗಲ್ಲನ್ನೇ ಕೃಷ್ಣಾನದಿ ನುಂಗಿಹಾಕಿದೆ. ಸತ್ತವರ ಸಂಖ್ಯೆಯನ್ನು ಲೆಕ್ಕವಿಟ್ಟವರ್‍ಯಾರು? ಹಾಗೇ ಬಸವಣ್ಣನವರ ಐಕ್ಯಸ್ಥಳವಾದ ಕೂಡಲಸಂಗಮ ಕೂಡಾ ನಾಮಾವಶೇಷಗೊಂಡಿದೆ. ಕೃಷ್ಣಾನದಿಯ ದಂಡೆಗುಂಟ ಹೂವಿನಹಡಗಿ, ಬೆಣಕಲ್ ಇತ್ಯಾದಿ ವೀರಶೈವರ ಹಲವಾರು ಪುಣ್ಯಕ್ಷೇತ್ರಗಳ ಪಟ್ಟಿಯೇ ದೊಡ್ಡದಾಗುತ್ತದೆ. ಲಿಂಗಾಯತರ ಮಟ್ಟಿಗೆ ಮಂತ್ರಾಲಯಕ್ಕಿಂತಲೂ ಇವುಗಳ ಪಾವಿತ್ರ್ಯತೆಯೇ ದೊಡ್ಡದು.



ಅಲ್ಲಮಪ್ರಭುವಿನ ಐಕ್ಯಸ್ಥಳ ಪುಣ್ಯಕ್ಷೇತ್ರವಲ್ಲವೇ?

ವಿಪರ್ಯಾಸವೆಂದರೆ ಮಂತ್ರಾಲಯಕ್ಕೆ ನೀರು ನುಗ್ಗಿದೆ ಎಂಬ ಸುದ್ದಿ ಬಂದಿದ್ದೇ ತಡ ಮಂತ್ರಿಣಿ ಶೋಭಾ ಕರಂದ್ಲಾಜೆ ಹೆಲಿಕಾಪ್ಟರ್‌ನಲ್ಲಿ ಹೋಗಿ ಸ್ವಾಮಿ ಸುಯತೀಂದ್ರರನ್ನು ರಕ್ಷಿಸುತ್ತಾಳೆ. ಆವತ್ತು ಸುಯತೀಂದ್ರರ ಜೊತೆಗಿದ್ದವರು ಸಂಸದ ಅನಂತ್‌ಕುಮಾರ್‌ರ ಚೇಲಾ ಸುಬ್ಬಣ್ಣ. ಹೆಲಿಕಾಪ್ಟರ್ ಕೊಂಡೊಯ್ದು ಶೋಭಕ್ಕ ಪ್ರಾಣ ಉಳಿಸಿದ್ದು ಮಾತ್ರ ಈ ಇಬ್ಬರು ಪುಣ್ಯವಂತರನ್ನು ಮಾತ್ರ. ಶೋಭಕ್ಕನ ಕಣ್ಣೆದುರೇ ನಾಲ್ವರು ಭಕ್ತಾದಿಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದರೂ, ಪ್ರಾಣ ಉಳಿಸುವಂತೆ ಅವರೆಲ್ಲ ಚೀರಾಡುತ್ತಿದ್ದರೂ ಮಂತ್ರಿಣಿ ಶೋಭಾ ಕರಂದ್ಲಾಜೆಗೆ ಅವರ್‍ಯಾರ ಪ್ರಾಣವೂ ಮುಖ್ಯವೆನಿಸುವುದಿಲ್ಲ.

ಕನಿಷ್ಠ ಸ್ವಾಮೀಜಿಯನ್ನು ರಕ್ಷಿಸಿದ ಮೇಲಾದರೂ ಕರಂದ್ಲಾಜೆ ಎರಡನೇ ಸುತ್ತು ಹೆಲಿಕಾಪ್ಟರ್ ಕೊಂಡೊಯ್ದು ಅವರ ಜೀವ ಉಳಿಸಬಹುದಿತ್ತು!


ಮಂತ್ರಾಲಯದ ಪುಣ್ಯಸಂತರ ಮುಂದೆ ಸಾಮಾನ್ಯ ಭಕ್ತಾದಿಗಳ ಪ್ರಾಣ ಯಾವ ಲೆಕ್ಕ? ಹಾಳಾಗಲಿ, ಕನಿಷ್ಠ ಅಧಿಕಾರಕ್ಕೆ ತಂದ ಲಿಂಗಾಯತರ ಮೇಲಾದರೂ ಅಕ್ಕರೆಯಿರಬೇಕಿತ್ತಲ್ಲವೇ? ಯಡ್ಡಿ ಸರ್ಕಾರದ ಕಾಳಜಿಯೇನಿದ್ದರೂ ಬ್ರಾಹ್ಮಣರಿಗೆ ಮೀಸಲಾಗಿತ್ತು. ಅಲ್ಲಮಪ್ರಭುವಿನ ಐಕ್ಯಸ್ಥಳ ಇಡಿಯಾಗಿ ಕೊಚ್ಚಿಹೋದರೂ ಯಾವೊಬ್ಬ ಮಂತ್ರಿಯೂ ಅತ್ತ ತಲೆಹಾಕಿಲ್ಲ, ಕೂಡಲಸಂಗಮ ನಾಮಾವಶೇಷಗೊಂಡ ಬಗ್ಗೆ ಸ್ವತಃ ಲಿಂಗಾಯತ ಮಂತ್ರಿಗಳೂ ಸಣ್ಣದೊಂದು ಹೇಳಿಕೆ ಕೊಡಲಿಲ್ಲ. ಆಂಧ್ರದ ಮಂತ್ರಾಲಯಕ್ಕೆ ಕೊಟ್ಟ ಹತ್ತು ಕೋಟಿಯೆಲ್ಲಿ, ಅಲ್ಲಮನ ಐಕ್ಯಸ್ಥಳವೇ ನಿಕಾಲಿಯಾದರೂ ಅದನ್ನು ಸುದ್ದಿಯೇ ಆಗದಂತೆ ನೋಡಿಕೊಂಡ ಬ್ರಾಹ್ಮಣ ಮಾಧ್ಯಮಗಳೆಲ್ಲಿ?

● ರಾ.ಸೋಮನಾಥ್

ಪರಿಹಾರನಿಧಿ ದೋಚುವ ಆರೆಸ್ಸೆಸ್‌ಗಳು



...ಉತ್ತರ ಕರ್ನಾಟಕದಲ್ಲಿ ಮಳೆ ನಿಂತಿದೆ. ಆದರೆ ... ಮಠ, ಕಾಳುಕಡಿ, ಜಾನುವಾರು ಎಲ್ಲವನ್ನೂ ...ದುಕೊಂಡಿರುವ ಜನರ ಬದುಕಿನ ಬಂಡಿ ಮತ್ತೆ ...ದಾರಿಗೆ ಬರಲು ಸಾಕಷ್ಟು ಸಮಯ ಬೇಕು. ...ಪೀಡಿತ ಪ್ರದೇಶಗಳ ಜನರಿಗೆ ಪುನರ್ವಸತಿ ...ಸಲು ಕೇಂದ್ರ, ರಾಜ್ಯ ಸರ್ಕಾರಗಳು ದೊಡ್ಡ ...ತ್ತದ ಯೋಜನೆಗಳನ್ನು ಹಮ್ಮಿಕೊಳ್ಳಲಿವೆ. ...ವಾರು ದಾನಿಗಳು ನೆರವಿಗೆ ಮುಂದೆ ...ದಿದ್ದಾರೆ. ರಾಜ್ಯ ಸರ್ಕಾರ ಖಾಸಗೀ ...ಪ್ಪಾಗಿತ್ವದಲ್ಲಿ ಪರಿಹಾರ ಕಾರ್ಯ, ಪುನರ್ವಸತಿ ...ಸುವುದಾಗಿ ಹೇಳಿದೆ. ಅಂದರೆ ಅದರ ಉದ್ದೇಶ ...ಎಸ್‌ಎಸ್‌ನ ಅಂಗಸಂಸ್ಥೆಗಳ ...ಮೂಲಕ ಪುನರ್ವಸತಿ ಕಾರ್ಯ ...ಡುವುದಾಗಿದೆ. ರಾಜ್ಯ ...ರದ ದೆಹಲಿ ಪ್ರತಿನಿಧಿ ...ಜಯಕುಮಾರ್ ಕೂಡಾ ...ಎಸ್‌ಎಸ್ ನಿಧಿಗೆ ದುಡ್ಡು ... ಎಂದಿದ್ದಾರೆ. ಇಲ್ಲೇ ...ಡುವಿರುವುದು.



...ಎಸ್‌ಎಸ್‌ನ ಅಂಗಸಂಸ್ಥೆಗಳು ...ಹಿಂದೆ ಭೂಕಂಪ, ...ಚಂಡಮಾರುತಗಳು ಸಂಭವಿಸಿದಾಗ ಪುನರ್ವಸತಿ ...ದಲ್ಲಿ ಕೋಟ್ಯಂತರ ರೂಪಾಯಿಗಳನ್ನು ...ರ್ಕಾಗ್ಗಿ ಬಳಸಿಕೊಂಡ ದಾಖಲೆಗಳಿವೆ. ...ಗಳು ನೀಡಿದ ಆ ಹಣ ಬಳಸಿ ಗುಜರಾತ್, ...ಗಳಲ್ಲಿ ಅಲ್ಪಸಂಖ್ಯಾತರ ದಮನ ಮಾಡಿದ ...ೀಷವನ್ನು ಅವು ಎದುರಿಸುತ್ತಿವೆ. ಆದ್ದರಿಂದ ... ಸರ್ಕಾರ ಅಂತಹ ಸಂಸ್ಥೆಗಳಿಗೆ ಪುನರ್ವಸತಿ ...ಬ್ದಾರಿ ನೀಡದಂತೆ ಜನ ...ಡಿಕೊಳ್ಳಬೇಕಾಗಿದೆ.

*2001 ರ ಗುಜರಾತ್ ಭೂಕಂಪ, 1999 ರ ...ಸ್ಸಾ ನೆರೆ ನಂತರ ಪುನರ್ವಸತಿ ಹೆಸರಲ್ಲಿ ...ಎಸ್‌ಎಸ್ ಅಂಗಸಂಸ್ಥೆಗಳು ನಡೆಸಿದ ದಗಲ್ಬಾಜಿತನದ ವಿವರಗಳು ಇಲ್ಲಿವೆ.

2002 ರಲ್ಲಿ ಗುಜರಾತ್ ಹತ್ಯಾಕಾಂಡದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಜನರ ಹತ್ಯೆ ಮಾಡಲಾಯ್ತು. ಎರಡು ಲಕ್ಷಕ್ಕೂ ಹೆಚ್ಚು ಜನರನ್ನು ಬೀದಿಗೆ ತರಲಾಯ್ತು. ಇವರಲ್ಲಿ ಬಹುತೇಕರು ಮುಸ್ಲಿಮರೇ ಆಗಿದ್ದರು. ಹಿಂದಿನ ವರ್ಷ ಗುಜರಾತ್ ಭೂಕಂಪ ಪರಿಹಾರನಿಧಿ ಹೆಸರಲ್ಲಿ ಎತ್ತಿದ್ದ ದುಡ್ಡಿನಲ್ಲಿ ಬಹುಪಾಲು ಹಣವನ್ನು ದ್ವೇಷ ಹುಟ್ಟಿಸುವ ಕೆಲಸಕ್ಕೆ, ಹತ್ಯಾಕಾಂಡಕ್ಕೆ ಬಳಸಿಕೊಂಡಂತಹ ನೀಚ ಇತಿಹಾಸವನ್ನು ಈ ಅಂಗಸಂಸ್ಥೆಗಳು ಹೊಂದಿವೆ. ಲಂಡನ್ನಿನ AWAAZ ಎಂಬ ಎನ್‌ಆರ್‌ಐಗಳೇ ಅಧಿಕವಿರುವ ಕೂಟವೊಂದು ಈ ಕುರಿತು ತನಿಖೆ ಮಾಡಿ ಆರೆಸ್ಸೆಸ್ ಅನ್ನು ಬೆತ್ತಲು ಮಾಡಿತ್ತು. ಆ ಕೂಟದ ವರದಿ ಪ್ರಕಾರ,

* ಹಿಂದೂ ಸ್ವಯಂಸೇವಕ ಸಂಘ (HSS) ಎಂಬ ಚಿಡ್ಡಿ ಸಂಘಟನೆಯು ಬ್ರಿಟಿಷ್ ಪೌರರಿಂದ ಭೂಕಂಪ, ನೆರೆ ಪರಿಹಾರ ನಿಧಿ ಹೆಸರಲ್ಲಿ ಮಿಲಿಯನ್‌ಗಟ್ಟಲೇ ಪೌಂಡ್‌ಗಳನ್ನು ಎತ್ತುವಳಿ ಮಾಡಿತ್ತು. ಇದರಲ್ಲಿ ಸೇವಾ ಇಂಟರ್‌ನ್ಯಾಷನಲ್ ಎಂಬ ಇನ್ನೊಂದು ಅಂಗಸಂಸ್ಥೆ ಸಕ್ರಿಯ ಪಾತ್ರ ವಹಿಸಿತ್ತು. ಹೀಗೆ ಎತ್ತಿದ ದಾನರೂಪದ ನಿಧಿಯನ್ನು ಭಾರತದ ಆರ್‌ಎಸ್‌ಎಸ್ ಶಾಲೆಗಳಿಗೆ, ಸಂಸ್ಥೆಗಳಿಗೆ ರವಾನೆ ಮಾಡಲಾಗಿತ್ತು. ಅಂದಂತೆ ಸೇವಾ ಇಂಟರ್‌ನ್ಯಾಷನಲ್ ರಿಜಿಸ್ಟರ್ ಆಗದ ಚಾರಿಟಿ ಸಂಸ್ಥೆ!
* ಬ್ರಿಟನ್ನಿನ ವಿಶ್ವ ಹಿಂದೂ ಪರಿಷತ್ ಬ್ರ್ಯಾಂಚ್ ಮತ್ತು ಕಲ್ಯಾಣ ಆಶ್ರಯ ಟ್ರಸ್ಟ್‌ಗಳು 'ಚಾರಿಟಿ' ಹೆಸರಲ್ಲಿ ನಿಧಿ ಸಂಗ್ರಹಿಸುತ್ತ ಬಂದಿದ್ದು, ಈ ನಿಧಿಯನ್ನು ಆರ್‌ಎಸ್‌ಎಸ್ ದ್ವೇಷ ಸಾಧನೆಗೆ ಬಳಸಿಕೊಳ್ಳುತ್ತಿದೆ.
* 1999 ರ ಒರಿಸ್ಸಾ ಪ್ರವಾಹ, 2001 ರ ಗುಜರಾತ್ ಭೂಕಂಪದ ಹೆಸರಲ್ಲಿ 2,60,000 ಪೌಂಡಗಳಿಗೂ ಹೆಚ್ಚು ಹಣ ಸಂಗ್ರಹಿಸಲಾಗಿತ್ತು. ಸಂತ್ರಸ್ತರಿಗೆ ಪರಿಹಾರ ವಿತರಿಸುವಾಗ ತಾರತಮ್ಯ ಎಸಗಲಾಗಿತ್ತು. ಬ್ರಾಹ್ಮಣರು ಮತ್ತು ಇತರ ಮೇಲ್ಜಾತಿಯ ಸಂತ್ರಸ್ತರಿಗೆ ನೆರವು ನೀಡಿ, ದಲಿತ, ಅಲ್ಪಸಂಖ್ಯಾತ ಸಂತ್ರಸ್ತರನ್ನು ಬೇಕೆಂದೇ ನಿರ್ಲಕ್ಷಿಸಲಾಗಿತ್ತು. ಸೇವಾ ಭಾರತಿ ಟ್ರಸ್ಟ್ ಹೆಸರಲ್ಲಿ ಆರ್‌ಎಸ್‌ಎಸ್ ಈ ಕೆಲಸ ಮಾಡಿತ್ತು. ದುರಂತಗಳ ವೇಳೆಯೂ ತನ್ನ ನೆಟ್‌ವರ್ಕ್ ವಿಸ್ತರಿಸಲು ಆರ್‌ಎಸ್‌ಎಸ್ ಹವಣಿಸುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೇ.
* ಸೇವಾ ಇಂಟರ್‌ನ್ಯಾಷನಲ್‌ನ ಶಿಕ್ಷಣ ವಿಭಾಗ ವಿದೇಶಿಯರಿಂದ ನಿಧಿ ಎತ್ತಿ ಇಲ್ಲಿ ಆರ್.ಎಸ್.ಎಸ್. ಶಾಲೆಗಳನ್ನು ಬೆಳೆಸುತ್ತಿದೆ. ಈ ಶಾಲೆಗಳಲ್ಲಿ ಮತಾಂಧತೆಯನ್ನು ಸಾರುವ ಸಿಲಬಸ್ ಇದ್ದು ಮಕ್ಕಳಲ್ಲಿ ಕೋಮು ನಂಜು ಬಿತ್ತಲಾಗುತ್ತಿದೆ.
* ಗುಜರಾತ್ ಭೂಕಂಪ ನಿಧಿಯಿಂದ ಚನಾಸ್ಮಾ ಎಂಬ ಹಳ್ಳಿಯಲ್ಲಿ ಪರಿಹಾರ ಕಾರ್ಯದಲ್ಲಿ ತೊಡಗಿದ್ದ ಲೋಕ ಕಲ್ಯಾಣ ಸಮಿತಿ ಎಂಬ ಚಿಡ್ಡಿ ಸಂಸ್ಥೆ ನಿಧಿಯನ್ನು ದುರ್ಬಳಕೆ ಮಾಡಿಕೊಂಡಿತ್ತಲ್ಲದೇ, ಮುಸ್ಲಿಮರನ್ನು ನಿರ್ನಾಮ ಮಾಡಲು ಯತ್ನಿಸಿತ್ತು. ವಕ್ಫ್ ಬೋರ್ಡಿನ ನೂರಾರು ಎಕರೆ ಜಾಗವನ್ನು ಆಕ್ರಮಿಸಿಕೊಂಡಿತ್ತು.
* ಹೀಗೆ ನಿಧಿಯ ರೂಪದಲ್ಲಿ ಹಣ ಪಡೆದ ಮಹಾರಾಷ್ಟ್ರದ ಜನಕಲ್ಯಾಣ ಸಮಿತಿ ಎಂಬ ಚಿಡ್ಡಿ ಸಂಸ್ಥೆ ಕ್ರಿಶ್ಚಿಯನ್ನರ ಮೇಲೆ ದಾಳಿ ನಡೆಸಿ ಸಿಕ್ಕಿಬಿದ್ದಿತ್ತು.

ಹೀಗೆ ಪರಿಹಾರ ನಿಧಿಯಲ್ಲೂ ದೋಚುವ, ಆ ಹಣ ಬಳಸಿಯೇ ಬಡ ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರ ಮೇಲೆ ದೌರ್ಜನ್ಯ ನಡೆಸುವ, ತನ್ನ ಸಿದ್ಧಾಂತದ ಪ್ರಚಾರ ಮಾಡುವ ಆರ್.ಎಸ್.ಎಸ್.ನ ಅಂಗಸಂಸ್ಥೆಗಳಿಗೆ ಯಾವ ಕಾರಣಕ್ಕೂ ಪರಿಹಾರ ಕಾರ್ಯಕ್ಕೆಂದು ಯಾರೂ ದುಡ್ಡು ಮತ್ತು ಇತರ ನೆರವನ್ನು ನೀಡಕೂಡದು. ನೀವು ಕಕ್ಕುಲಾತಿಯಿಂದ ಕೊಟ್ಟ ದುಡ್ಡು ಜೀವಗಳನ್ನು ಉಳಿಸಲು ಬಳಕೆಯಾಗುವ ಬದಲು ಕೋಮುವೈರಸ್ ಹರಡಲು ಬಳಕೆಯಾಗುತ್ತದೆ.

ಈಗಾಗಲೇ ರಾಜ್ಯದಲ್ಲಿ ಗೋವುಗಳ ಹೆಸರಲ್ಲಿ, ಸಾವಯವ ಕೃಷಿಯ ಹೆಸರಲ್ಲಿ ಆರ್.ಎಸ್.ಎಸ್. ಸಿದ್ಧಾಂತಿಗಳು ಸರ್ಕಾರದ ಕೋಟಿ ಕೋಟಿ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇಂತಹ ದುರುಳರನ್ನು ಪರಿಹಾರ, ಪುನರ್ವಸತಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಅಪಾಯಕಾರಿ ಎಂಬುದು ದಾನಿಗಳಿಗೆ, ಜನರಿಗೆ ಮನವರಿಕೆಯಾಗಲಿ.

● ಮಲ್ಲಿ

ಕಾರ್ಟೂನ್ ಕಾರ್ನರ್



ಗಂಗವ್ವಗೆ ಕರುಣೆಯಿಲ್ಲ ಸರ್ಕಾರಕ್ಕೆ ಕಣ್ಣಿಲ್ಲ!

ಅತ್ತ ಅರ್ಧ ಕರ್ನಾಟಕದ ಪ್ರಜೆಗಳು ಹೀಗೆ ಸಾವುಬದುಕುಗಳ ಮಧ್ಯೆ ಹೋರಾಟ ನಡೆಸುತ್ತಿದ್ದರೆ ಅವರೇ ಆರಿಸಿ ಕಳಿಸಿದ್ದ ಪ್ರಭುಗಳು ಮೈಸೂರಿನ ಸುತ್ತೂರು ಮಠದಲ್ಲಿ ಶವಾಸನ ಮಾಡುತ್ತಿದ್ದರು! ರೋಮ್ ಹೊತ್ತಿ ಉರಿಯುತ್ತಿದ್ದಾಗ ರೋಮ್‌ನ ದೊರೆ ನೀರೋ ಪಿಟೀಲು ಬಾರಿಸುತ್ತಾ ಮಜಾ ಮಾಡುತ್ತಿದ್ದನಂತಲ್ಲವೆ? ಅದೇ ರೀತಿಯಲ್ಲಿ ಸುತ್ತೂರು ಮಠದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಶೋಭಾ ಕರಂದ್ಲಾಜೆಯೊಂದಿಗೆ ಯೋಗಾಭ್ಯಾಸ ಮಾಡುತ್ತಿದ್ದರು. ತಮ್ಮ ಇಡೀ ಮಂತ್ರಿಮಂಡಲವನ್ನು ಕೂರಿಸಿ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯಿಂದ ಪಾಠ ಹೇಳಿಸಿಕೊಡುತ್ತಿದ್ದರು. ಬಗೆಬಗೆಯ ಭಕ್ಷ್ಯ ಭೋಜನಗಳನ್ನು ಸವಿಯುತ್ತಾ ಮಜಾ ಉಡಾಯಿಸುತ್ತಿದ್ದರು.

● ವರದಿ: 'ಲಂಕೇಶ್' ತಂಡ



"ಗಂಗವ್ವಗೆ ಕರುಣೆಯಿಲ್ಲ – ಸರ್ಕಾರಕ್ಕೆ ಕಣ್ಣಿಲ್ಲ!" – ಇದು ನಾವು ಹೇಳುತ್ತಿರುವ ಮಾತಲ್ಲ. ಉತ್ತರ ಕರ್ನಾಟಕದಲ್ಲುಂಟಾದ ಜಲಪ್ರಳಯದಲ್ಲಿ ಬದುಕುಳಿದು ಈಗ ಸಾವು-ಬದುಕುಗಳ ಮಧ್ಯೆ ಹೋರಾಡುತ್ತಿರುವ ವೃದ್ಧ ಮಹಿಳೆಯೊಬ್ಬಳು ಹೇಳಿದ ಮಾತು. ಆಕೆಯ ಈ ಮಾತು ಈ ಹೊತ್ತಿನ ಉತ್ತರ ಕರ್ನಾಟಕದ ಒಟ್ಟಾರೆ ದುರಂತವನ್ನು ಮಾರ್ಮಿಕವಾಗಿ ಬಿಂಬಿಸುತ್ತಿರುವುದಂತೂ ಸತ್ಯ.

ಕರ್ನಾಟಕದ ಚರಿತ್ರೆಯಲ್ಲೇ ಕೇಳಿಕಂಡರಿಯದಂಥ ಜಲಪ್ರಳಯವನ್ನು ಈಗ ಉತ್ತರ ಕರ್ನಾಟಕ ಕಂಡಿದೆ. ಅದೇ ಹೊತ್ತಿನಲ್ಲಿ, ಕರ್ನಾಟಕದ ಚರಿತ್ರೆಯಲ್ಲೇ ಕಂಡುಕೇಳರಿಯದಂಥ ಅನನುಭವಿ, ಅದಕ್ಷ ಮತ್ತು ನಿರ್ಲಜ್ಜ ಸರ್ಕಾರವನ್ನೂ ಕರ್ನಾಟಕ ಕಂಡಿದೆ. ಇವೆರಡೂ ಅಂಶಗಳು ಏಕಕಾಲಕ್ಕೆ ಒದಗಿ ಬಂದರೆ ಎಂಥ ಅನಾಹುತ ಸಂಭವಿಸಬಹುದೋ ಅದೇ ಈಗ ಉತ್ತರ ಕರ್ನಾಟಕದಲ್ಲಿ ಸಂಭವಿಸಿದೆ, ಸಂಭವಿಸುತ್ತಿದೆ.

ಉತ್ತರ ಕರ್ನಾಟಕ ಸದಾ ಬರಗಾಲದಿಂದ ಬಳಲುವ ನಾಡು. ಮಳೆಯಾಗಲಿ ಎಂದು ಅಲ್ಲಿನ ಜನ ದೇವರಲ್ಲಿ ಬೇಡಿಕೊಳ್ಳುವುದುಂಟು. ಮಳೆಯಾದರೆ ವರ್ಷವಿಡೀ ದಿನಕ್ಕೆ ಎರಡು ಹೊತ್ತು ಕೂಳು ತಿನ್ನಬಹುದೆಂಬ ಖುಷಿಯಿಂದ ಹಬ್ಬವನ್ನಾಚರಿಸುವುದುಂಟು. ಆದರೆ ಈ ಬಾರಿ ಬಂದಿದ್ದು ಮಳೆಯಲ್ಲ, ಜಲಪ್ರಳಯ. ಹೌದು, ಇದು ಕರ್ನಾಟಕ ಹಿಂದೆಂದೂ ಕಂಡುಕೇಳರಿಯದಂಥ ಜಲಪ್ರಳಯ. ಕಳೆದ ಒಂದು ನೂರು ವರ್ಷಗಳಲ್ಲಿ ಇಂಥ ಭೀಕರ ಮಳೆಯನ್ನು, ನೆರೆಯನ್ನು ಇಲ್ಲಿ ಯಾರೂ ಕಂಡಿದ್ದಿಲ್ಲ. ಮುಂಗಾರು ಮಳೆ ಕೈಕೊಟ್ಟದ್ದರಿಂದ ಹೆಚ್ಚೆಂದರೆ ಹಿಂಗಾರು ಮಳೆ ಸ್ವಲ್ಪ ಜೋರಾಗಿ ಹೊಡೆಯಬಹುದೆಂದಷ್ಟೇ ಜನ ಅಂದುಕೊಂಡಿದ್ದರು. ಆದರೆ ಕುಂಭದ್ರೋಣ ಮಳೆ ಜಲಪ್ರಳಯವಾಗಿ ತಮ್ಮ ಬದುಕನ್ನೇ ಸರ್ವನಾಶ ಮಾಡುತ್ತದೆಂದು ಯಾರೂ ಅಂದಾಜಿಸಿರಲಿಲ್ಲ.

ಮಳೆ ಜೋರಾಗುತ್ತಿದ್ದಂತೆಯೇ ಜನರ ಗುಡಿಸಲುಗಳೊಳಗೆ, ಮನೆಗಳೊಳಗೆ ನಿಧಾನವಾಗಿ ಮೊಣಕಾಲು ಮಟ್ಟ ನೀರು ತುಂಬಲಾರಂಭಿಸಿತು. ನೀರಿನ ಪ್ರಮಾಣ ಹೆಚ್ಚಾಗುತ್ತಿದ್ದಂತೆಯೇ ಕೈಗೆ ಸಿಕ್ಕ ಸಾಮಾನುಗಳನ್ನು ಎತ್ತಿಕೊಂಡು, ಕಂಕುಳಲ್ಲಿ ಪುಟ್ಟ ಕಂದಮ್ಮಗಳನ್ನು ಎತ್ತಿಕೊಂಡು ಬದುಕಿದರೆ ಸಾಕೆಂದು ಮನೆಮಠಗಳನ್ನು ತೊರೆದು ಊರಿನ ಎತ್ತರ ಪ್ರದೇಶಗಳಿಗೆ ತಂಡೋಪತಂಡವಾಗಿ ಹೊರಡಲಾರಂಭಿಸಿದರು. ಊರಿಗೆ ಊರೇ ಮುಳುಗುವ ಹಂತ ಬರುತ್ತಿದ್ದಂತೆಯೇ ಇಡೀ ಊರನ್ನೇ ತೊರೆದು ಸಾಮೂಹಿಕವಾಗಿ ಎತ್ತರದ ಪ್ರದೇಶಗಳಿಗೆ ಗುಳೆ ಹೋದರು. ಹೊರಡುವಾಗ ತಮ್ಮ ಪಾತ್ರೆ ಪಗಡೆ, ಬಟ್ಟೆ ಬರೆ ಒಂದನ್ನೂ ತರಲಿಲ್ಲ, ಉಟ್ಟ ಬಟ್ಟೆಯಲ್ಲೆ ಎತ್ತರದ ಬಟಾ ಬಯಲಿನ ಪ್ರದೇಶಕ್ಕೆ ಬಂದು ನಿಂತರೇನೋ ಖರೆ. ಅಲ್ಲಿ ಅವರಿಗೆ ಸೂರಿರಲಿಲ್ಲವಾದ್ದರಿಂದ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲೇ

ಸೂತಕದಲ್ಲೂ ಕೀಳು ರಾಜಕೀಯ


ಪ್ರವಾಹಪೀಡಿತ ಜನ ತಮ್ಮ ಬಂಧುಮಿತ್ರರನ್ನು ಕಳೆದುಕೊಂಡು ನೋವಿನಿಂದ ಬಳಲುತ್ತಿದ್ದರೆ, ಬದುಕುಳಿದವರು ಸಾವು-ಬದುಕುಗಳ ಮಧ್ಯೆ ಹೋರಾಡುತ್ತಿದ್ದರೆ ತಡವಾಗಿ ಯಡಿಯೂರಪ್ಪನ ಮಂತ್ರಿಮಹೋದಯರು ಸೂತಕದಲ್ಲೂ ಕೀಳು ಮಟ್ಟದ ರಾಜಕೀಯ ಮಾಡುತ್ತಿರುವುದು ಎಂಥವರಿಗೂ ಹೇವರಿಕೆ ಹುಟ್ಟಿಸುತ್ತದೆ. ಸುತ್ತೂರಿನಲ್ಲಿ ಮಜಾ ಉಡಾಯಿಸಿ ಪ್ರವಾಹಪೀಡಿತ ಪ್ರದೇಶಗಳಿಗೆ ತಡವಾಗಿ ಬಂದಿದ್ದನ್ನು ಹೇಗೋ ಕ್ಷಮಿಸಬಹುದಿತ್ತೇನೋ? ಆದರೆ, ಬಂದ ಮೇಲಾದರೂ ಅವರು ಮಾಡುತ್ತಿರುವುದೇನು? ಕೆಲವು ಉದಾಹರಣೆಗಳನ್ನೇ ನೋಡಿ.



ರಾಜವೆಂಕಟಪ್ಪನಾಯಕ

ಗುಲಬರ್ಗಾ ಜಿಲ್ಲೆಯ ಉಸ್ತುವಾರಿ ಸಚಿವ ಲಕ್ಷ್ಮಣ ಸವದಿ ಮೈಸೂರಿನಲ್ಲಿ ತಮ್ಮ ಪಕ್ಷದ [illegible] ಗುಲಬರ್ಗಾದ ಕಡೆ ದೌಡಾಯಿಸಿ ಬಂದರೇನೋ ಖರೆ. ಆದರೆ ಅಲ್ಲಲ್ಲಿ ನಿರಾಶ್ರಿತರ ಮೊರೆ ಕೇಳಿದಂತೆ ಮಾಡಿ, ತಮ್ಮ ಪಕ್ಷದ ವರ್ಚಸ್ಸು ಬೆಳೆಯಲು ಏನೇನು ಗಿಮಿಕ್ ಮಾಡಲು ಸಾಧ್ಯವೋ ಅದನ್ನು ಮಾಡುತ್ತಾ ಹೋದರು. ಶಹಾಪುರ ತಾಲ್ಲೂಕು ಕೂಡ ಪ್ರವಾಹದಿಂದ ಬಹಳವಾಗಿ ಬಳಲಿದೆ. ಲಕ್ಷ್ಮಣ ಸವದಿ ಅದೇ ತಾಲ್ಲೂಕಿನ ಮೂಲಕ ಹಾದುಹೋದರಾದರೂ ಜನರ ಬವಣೆಗಳನ್ನು ಕೇಳಲಿಲ್ಲ. ಆತ ಹಾದುಹೋಗುತ್ತಿದ್ದ ರಸ್ತೆಯ ಪಕ್ಕದಲ್ಲೇ ನಿರಾಶ್ರಿತರಿಗಾಗಿ ನಿರ್ಮಿಸಿದ್ದ ಗಂಜಿ ಕೇಂದ್ರವಿದ್ದರೂ ಕಾರು ನಿಲ್ಲಿಸಿ ಜನರನ್ನು ಮಾತನಾಡಿಸಲಿಲ್ಲ. ಏಕೆ ಗೊತ್ತೆ? ಆ ಕ್ಷೇತ್ರದಲ್ಲಿ ತಮ್ಮ ಬಿಜೆಪಿ ಪಕ್ಷದ ಅಭ್ಯರ್ಥಿಯನ್ನು ಜನ ಗೆಲ್ಲಿಸಿಲ್ಲ. ಹಾಗಾಗಿ, ಅವರ ಬವಣೆ ಕೇಳುವುದಕ್ಕೆ ಬಿಜೆಪಿ ತಯಾರಿಲ್ಲ. ಇದು ಲಕ್ಷ್ಮಣ ಸವದಿಯ ಮತ್ಸರ ರಾಜಕಾರಣ.

"ಇದೊಂದು ಸಲ ನನ್ನನ್ನು ಗೆಲ್ಲಿಸಿ ಕಳಿಸಿ. ಇಡೀ ರಾಯಚೂರು ಸಂಸದೀಯ ಮತಕ್ಷೇತ್ರವನ್ನು ನೀವೆಲ್ಲ ನಿಬ್ಬೆರಗಾಗಿ ನಿಂತು ನೋಡುವಂತೆ ಅಭಿವೃದ್ಧಿ ಪಡಿಸುತ್ತೇನೆ. ನನಗೆ ಹಣದ ಮೇಲೆ ಯಾವುದೇ ವ್ಯಾಮೋಹ ಇಲ್ಲ, ನನಗೆ ಆ ಶಿವ ಬೇಕಾದಷ್ಟು ಕೊಟ್ಟಿದ್ದಾನೆ. ನನಗೆ ಈಗ ಇರುವುದು ನಿಮ್ಮ ಸೇವೆಯ ಭಾಗ್ಯ. ಅದನ್ನು ನೀವೆಲ್ಲ ಮನಸು ಮಾಡಿ ಕರುಣಿಸಿ......" ಎಂದೆಲ್ಲ ಹಲುಬಿ ಜನಸಾಮಾನ್ಯರ ಓಟನ್ನು ಪಡೆದು ಗೆಲುವು ಪಡೆದಿದ್ದ ಬಿಜೆಪಿಯ ಸಂಸದ ಸಣ್ಣ ಫಕೀರಪ್ಪ ರಾಯಚೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಹಾಪುರ, ಸುರಪುರ, ಯಾದಗಿರ, ದೇವದುರ್ಗದ ಹಳ್ಳಿಗಳಲ್ಲಿ ನೆರೆಯಿಂದ ಜನರ ಬವಣೆ ಮುಗಿಲು ಮುಟ್ಟಿದ್ದರೂ ಅತ್ತ ಹಣಕಿ ಹಾಕಿಯೂ ನೋಡಿಲ್ಲ. ಜನಸಾಮಾನ್ಯನ ಜೀವಗಳು ತತ್ತರಗೊಂಡು ಒದ್ದಾಡುತ್ತ ಸಾಯುತ್ತಿದ್ದರೂ ಈ ಮಹಾಶಯ ಈಗಲೂ ನಾಪತ್ತೆಯಾಗಿದ್ದಾನೆ.



ಲಕ್ಷ್ಮಣ ಸವದಿ

ಸುರಪುರದ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಎಂಬ ದೊರೆ ಕೇಂದ್ರ ಸಚಿವ ಮಲ್ಲಿಕಾರ್ಜುನ ಖರ್ಗೆ ಬರುವವರೆಗೂ ತಮ್ಮ ಅರಮನೆಯಲ್ಲಿಯೆ ವಿರಾಜಮಾನನಾಗಿದ್ದ. ಕೊನೆಗೂ ಖರ್ಗೆಯ ಖಡಕ್ ಮಾತುಗಳಿಂದ ಎಚ್ಚೆತ್ತ ವೆಂಕಟಪ್ಪ ನಾಯಕ ಒಂದೆರಡು ಗಂಜಿ ಕೇಂದ್ರಗಳಿಗೆ ಭೇಟಿ ನೀಡಿದಂತೆ ಮಾಡಿ ಮತ್ತೆ ತಮ್ಮ ಅರಮನೆಯನ್ನು ಹೊಕ್ಕಿದ್ದಾನೆ. ಆದರೆ ಶಾಸಕ ರಾಜುಗೌಡ ಮಾತ್ರ ನಡುಗಡ್ಡೆಯಾಗಿದ್ದ ಊರುಗಳಲ್ಲಿಯ ಜನಗಳನ್ನು ಸಂರಕ್ಷಿಸಲು ಹಿಂದೆಮುಂದೆ ನೋಡದೆ ಹಲವಾರು ಕಡೆ ತಾವೆ ಮುನ್ನುಗ್ಗಿ ಹೋಗುತ್ತಿದ್ದದ್ದು ಅವರ ಮಾನವೀಯ ಕಳಕಳಿಗೆ ಸಾಕ್ಷಿಯಾಗಿತ್ತು.






ಮಾನವೀಯತೆ ಮೆರೆದವರು

ಶಹಾಪುರ ತಾಲೂಕಿನ ಗೌಡೂರ ಗ್ರಾಮ ಸಂಪೂರ್ಣ ಜಲಾವೃತಗೊಂಡಿತ್ತು, ಹೊಲವೊಂದರಲ್ಲಿ ಮನೆ ಕಟ್ಟಿಕೊಂಡಿದ್ದ ಆಂಧ್ರ ಮೂಲದ ಕುಟುಂಬದ ಬಹುತೇಕ ಸದಸ್ಯರು ಮನೆಯೊಳಗೆ ಬಂಧಿಯಾಗಿದ್ದರು. ಸುಮಾರು ಮೂವತ್ತು ಜನರು ವಾಸವಾಗಿದ್ದ ಮನೆಯ ಜನರೆಲ್ಲ ಹೌಹಾರಿದ್ದರು. ಆದರೂ ತೆಪ್ಪಗಳಾಗಲಿ, ಮಶಿನ್ ಬೋಟ್‌ಗಳಾಗಲಿ ಅಲ್ಲಿ ಸುಳಿಯಲಿಲ್ಲ.


ಸಮಾಧಾನದ ಸಂಗತಿಯೆಂದರೆ ಶಹಾಪುರ ತಾಲೂಕಿನ ಪಿಎಸ್‌ಐ ಎಲ್.ಸಿ. ಕೋಲಕರ್ ಹಾಗೂ ಸರ್ಕಲ್ ಇನ್ಸಪೆಕ್ಟರ್ ಚಂದ್ರಕಾಂತ ಪೂಜಾರಿಯವರು ಮಾತ್ರ ತಮ್ಮ ಜೀವದ ಹಂಗು ತೊರೆದು ಧುಮ್ಮಿಕ್ಕಿ ಹರಿಯುತ್ತಿದ್ದ ನೀರಿನಲ್ಲಿ ಸುಮಾರು ಐದು ತಾಸು ಗುಲ್ಬರ್ಗಾದಿಂದ ತರಿಸಿದ ಬೋಟ್‌ಗಳೊಂದಿಗೆ ಈಜಿ ಹೋಗಿ ದೂರದ ದಡದಲ್ಲಿ ಸಾವಿನ ದವಡೆಯಲ್ಲಿ ನಿಂತಿದ್ದ ಸುಮಾರು 40 ಜೀವಗಳನ್ನು ರಕ್ಷಿಸಿದ್ದು ಅವರ ಮಾನವೀಯತೆಗೆ ಸಾಕ್ಷಿಯಾಗಿತ್ತು.

ಕೃಷ್ಣಾ ನದಿಗೆ ಬಸವಸಾಗರ ಜಲಾಶಯದಿಂದ 4.5 ಲಕ್ಷಕ್ಕೂ ಹೆಚ್ಚು ಕ್ಯೂಸೆಕ್ಸ್ ನೀರನ್ನು ಹರಿಯಬಿಡಲಾಗಿತ್ತು, ಹೀಗಾಗಿ ನದಿಪಾತ್ರದ ಊರುಗಳಾದ ಕೊಳ್ಳೂರು, ಟೋಣ್ಣೂರು, ಯಕ್ಷಿಂತಿ, ಗೌಡೂರು, ಗೊಂದೆನೂರು, ಮರಕಲ್, ಹೈಯ್ಯಾಳ, ಹುಲಕಲ್, ಮದರಕಲ್, ಇಟಗಾ(ಎಸ್), ಅಗಸ್ತಾಳ, ಅರಳ್ಳಿ, ಕಂಚನಕವಿ, ಅನಕಸೂಗೂರು, ಐಕೂರು, ಗುಂಡಲಗೇರಾ, ಶಿವಪುರ, ಕೋಡಾಲ್ ಮುಂತಾದ 20ಕ್ಕೂ ಹೆಚ್ಚು ಗ್ರಾಮಗಳು ಜಲಾವೃತಗೊಂಡಿದ್ದವು.

ಮೇಲಿನ ಊರುಗಳ ಜನರೆಲ್ಲ ಅನಿವಾರ್ಯವಾಗಿ ಬದುಕಿತು ಬಡಜೀವವೆ ಎಂದೆನ್ನುತ್ತ ಶಹಾಪುರ ಪಟ್ಟಣದ ಶಾಲಾ ಆವರಣಕ್ಕೆ ಬಂದರು. ಅವರೆಲ್ಲ ಇಲ್ಲಿಗೆ ಬಂದಾಗಿನ ಪರಿಸ್ಥಿತಿಯೋ ಎಲ್ಲಾ ಅಯೋಮಯವಾಗಿತ್ತು, ಆದರೆ ಸ್ವಲ್ಪ ಸಮಯದ ನಂತರ ಬೀಜ ಹಾಗೂ ಗೊಬ್ಬರ ಮಾರಾಟಗಾರರ ಸಂಘ ಸ್ವಯಂ ತಾವೇ ನಿಂತು ಎಲ್ಲರಿಗೂ ಊಟದ ಸಾಮಾನುಗಳನ್ನೆಲ್ಲ ಒದಗಿಸಿ ನೆರವು ನೀಡಿತು. ಸ್ಥಳೀಯ ಸಿ.ಡಿ.ಪಿ.ಓ. ಪ್ರಭಾಕರ ನೊಂದುಕೊಂಡು ಬಂದ ಜೀವಿಗಳ ಸಂಕಟಕ್ಕೆ ಧ್ವನಿಯಾಗುತ್ತಿದ್ದರು.

ಸ್ಥಳೀಯ ಜೆಎಂಎಫ್‌ಸಿ ಕೋರ್ಟಿನ ನ್ಯಾಯಾಧೀಶ ಸತೀಶ ಎಸ್.ಟಿ. ನ್ಯಾಯಾಲಯದಲ್ಲಿ ಕುಳಿತು ಕಡತಗಳನ್ನಷ್ಟೆ ತಿರುವಿ ಹಾಕಿ ನ್ಯಾಯ ಹೇಳುವ ಬದಲು ತಮ್ಮ ಸುತ್ತಮುತ್ತಲಿರುವ ಗೋಡೆಗಳನ್ನು ಕೆಡವಿ ಜನಸಾಮಾನ್ಯನ ನೋವನ್ನು ಕಿವಿಯಾರೆ ಕೇಳಲು ಹಲವಾರು ಜನವಸತಿ ಕೇಂದ್ರಗಳಿಗೆ ಭೇಟಿ ನೀಡಿದರು. ಸ್ಥಳದಲ್ಲಿಯೆ ಜನರ ಕುಂದುಕೊರತೆಗಳನ್ನು ಗಮನಿಸಿ ತಾಲ್ಲೂಕು ದಂಡಾಧಿಕಾರಿಗಳಿಗೆ ಪರಿಹಾರ ನೀಡಲು ಸೂಚಿಸಿ, ನೆರೆಹಾವಳಿಯಿಂದ ಹಾನಿಗೀಡಾದ ಪ್ರದೇಶಗಳಿಗೆ ಭೇಟಿಕೊಟ್ಟು ಸಾಂತ್ವನ ಹೇಳಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

...ಸಿ ಬೆನೆದರು, ಹೊದ್ದುಕೊಳ್ಳಲು ಬ್ಲಾಂಕೆಟ್, ...ಇಲ್ಲದೇ ಚಳಿಯಲ್ಲೇ ಮಕ್ಕಳು, ಮಹಿಳೆಯರು, ...ಯರು, ವೃದ್ಧರು ಗಡಗಡ ನಡುಗಿದರು. ಅವರೆಲ್ಲಾ ...ಣ್ಣ ಮುಂದೆಯೇ ತಮ್ಮ ಮನೆ ನೀರಿನಲ್ಲಿ ...ತ್ತಿದ್ದುದನ್ನು, ಮನೆಯ ಸಾಮಾನು ...ಗಳೆಲ್ಲಾ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದುದನ್ನು ...ಅಸಹಾಯಕತೆಯಿಂದ ನೋಡುತ್ತಿದ್ದರು. ತಮ್ಮ ...ಜೊತೆಗೆ ಬೆಸೆದುಕೊಂಡು ಬೆಳೆದಿದ್ದ ದನಕರುಗಳ ...ವನ್ನು ಕೇಳಿಸಿಕೊಳ್ಳುತ್ತಿದ್ದರು. ಕುರಿ-ಕೋಳಿಗಳಂತೂ ...ಂತೆ ನೀರಿನಲ್ಲಿ ಸತ್ತು ತೇಲುತ್ತಾ ಹೋಗುವುದನ್ನು ...ದ್ದರು. ಮೊನ್ನೆ ಮೊನ್ನೆಯ ತನಕ ತಮ್ಮೊಂದಿಗೆ ...ಗಿ ಬದುಕಿದ್ದ ಹಲವು ಬಂಧು ಮಿತ್ರರು ಕುಸಿದ ...ಳಗೆ ಹೆಣವಾಗಿ ಕೊಳೆಯುತ್ತಿದ್ದರು. ಸುತ್ತಲೂ ...ತೆ ಮಳೆ ನೀರು ಹರಿಯುತ್ತಿದ್ದರೂ,



ಪ್ರಜಾವಾಣಿ

ನಡುಗಡ್ಡೆಯಲ್ಲಿದ್ದ ಈ ಜನರಿಗೆ ತಿನ್ನುವುದಕ್ಕೆ ಒಂದು ರೊಟ್ಟಿಯಿರಲಿಲ್ಲ, ಕನಿಷ್ಠ ಕುಡಿಯುವುದಕ್ಕೆ ಶುದ್ಧ ನೀರಿರಲಿಲ್ಲ, ಇಡೀ ಮುಗಿಲಿಗೆ ಮುಗಿಲೆ ಹರಕೊಂಡು ಭೂಮಿ ಮೇಲೆ ಬಿತ್ತೇನೋ ಎಂಬಂಥ ಸ್ಥಿತಿ.

ಇದು ಒಬ್ಬ ವ್ಯಕ್ತಿಯ ಕತೆಯಲ್ಲ, ಒಂದು ಹಳ್ಳಿಯ ವ್ಯಥೆಯಲ್ಲ, ಬೆಳಗಾವಿ, ಕೊಪ್ಪಳ, ಹಾವೇರಿ, ಬೀದರ, ಗದಗ, ಧಾರವಾಡ, ಬಾಗಲಕೋಟೆ, ಬಳ್ಳಾರಿ - ಮುಂತಾದ ಜಿಲ್ಲೆಗಳನ್ನೊಳಗೊಂಡ ಇಡೀ ಉತ್ತರ ಕರ್ನಾಟಕದ ಬಯಲುಸೀಮೆಯ ದಾರುಣ ಕತೆ. ಕೃಷ್ಣಾ, ತುಂಗಭದ್ರಾ, ಮಲಪ್ರಭಾ, ಘಟಪ್ರಭಾ ನದಿಗಳನ್ನೂ ಒಳಗೊಂಡಂತೆ ತೊರೆಗಳು, ಕೆರೆ ಕಟ್ಟೆಗಳು ಒಡೆದು ಇಡೀ ಗ್ರಾಮೀಣ ಪ್ರದೇಶವೇ ನೀರಿನಲ್ಲಿ ಮುಳುಗಿದ್ದರಿಂದ ಜನರ ಬವಣೆಗಳು ಹೇಳತೀರದಂತಾಗಿವೆ.

ಅತ್ತ ಅರ್ಧ ಕರ್ನಾಟಕದ ಪ್ರಜೆಗಳು ಹೀಗೆ ಸಾವುಬದುಕುಗಳ ಮಧ್ಯೆ ಹೋರಾಟ ನಡೆಸುತ್ತಿದ್ದರೆ ಅವರೇ ಆರಿಸಿ ಕಳಿಸಿದ್ದ ಪ್ರಭುಗಳು ಮೈಸೂರಿನ ಸುತ್ತೂರು ಮಠದಲ್ಲಿ ಶವಾಸನ ಮಾಡುತ್ತಿದ್ದರು! ರೋಮ್ ಹೊತ್ತಿ ಉರಿಯುತ್ತಿದ್ದಾಗ ರೋಮ್‌ನ ದೊರೆ ಫೆರೋ ಪಿಟೀಲು ಬಾರಿಸುತ್ತಾ ಮಜಾ ಮಾಡುತ್ತಿದ್ದನಂತಲ್ಲವೆ? ಅದೇ ರೀತಿಯಲ್ಲಿ ಸುತ್ತೂರು ಮಠದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಶೋಭಾ ಕರಂದ್ಲಾಜೆಯೊಂದಿಗೆ ಯೋಗಾಭ್ಯಾಸ ಮಾಡುತ್ತಿದ್ದರು. ತಮ್ಮ ಇಡೀ ಮಂತ್ರಿಮಂಡಲವನ್ನು ಕೂರಿಸಿ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯಿಂದ ಪಾಠ ಹೇಳಿಸಿಕೊಡುತ್ತಿದ್ದರು. ಬಗೆಬಗೆಯ ಭಕ್ಷ್ಯಭೋಜ್ಯಗಳನ್ನು ಸವಿಯುತ್ತಾ ಮಜಾ ಉಡಾಯಿಸುತ್ತಿದ್ದರು.

ಅತ್ತ ಉತ್ತರ ಕರ್ನಾಟಕದ ಜನ ನೀರಿನಲ್ಲಿ ಮುಳುಗುತ್ತಿದ್ದರೆ ಇತ್ತ ಯಡಿಯೂರಪ್ಪ 'ಕ್ಷೀರಬಂಧು' ಎಂಬ ಬಿರುದು ಬಾವಲಿಗಳನ್ನು ಸ್ವೀಕರಿಸುತ್ತಾ ಹೊಗಳುಭಟ್ಟರ ಹೊಗಳಿಕೆಯ ಮಹಾಪೂರದಲ್ಲಿ ಮುಳುಗಿದ್ದರು. ಅದಕ್ಕೇ ಮೊದಲೇ ಹೇಳಿದ್ದು "ಗಂಗವ್ವಗೆ ಕರುಣೆಯಿಲ್ಲ, ಸರ್ಕಾರಕ್ಕೆ ಕಣ್ಣಿಲ್ಲ" ಎಂಬ ಜಲಪ್ರಳಯದಲ್ಲಿ ಬದುಕುಳಿದ ಆ ಮುದುಕಿಯ ಮಾತು ಅಕ್ಷರಶಃ ಇಂದಿನ ಪರಿಸ್ಥಿತಿಯನ್ನು ಮಾರ್ಮಿಕವಾಗಿ ವಿವರಿಸುತ್ತದೆ ಎಂದು.

ಕರ್ನಾಟಕ ಕಂಡುಕೇಳರಿಯದಂಥ ಅನನುಭವಿ ಮತ್ತು ಅದಕ್ಷ ಸರ್ಕಾರ ಎಂದು ಮೊದಲು ಹೇಳಿದ್ದೂ ಇದೇ ಕಾರಣಕ್ಕೆ. ಮುಂಗಾರು ಮಳೆಯಾಗುತ್ತಿದ್ದಂತೆಯೇ ನಾಡಿನ ನೇಗಿಲಯೋಗಿಗಳು ಬಿತ್ತನೆ ಪ್ರಾರಂಭಿಸುತ್ತಾರೆ, ಅದಕ್ಕಾಗಿ ಅವರಿಗೆ ಬೀಜ ಗೊಬ್ಬರಗಳ ಅವಶ್ಯಕತೆಯಿರುತ್ತದೆ, ಹಾಗಾಗಿ ಮುಂಗಾರು ಮಳೆಗೆ ಮುಂಚೆಯೇ ರಾಜ್ಯಕ್ಕೆ ಬೇಕಾಗುವಷ್ಟು ಬೀಜ-ಗೊಬ್ಬರಗಳನ್ನು ದಾಸ್ತಾನು ಮಾಡಿಟ್ಟುಕೊಳ್ಳಬೇಕೆಂಬ

▶▶▶12

...ಸಿ ಶಾಸಕ ಶಿವಶೇಖರಪ್ಪ ಪಾಟೀಲ ...ಂಥ ಹೀನಾಯ ಸಂದರ್ಭದಲ್ಲೂ ತಮ್ಮ ...ನಾದ ಕೆಂಭಾವಿ ಗ್ರಾಮಕ್ಕೆ ಹೋಗಿ ಬರ ...ದ ಚೆಕ್‌ನ್ನು ಜಿಲ್ಲಾ ಉಸ್ತುವಾರಿ ಸಚಿವ ...ನವದಿಯಿಂದ ಕೊಡಿಸಿದರು. ಬಿಜೆಪಿಯ ಅಧ್ಯಕ್ಷ ಮಲ್ಲಣ್ಣಗೌಡ ಉಕ್ನಾಳ ತನ್ನ ...ಗಾಢ ನಿದ್ರೆಯಿಂದ ಎಚ್ಚೆತ್ತು ಟಿ.ವಿ ...ದವರನ್ನು ಕಟ್ಟಿಕೊಂಡು ಓಡಾಡುತ್ತ ತಮ್ಮ ಮುಖದರ್ಶನ ...ತ್ತಿದ್ದದ್ದನ್ನು ನೋಡಿ ಅನೇಕರು ...ಂಡರು.

...ಪ್ರೋಜು ನೀಡಲು ಹೋಗಿಯೆ ...ರಿನ ಶಾಸಕ ರಾಜಾ ವೆಂಕಟಪ್ಪನಾಯಕ ...ಲಿಂಗಸೂಗೂರಿನ ಶಾಸಕ ಮಾನಪ್ಪ ...ವಜ್ಜಲ ...ಸಹಾಮಾನ್ಯರ ಆಕ್ರೋಶಕ್ಕೆ ತುತ್ತಾಗಿ ...ಬು ತಪ್ಪಬೇಕಾಯಿತು. ಅದ್ದುಬಂದ ...ನ್ನು ನೂಕಿ ಅವರ ಕಾರುಗಳಿಗೆ ...ತಮ್ಮ ಅಸಮಾಧಾನವನ್ನು ...ಂಡರು.

...ಮನೆಯಲ್ಲಿ ಬೆಂಕಿಬಿದ್ದಿರುವಾಗ ಅದನ್ನು ...ಅಲ್ಲಿನ ಜನಗಳಿಗೆ ಸಾಂತ್ವನ ಹೇಳದ ...ತಾಲೂಕಿನ ಶಾಸಕ ದೊಡ್ಡಪ್ಪಗೌಡ ...ಪಾಟೀಲ ನರಿಬೋಳ ಸರಸರನೆ ಬಂದು

ಮಾಧ್ಯಮಗಳೆದುರು ಮಿಂಚಿದ್ದು ಅವರ ಜಾಯಮಾನದ ಪ್ರದರ್ಶನದಂತಿತ್ತು. ಮಾಜಿ ಮಂತ್ರಿ ಧರ್ಮಸಿಂಗ್‌ರ ಪುತ್ರ ಅಜಯ್ ಸಿಂಗ್ ಒಂದು ಹೆಜ್ಜೆ ಮುಂದೆ ಹೋಗಿ ನಿರಾಶ್ರಿತರ ಜೊತೆ ಕುಳಿತು, ಅವರಿಗೆ ಬಡಿಸಿದ ಅನ್ನವನ್ನು ತಾನೂ ಉಂಡು ಮಾಧ್ಯಮಗಳಿಗೆ ಮುಖ ಕೊಟ್ಟರು.

ಯಾವುದೋ ಒಂದು ಸಣ್ಣ ಸಂಗತಿಯ ಬೆನ್ನತ್ತಿ ಸಾಕಷ್ಟು ರಂಪ ಮಾಡಿ, ಆನಂತರ ಅದನ್ನು ಡೀಲ್‌ಮಾಡಿಕೊಳ್ಳುವ ಗುಲ್ಬರ್ಗಾದ ರಕ್ಷಣಾ ವೇದಿಕೆಯ ಸದಸ್ಯರು-ಪದಾಧಿಕಾರಿಗಳು ತುಟಿ ಎರಡು ಮಾಡದೆ ಗಪ್-ಚುಪ್ ಕುಳಿತಿದ್ದರು. ಇದೆಲ್ಲ ಸಾಲದೆಂಬಂತೆ ಯಾವಾಗಲೋ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಭೇಟಿಯಾದ ಫೋಟೋಗಳನ್ನೇ ಮತ್ತೆ ಪತ್ರಿಕೆಗಳಲ್ಲಿ ಮರು ಪ್ರಕಟವಾಗುವಂತೆ ನೋಡಿಕೊಂಡು ಪ್ರವಾಹಪೀಡಿತರಿಗೆ ನೆಲೆ ಒದಗಿಸಲು ಮನವಿ ಅರ್ಪಿಸಿದ್ದಾಗಿ ಪೋಜು ಕೊಟ್ಟಿದ್ದು ಜನಗಳ ಆಕ್ರೋಶಕ್ಕೆ ಕಾರಣವಾಗಿದೆ. ರಕ್ಷಣಾ ವೇದಿಕೆಗಳಿರುವುದು ಕನ್ನಡಿಗರ



ರಕ್ಷಣೆಗಾಗಿಯೋ ಅಥವಾ ಭಕ್ಷಣೆಗಾಗಿಯೋ ಎಂಬ ಅನುಮಾನ ಬರುವ ರೀತಿಯಲ್ಲಿ ಅವರು ವರ್ತಿಸುತ್ತಿದ್ದಾರೆ.


ಮಲಪ್ರಭಾ ನದಿ ಪ್ರವಾಹದಿಂದ ತತ್ತರಿಸಿರುವ ಜನರನ್ನು ವಿಚಾರಿಸುವ ನಾಟಕವಾಡಲು ಹುನಗುಂದ ತಾಲ್ಲೂಕಿನ ಕೊಪ್ಪ ಬಿಸನಾಳ ಗ್ರಾಮಕ್ಕೆ ಬಂದ ಶಿಕ್ಷಣ ಸಚಿವ ಆರವಿಂದ ಲಿಂಬಾವಳಿಯಲ್ಲಿ ಸಂತ್ರಸ್ತರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದರೆ ಆತ "ಇನ್ನೂ ಜೋರಾಗಿ ಹೊಯ್ಕೊಳ್ಳಿ" ಎಂದು ಅರಚಾಡಿ ಅಲ್ಲಿಂದ ಕಾಲ್ಕಿತ್ತಿದ್ದಾನೆ. ಜನ ಸಾವು ಬದುಕುಗಳ ಮಧ್ಯೆ ಹೋರಾಡುತ್ತಿದ್ದರೆ ಲಿಂಬಾವಳಿ ಚೆಲ್ಲಾಟವಾಡುತ್ತಿದ್ದುದನ್ನು ಕಂಡು ಎಂಥ ಸರ್ಕಾರವನ್ನು ಆರಿಸಿ ಕಳಿಸಿದೆವು ಎಂದು ಜನ ತಲೆ ಮೇಲೆ ಕೈಹೊತ್ತು ಅಳುತ್ತಿದ್ದಾರೆ.

ಬಾಗಲಕೋಟೆಯ ಗ್ರಾಮೀಣ ಭಾಗಗಳಲ್ಲಿ ಜಲಪ್ರಳಯದಂತೆ ಮಳೆ ಸುರಿಯುತ್ತಿದ್ದಾಗಲೇ ಬಾಗಲಕೋಟೆ ನಗರದಲ್ಲಿ ಬಿಜೆಪಿ ಪಕ್ಷ ಸಂಘಟನ ನಡೆಸುತ್ತಿತ್ತು! ಸಂಸದ ಗದ್ದಿಗೌಡ, ಚರಂತಿಮಠ, ಲಿಂಬಾವಳಿಗಳು ಪಕ್ಷಸಂಘಟನೆ ವೀಕ್ಷಿಸುವುದರಲ್ಲಿ ತಲ್ಲೀನರಾಗಿದ್ದರೆ

ಹೊರತು ನೆರೆಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟು, ಸಾವುಬದುಕಿನ ಮಧ್ಯೆ ಹೋರಾಡುತ್ತಿದ್ದ ಜನರ ನೆರವಿಗೆ ಬರಲಿಲ್ಲ, ಇಂಥ ಕನಿಷ್ಠ ಮಾನವೀಯತೆ, ಕಾಳಜಿ ಹೊಂದಿರದ ಜನರನ್ನು ಆಯ್ಕೆ ಮಾಡಿ ಕಳಿಸಿದ್ದಾರಲ್ಲ, ಉತ್ತರ ಕರ್ನಾಟಕದ ಜನ, ಅವರೆಲ್ಲ ಇಂದು ತಮ್ಮ ತಪ್ಪಿಗಾಗಿ ಪರಿತಪಿಸುತ್ತಿದ್ದಾರೆ.

ನೆನಪಿರಲಿ, ಗಣಿ ಕುಳ ಹಾಗೂ ಪ್ರವಾಸೋದ್ಯಮ ಸಚಿವ ಜಿ.ಜನಾರ್ಧನರೆಡ್ಡಿ ಬಳ್ಳಾರಿಯ ತನ್ನ ಬಂಗಲೆಯಲ್ಲಿ ಬೆಳಗ್ಗೆ ತಿಂಡಿ ತಿಂದು ಮಧ್ಯಾಹ್ನದ ಊಟವನ್ನು ಬೆಂಗಳೂರಿನಲ್ಲಿ ಮಾಡಿ ಮತ್ತೆ ಸಂಜೆ ಊಟಕ್ಕಾಗಿ ಬಳ್ಳಾರಿಯ ಬಂಗಲೆಗೆ ಹಿಂದಿರುಗುತ್ತಾನೆ. ಅದಕ್ಕಾಗಿ ತನ್ನ ಬಳಿ ಹಲವು ಹೆಲಿಕಾಪ್ಟರ್‌ಗಳನ್ನು ಇಟ್ಟುಕೊಂಡಿದ್ದಾನೆ. ಆದರೆ, ಉತ್ತರ ಕರ್ನಾಟಕದ ಹಲವಾರು ಕಡೆ ಜನ ನೀರಿನಿಂದ ಆವೃತವಾಗಿ ಅನ್ನ, ನೀರು ಇಲ್ಲದೇ, ಹಾಸಿಗೆ ಹೊದಿಕೆಗಳಿಲ್ಲದೆ, ಸುರಿಯುವ ಮಳೆಯಲ್ಲಿ ನಡುಗುತ್ತಿದ್ದರೆ ಅವರನ್ನು ರಕ್ಷಿಸುವುದಕ್ಕಾಗಿ ತನ್ನ ಒಂದು ಹೆಲಿಕಾಪ್ಟರ್ ಕಳಿಸಬೇಕೆಂಬ ಕನಿಷ್ಠ ಕಾಳಜಿಯೂ ಜನಾರ್ದನ ರೆಡ್ಡಿಗಿಲ್ಲ ಎಂದರೆ ಇವರದ್ದು ಎಂಥ ನಿಷ್ಕರುಣಿ ಮನಸ್ಸು ಎಂಬುದು ಅರ್ಥವಾಗುತ್ತದೆ.






ಕನಿಷ್ಠ ಮುಂಜಾಗ್ರತೆ ಈ ಸರ್ಕಾರಕ್ಕಿಲ್ಲ. ಅದನ್ನು ಅರ್ಥ ಮಾಡಿಸುವುದಕ್ಕೆ ಇಬ್ಬರು ಅನ್ನದಾತರು ಪೊಲೀಸರ ಗುಂಡಿಗೆ ಎದೆಯೊಡ್ಡಿ ಸಾಯಬೇಕಾಯಿತು.

ಈಗ ಹಿಂಗಾರು ಮಳೆ ಜೋರಾಗಿ ಸುರಿಯುತ್ತಿದ್ದಂತೆಯೇ ಮುಂಬರಲಿರುವ ಜಲಪ್ರಳಯದ ಮುನ್ಸೂಚನೆ ಕೊಟ್ಟಿತ್ತು. ತಕ್ಷಣವೇ ಯಡಿಯೂರಪ್ಪ ಸರ್ಕಾರ ಎಚ್ಚೆತ್ತುಕೊಂಡಿದ್ದರೆ ಈಗಾಗಿರುವ ಅಪಾರ ಸಾವುನೋವುಗಳಲ್ಲಿ, ಆಸ್ತಿಪಾಸ್ತಿ ನಷ್ಟದಲ್ಲಿ ಅರ್ಧದಷ್ಟನ್ನಾದರೂ ತಪ್ಪಿಸಬಹುದಿತ್ತು. ಆದರೆ ಯಡಿಯೂರಪ್ಪನವರಿಗೆ ಮತ್ತು ಅವರ ಸರ್ಕಾರಕ್ಕೆ ಜನರ ಕಷ್ಟಕಾರ್ಪಣ್ಯಗಳ ನಿವಾರಣೆಗಿಂತ ಸುತ್ತೂರು ಮಠದಲ್ಲಿ ಯೋಗಾಸನ ಮಾಡುವುದೇ ಪ್ರಮುಖವಾಗಿತ್ತು. ನರಹಂತಕ ನರೇಂದ್ರ ಮೋದಿಯಿಂದ ಪಾಠ ಹೇಳಿಸಿಕೊಳ್ಳುವುದೇ ಪ್ರಧಾನವಾಗಿತ್ತು. ರುಚಿರುಚಿಯಾದ ಭಕ್ಷ್ಯ ಭೋಜ್ಯಗಳನ್ನು ಸವಿಯುವುದೇ ಆದ್ಯತೆಯಾಗಿತ್ತು. ಬಿರುದು ಬಾವಲಿಗಳ ಕಿರೀಟ ತೊಟ್ಟುಕೊಂಡು ಮೆರೆಯುವುದೇ ಇಷ್ಟವಾಗಿತ್ತು. ಹಾಗಾಗಿ, ಉತ್ತರ ಕರ್ನಾಟಕದ ಕಡೆ ಯಾವೊಬ್ಬ ಮಂತ್ರಿಮಹೋದಯನೂ ಕಣ್ಣೆತ್ತಿ ನೋಡಲಿಲ್ಲ.

ತಮ್ಮದೇ ಲೋಕದಲ್ಲಿ ಮುಳುಗಿದ್ದ ಇಂಥ ಪಿಶಾಚಿಗಳನ್ನು ಎಬ್ಬಿಸುವಷ್ಟರಲ್ಲಿ ಅರ್ಧ ಕರ್ನಾಟಕ ಮಸಣಭೂಮಿಯಾಗಿತ್ತು. ಮಾಧ್ಯಮಗಳು, ವಿರೋಧ ಪಕ್ಷಗಳು, ನಾಡಿನ ಪ್ರಜ್ಞಾವಂತ ಪ್ರಜೆಗಳು, ಬುದ್ಧಿಜೀವಿಗಳು ಯಡಿಯೂರಪ್ಪನ ಹಾಗೂ ಅವರ ಸರ್ಕಾರದ ಈ ಕಲ್ಲು ಹೃದಯವನ್ನು, ಪೈಶಾಚಿಕ ವರ್ತನೆಯನ್ನು ಖಂಡತುಂಡವಾಗಿ ಖಂಡಿಸಿದ ಮೇಲೆಯೇ ಅವರಿಗೆ ಎಚ್ಚರವಾಗಿದ್ದು. ಈಗ ನಿದ್ರೆಯಿಂದ ಎದ್ದು ಕಣ್ಣುಜ್ಜಿಕೊಳ್ಳುತ್ತಾ ಉತ್ತರ ಕರ್ನಾಟಕದ ಕಡೆ ಹೋಗಿಬಂದಿದ್ದಾರೆ. ತಾವು ನೆರೆ ಪೀಡಿತ ಜನರಿಗೆ ಅನ್ನ ಆಹಾರ ಕೊಡುವುದಕ್ಕಾಗಿ, ಪುನರ್ವಸತಿ ಕಲ್ಪಿಸುವುದಕ್ಕಾಗಿ, ಬಟ್ಟೆಬರೆ ಒದಗಿಸುವುದಕ್ಕಾಗಿ ಎಷ್ಟೆಲ್ಲಾ ಶ್ರಮಪಡುತ್ತಿದ್ದೇವೆ ಎಂಬುದನ್ನು ತೋರಿಸಿಕೊಳ್ಳುವುದಕ್ಕಾಗಿ ಮಾಧ್ಯಮದವರನ್ನು, ಫೋಟೋಗ್ರಾಫರ್‌ಗಳನ್ನು ಜೊತೆಗೆ ಕರೆದುಕೊಂಡು ಹೋಗಿದ್ದಾರೆ. ಗಂಜಿ ಕೇಂದ್ರಗಳಲ್ಲಿ ಸಾಮಾನ್ಯ ಜನರೊಂದಿಗೆ ತಾವೂ ಉಂಡು ಜನಸಾಮಾನ್ಯರ ಬಗ್ಗೆ ತಮಗೆಷ್ಟು ಕಾಳಜಿಯಿದೆ ಎಂಬುದನ್ನು ತೋರ್ಪಡಿಸಲು ಹರಸಾಹಸ ನಡೆಸುತ್ತಿದ್ದಾರೆ. ವಾಪಸ್ ಬೆಂಗಳೂರಿಗೆ ಬಂದಿರುವ ಯಡಿಯೂರಪ್ಪ ಬೆಂಗಳೂರಿನಲ್ಲಿ ಪಾದಯಾತ್ರೆ ಮಾಡಿ ಜನರಿಂದ ಪರಿಹಾರ ನಿಧಿ ಸಂಗ್ರಹಿಸುವ ನಾಟಕವಾಡುತ್ತಿದ್ದಾರೆ. ಆ ಮೂಲಕ ಸುತ್ತೂರು ಮಠದಲ್ಲಿ ಯೋಗಾಸನ ಮಾಡಿ ಕಳೆದುಕೊಂಡ ಮಾನವನ್ನು ಮರಳಿ ಪಡೆಯುವುದಕ್ಕೆ ಪ್ರಯತ್ನಿಸುತ್ತಿದ್ದಾರೆ.



ಈಗ ಮಳೆ ನಿಂತಿದೆ. ಪ್ರವಾಹ ಕಡಿಮೆಯಾಗಿ ನೀರು ಇಳಿದಿದೆ. ಆದರೆ ಜನರ ಆಕ್ರಂದನ ನಿಂತಿಲ್ಲ. ಬಹುತೇಕ ಜನರು ಇನ್ನೂ ತಮ್ಮ ಹಳ್ಳಿಗಳಿಗೆ ಹಿಂತಿರುಗಿಲ್ಲ. ಬದುಕಿದರೆ ಸಾಕು ಎಂಬ ಧಾವಂತದಿಂದ ಹಳ್ಳಿಗಳನ್ನು ತೊರೆದ ಅವರು ಪಟ್ಟಣಗಳ ಸರಕಾರಿ ಶಾಲೆಗಳಲ್ಲೇ ತಂಗಿದ್ದಾರೆ. ಅವರನ್ನು ಕರೆದು ಕೂಡಿಸಿ ಮಾತಾಡುವವರಿಲ್ಲ. ಹಸಿದ ಹೊಟ್ಟೆಗೆ ಊಟ ಹಾಕುವವರಿಲ್ಲ. ಒಂದು ಹನಿ ನೀರು ಕೊಟ್ಟು ಸಂತೈಸುವವರೂ ಇಲ್ಲ. ಕಂದಮ್ಮಗಳು ಊಟವಿಲ್ಲದೇ ಹಸಿವಿನಿಂದ ಚೀತ್ಕಾರವಿಡುತ್ತಿವೆ. ಹಾಸಿಕೊಳ್ಳಲು, ಹೊದ್ದುಕೊಳ್ಳಲು ಚಾದ್ದಾರಗಳಿಲ್ಲ. ನೆನೆದ ಬಟ್ಟೆಗಳನ್ನು ಬದಲಾಯಿಸಲು ಹೆಚ್ಚುವರಿ ಬಟ್ಟೆಯಿಲ್ಲ. ಶಾಲೆ - ಕಾಲೇಜುಗಳ ಪ್ರಾಂಗಣವನ್ನೆ ತಮ್ಮ ಬದುಕಿನ ಆಲಯವನ್ನಾಗಿಸಿಕೊಂಡ ಈ ಜನತೆಯ ಕಣ್ಣುಗಳಲ್ಲಿ ಕನಸುಗಳೇ ಗುಳೆ ಎದ್ದು ಹೋಗಿವೆ. ಸರ್ಕಾರ ಗಂಜಿ ಕೊಡಲಾರಂಭಿಸಿದೆಯಾದರೂ ಹಸಿದ ಹೊಟ್ಟೆಗೆ ಅದು ಏತಕ್ಕೂ ಸಾಕಾಗುತ್ತಿಲ್ಲ. ಕೆಲವರಿಗಂತೂ ಅದೂ ಸಿಗುತ್ತಿಲ್ಲ.

ಇನ್ನೂ ಹಳ್ಳಿಗಳಿಗೆ ಹಿಂತಿರುಗಿದವರ ಪಾಡು ಇದಕ್ಕಿಂತಲೂ ಭೀಕರವಾಗಿದೆ. ತಮ್ಮ ಮನೆಗಳೆಲ್ಲಾ ನೀರಿನಲ್ಲಿ ನೆನೆದು ಮುರಿದು ಬಿದ್ದಿವೆ. ಮನೆಯಲ್ಲಿದ್ದ ವಸ್ತುಗಳೆಲ್ಲಾ ನೀರಿನಲ್ಲಿ ಕೊಚ್ಚಿ ಹೋಗಿವೆ. ಶಾಲಾ ಬಾಲಕರ ಮಾರ್ಕ್ಸ್ ಕಾರ್ಡ್‌ಗಳು, ಪಠ್ಯಪುಸ್ತಕಗಳು ಹೇಳಹೆಸರಿಲ್ಲದಂತೆ ಕಣ್ಮರೆಯಾಗಿವೆ. ಬಡಬಗ್ಗರ ರೇಶನ್ ಕಾರ್ಡುಗಳು, ಭೂದಾಖಲಾತಿಗಳು, ಪಾತ್ರೆಪಗಡಗಳು, ಹಾಸಿಗೆ ಹೊದಿಕೆಗಳು, ಕೂಡಿಟ್ಟ ಕಾಳುಕಡ್ಡಿಗಳು, ಮನೆಯಲ್ಲಿದ್ದ ಅತ್ಯವಶ್ಯಕ ರೇಶನ್ – ಎಲ್ಲವೂ ನೀರಿನಲ್ಲಿ ಕೊಚ್ಚಿಹೋಗಿವೆ. ದನಕರುಗಳ ಶವಗಳು ರಸ್ತೆಯಲ್ಲಿ ಕೊಳೆತು ನಾರುತ್ತಿವೆ. ಹೊಲದಲ್ಲಿ ಬೆಳೆದು ನಿಂತ ಪೈರು ಯಾವುದೇ ಕುರುಹುಗಳನ್ನೂ ಬಿಡದೆ ಸಂಪೂರ್ಣವಾಗಿ ನಾಶವಾಗಿದೆ.

ರಸ್ತೆಗಳು ಹೊಂಡಗಳಾಗಿ, ಕೊರಕಲು ಹಳ್ಳಗಳಾಗಿ ಪರಿವರ್ತನೆಯಾಗಿವೆ. ವಿದ್ಯುತ್ ಕಂಬಗಳೆಲ್ಲಾ ಬುಡಮೇಲಾಗಿ ಬಿದ್ದಿದ್ದರಿಂದ ಇ[...] ಪ್ರದೇಶವೀಗ ಕತ್ತಲಲ್ಲಿ ಮುಳುಗಿದೆ. ಹಳ್ಳಗಳ ಸಮೀಪದಲ್ಲಿ ತಮ್ಮ ಹೊಲಗಳಿಗೆ ನೀರುಣಿಸ[...] ಇದ್ದ ಪಂಪ್‌ಸೆಟ್‌ಗಳು ತರಗೆಲೆಗಳಂತೆ ನೀರಿನ[...] ಕೊಚ್ಚಿ ಹೋಗಿವೆ. ನೆಲದಲ್ಲಿ ಅಗೆದು ಹಾಕಿದ್ದ ಪೈಪುಗಳೆಲ್ಲ ಈಗ ಅಸ್ಥಿಪಂಜರದಂತೆ ತೇಲುತ್ತಿ[...] ಹಳ್ಳಿಗಳಲ್ಲಿ ಸ್ವಲ್ಪ ರೊಕ್ಕಸ್ಥ ಕುಳಗಳು ಅನಿಸಿಕೊಂಡವರ ಹಣೆಬರಹವೂ ಚಂದ ಇಲ್ಲ. ಅವರೂ ಈಗ ಬಯಲಿಗೆ ಬಿದ್ದವರೆ. ಹಗೆ (ನೆಲದಾಳದಲ್ಲಿ ನಿರ್ಮಿಸಿಕೊಂಡಿರುವ ಸುಸಜ್ಜಿತ ಧಾನ್ಯ ಸಂಗ್ರಹದ ಕೋಣೆ)ಯಲ್ಲಿ ಯಾವಾಗಲಾದರೂ ಆಪತ್ತಿಗೆ ಬಂದೀತೆಂದು ತೆ[...] ಇಟ್ಟಿದ್ದ ದವಸ - ಧಾನ್ಯಗಳಿಗೂ ನೀರು ಪ್ರವ[...] ಅವೆಲ್ಲ ಈಗ ಕೊಳೆತುನಾರುತ್ತಿವೆ. ಎಪ್ಪತ್ತು ಎಕ[...] ಭೂಮಿ ಇದ್ದರೂ ಒಪ್ಪೊತ್ತಿಗೂ ಬರ ಎನ್ನುತ್ತಾ[...] ಅಂಥ ಸ್ಥಿತಿ ಅವರಿಗೆ ತಲೆದೋರಿದೆ.

ಇದು ಒಂದು ಊರಿನ ಕತೆಯಲ್ಲ. ಉತ್ತರ ಕರ್ನಾಟಕದ ಲಕ್ಷಾಂತರ ರೈತಬಾಂಧವರ ದಾರು[...] ಕತೆ. ತಮ್ಮ ಜೀವಮಾನವಿಡೀ ದುಡಿದು ಕಟ್ಟಿಕೊಂಡ ಮನೆ, ಕೂಡಿಟ್ಟುಕೊಂಡ ವಸ್ತುಗಳ[...] ಹೀಗೆ ಮೂರೇ ದಿನದಲ್ಲಿ ಸರ್ವನಾಶವಾಗಿ ಹೋಗಿವೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಜಲಪ್ರಳಯಕ್ಕೆ ಬಲಿಯಾದ ಉತ್ತರ ಕರ್ನಾಟಕ[...] ಅಕ್ಷರಶಃ ಪಾಳುಕೊಂಪೆಯಾಗಿ ಪರಿವರ್ತನೆಗೊಂಡಿದೆ. ▶▶




ಬೆಣ್ಣೆ ಹಳ್ಳದ ಆರ್ಭಟ ನಿಲ್ಲುವುದ್ಯಾವಾಗ

ಬಿಹಾರದ ಜನರನ್ನು ವರ್ಷವರ್ಷವೂ ಕೋಸಿ ನದಿ ಗೋಳು ಹೊಯ್ದುಕೊಳ್ಳುವಂತೆ ಉತ್ತರ ಕರ್ನಾಟಕದ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಬಡ ರೈತರನ್ನು ಬೆಣ್ಣೆ ಹಳ್ಳ ಗೋಳು ಹೊಯ್ದುಕೊಳ್ಳುತ್ತದೆ. ಉತ್ತರ ಕರ್ನಾಟಕದ ಇದೇ ಜಿಲ್ಲೆಗಳ ಬೇರೆ ಬೇರೆ ಭಾಗಗಳಲ್ಲಿ ಜನ ಬರಗಾಲದಿಂದ ತತ್ತರಿಸುತ್ತಿರುವಾಗಲೇ ಬೆಣ್ಣೆ ಹಳ್ಳ ತನ್ನ ಆರ್ಭಟವನ್ನು ಮೆರೆದು ಎರಡು-ಮೂರು ವರ್ಷಗಳಿಗೊಮ್ಮೆ ರೈತರ ಕಣ್ಣಲ್ಲಿ ನೀರು ತರಿಸುತ್ತದೆ. ರೈತರು ಸಾಲಸೋಲ ಮಾಡಿ, ಬೆವರಿಳಿಸಿ ಕಷ್ಟಪಟ್ಟು ಬೆಳೆದ ನೂರಾರು ಕೋಟಿ ಮೌಲ್ಯದ ಪೀಕನ್ನು, ರೈತರ ಒಡನಾಡಿಗಳಾಗಿರುವ ಜಾನುವಾರುಗಳನ್ನು, ಅವರಿಗೆ ಆಶ್ರಯ ನೀಡುವ ಮನೆಮಠಗಳನ್ನು ತನ್ನೊಡಲೊಳಗೆ ಸೇರಿಸಿಕೊಂಡು ಹರಿಯುತ್ತದೆ. ಪ್ರತೀ ಎರಡು-ಮೂರು ವರ್ಷಗಳಿಗೊಮ್ಮೆ ನಡೆಯುವ ಈ ಪ್ರಕೃತಿ ವಿಕೋಪವನ್ನು ಪರಿಹರಿಸಿ ರೈತರ ಕಣ್ಣೀರನ್ನು ಒರೆಸಲು ಸಾಧ್ಯವಿಲ್ಲವೆ? ಖಂಡಿತಾ ಸಾಧ್ಯವಿದೆ. ಅದಕ್ಕೆ ಶಾಶ್ವತ ಪರಿಹಾರವಿದೆ. ಆದರೆ, ಅದನ್ನು ಆಗು ಮಾಡುವುದಕ್ಕೆ ಸರ್ಕಾರಗಳಿಗೆ ರಾಜಕೀಯ ಇಚ್ಛಾಶಕ್ತಿಯಿಲ್ಲ ಅಷ್ಟೆ.

ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ದುಂಡಸಿ ಬಳಿ ಜನಿಸುವ ಈ ಬೆಣ್ಣೆ ಹಳ್ಳ ಎಂಟು ತಾಲ್ಲೂಕುಗಳಲ್ಲಿ 138 ಕಿ.ಮೀ. ದೂರ ಹರಿದು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಮೆಣಸಗಿ ಗ್ರಾಮದಲ್ಲಿ ಮಲಪ್ರಭಾ ನದಿಯನ್ನು ಸೇರುತ್ತದೆ. ಈ ಹಳ್ಳದ ಉಪಹಳ್ಳಗಳಾದ ಕಗ್ಗೋಡಿ ಹಳ್ಳ, ಮಾಸ್ತಿ ಹಳ್ಳ, ಗೂಗಿ ಹಳ್ಳ, ರಾಡಿ ಹಳ್ಳ, ಹಿರೇ ಹಳ್ಳ ಮತ್ತಿತರ ಚಿಕ್ಕಪುಟ್ಟ ಹಳ್ಳಗಳು ಸೇರಿ ಬೆಣ್ಣೆ ಹಳ್ಳಕ್ಕೆ ಮತ್ತಷ್ಟು 'ಸೊಕ್ಕು' ಮತ್ತು 'ಶಕ್ತಿ'ಯನ್ನು ತುಂಬಿಸುತ್ತವೆ. ಬೆಣ್ಣೆ ಹಳ್ಳ ಉಕ್ಕಿ ಅಜೂಬಾಜು ಒಂದು ಕಿ.ಮೀ. ದೂರದ ತನಕ ವಿಸ್ತರಣೆಗೊಂಡು ಹರಿಯುತ್ತಾ ಬೆಳೆದುನಿಂತ ಪೈರನ್ನೂ, ಮನೆಮಠಗಳನ್ನು ಕೊಚ್ಚಿಕೊಂಡು ಹೋಗುತ್ತದೆ. ಹೀಗೆ, ರೈತರ ಜೀವನ ಛಿದ್ರಗೊಂಡಾಗಲೆಲ್ಲಾ ಆಡಳಿತದಲ್ಲಿರುವ ಸರ್ಕಾರಗಳು ಅದಕ್ಕೆ 'ಶಾಶ್ವತ ಪರಿಹಾರ'ದ ಬಡಾಯಿ ಕೊಚ್ಚಿ ಸುಮ್ಮನಾಗುತ್ತವೆ. ಆದರೆ ಯಾವೊಂದು ಕೆಲಸವನ್ನೂ ಮಾಡುವುದಿಲ್ಲ. ಮತ್ತೆ ಬೆಣ್ಣೆ ಹಳ್ಳದ ನೆನಪಾಗುವುದು ಅದು ಮತ್ತೊಮ್ಮೆ ಉಕ್ಕಿ ಹರಿದು ರೈತರನ್ನು ನುಂಗಿ ಹಾಕಿದಾಗ ಮಾತ್ರವೆ.

ಸರ್ಕಾರ ಮನಸ್ಸು ಮಾಡಿದರೆ ಬೆಣ್ಣೆ ಹಳ್ಳದ ಪ್ರವಾಹವನ್ನು ಶಾಶ್ವತವಾಗಿ ಪರಿಹರಿಸುವುದಲ್ಲದೇ ಸುಖಾಸುಮ್ಮನೇ ವ್ಯರ್ಥವಾಗಿ ಹೋಗುವ ಅದರ ನೀರನ್ನೂ ಸದುಪಯೋಗಪಡಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಮೊದಲು ಅಗತ್ಯವಿರುವಷ್ಟು ಭೂಮಿಯನ್ನು ರೈತರಿಂದ ಸ್ವಾಧೀನಪಡಿಸಿಕೊಂಡು, ಹಳ್ಳದ ಪಾತ್ರದಲ್ಲಿ ಬೆಳೆದಿರುವ ಜಾಲಿ ಗಿಡಗಳನ್ನು ತೆಗೆದು, ಅದರ ಹೂಳೆತ್ತುವ ಕಾರ್ಯ ನಡೆಯಬೇಕು. 2.13 ಮೀಟರ್ ಆಳವಿರುವ ಹಾಗೂ 17.60 ಮೀಟರ್ ಅಗಲವಿರುವ ಈ ಹಳ್ಳವನ್ನು 8.5 ಮೀಟರ ಆಳ ಹಾಗೂ 100 ಮೀಟರ್ ಅಗಲವಾಗುವಂತೆ ವಿಸ್ತರಿಸಬೇಕು. ಈ ಹಳ್ಳದುದ್ದಕ್ಕೂ ಬರುವ ನೂರಕ್ಕೂ ಅಧಿಕ ಸೇತುವೆಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಅವುಗಳನ್ನು ಬ್ಯಾರೇಜ್‌ಗಳನ್ನಾಗಿ ಪರಿವರ್ತಿಸಿ ಲಭ್ಯವಾಗುವ ನೀರನ್ನು ನೀರಾವರಿಗೆ ಬಳಸಿಕೊಳ್ಳಬಹುದು. ಈ ಕಾರ್ಯಕ್ಕಾಗಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಖರ್ಚಾಗುತ್ತದೆ. ಅಲ್ಲದೇ ಗದಗ ಜಿಲ್ಲೆಯ ಹೊಳೆ ಮಣ್ಣೂರ, ಗಾಡಗೋಳಿ, ಮೆಣಸಗಿ, ಹೊಳೆ ಆಲೂರ, ಅಮರಗೋಳ, ಕುರುವಿನಕೊಪ್ಪ, ಬೇಲೇರಿ, ಬಸರಕೋ[...] ಕುರ್ಲಗೇರಿ, ಬೂದಿಹಾಳ ಲಕಮಾಪೂರ ಮುಂತಾದ ಗ್ರಾಮಗಳ[...] ಸ್ಥಳಾಂತರಗೊಳಿಸಬೇಕಾಗುತ್ತದೆ.

2007ರ ಸೆಪ್ಟೆಂಬರ್ 28ರಂದು ಕರ್ನಾಟಕ ನೀರಾವರಿ ನಿಗಮ[...] ಚೇರ್‌ಮನ್ ಕೆ.ಸಿ.ರೆಡ್ಡಿ ನೇತೃತ್ವದಲ್ಲಿ ನಡೆದ 82ನೇ ತಾಂತ್ರಿಕ ಉಪಸಮಿ[...] ಸಭೆಯಲ್ಲಿ ಇದೇ ನಿಗಮದಿಂದ 26 ಬ್ಯಾರೇಜ್ ಕಮ್ ಬ್ರಿಡ್ಜ್, 2[...] ರಸ್ತೆಗಳ ಸುಧಾರಣೆ, ನಾಲ್ಕು ಹಳ್ಳಗಳನ್ನು ಒಟ್ಟು 120 ಕಿ.ಮೀ ಅಗಲೀಕರ[...] ಮಾಡುವುದು, ನಾಲಾ ನೀರಾವರಿ - ಮುಂತಾದವುಗಳನ್ನೊಳಗೊಂ[...] 205 ಕೋಟಿ ರೂಪಾಯಿ ಯೋಜನೆಯನ್ನು ಸಿದ್ಧಪಡಿಸಲಾಯಿತು. [...] ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿ ಯೋಜನೆಯನ್ನು ಕಾರ್ಯಗ[...] ಮಾಡುವುದಕ್ಕೆ ಆದೇಶವನ್ನೂ ಹೊರಡಿಸಿದರು. [...] ಇದೇ ಬಿ.ಎಸ್.ಯಡಿಯೂರಪ್ಪ ಉಪಮುಖ್ಯಮಂ[...] ಯಾಗಿದ್ದರು. ಆದರೆ, ಇದುವರೆಗೆ ಯಾವುದ[...] ಸಮೀಕ್ಷೆಯಾಗಲೀ, ಕೆಲಸವಾಗಲೀ ನಡೆದೇ ಇಲ್ಲ. ಬೆ[...] ಹಳ್ಳ ಮತ್ತು ಕಳಸಾ-ಬಂಡೂರಿ ಯೋಜನೆಗಳಿಗಾ[...] ನಡೆದ ರೈತ ಬಂಡಾಯಗಳಲ್ಲಿ ತೂರಿಕೊಂಡು ಬಂದ[...] ಈ ಹೊತ್ತು ನೀರಾವರಿ ಸಚಿವರಾಗಿರುವ ಬಸವರಾ[...] ಬೊಮ್ಮಾಯಿ ಈಗ ಅದನ್ನೆಲ್ಲಾ ಮರೆತು ಮಲಗಿದ್ದಾ[...]



ಇವರೆಲ್ಲರ ನಿರ್ಲಕ್ಷ್ಯದಿಂದ ಈ ಬಾರಿ ಮತ್ತೆ ಬೆ[...] ಹಳ್ಳ ತನ್ನ ರೌದ್ರಾವತಾರವನ್ನು ತೋರಿದೆ. ರೈತರ ಬೆಳೆ[...] ನಿಂತ ಪೈರುಗಳು, ಮನೆಮಠಗಳು ಎಲ್ಲವೂ ನೀರಿನ[...] ಕೊಚ್ಚಿ ಹೋಗಿ ಅಕ್ಷರಶಃ ಅವರನ್ನು ಬರಿಗೈ ಮಾಡಿ[...] ಇಂಥ ಬೇಜವಾಬ್ದಾರಿ ಸರ್ಕಾರಗಳಿರುವ ತನಕ ಶಾಶ್[...] ಪರಿಹಾರವೊಂದನ್ನು ಕಂಡುಕೊಳ್ಳಬಹುದಾದ ಮಾರ್ಗವೂ ನಿರಂ[...] ಸಮಸ್ಯೆಯಾಗಿಯೇ ಉಳಿಯುತ್ತದೆ ಎಂಬುದಕ್ಕೆ ಬೆಣ್ಣೆ ಹಳ್ಳ ಒಂದು ಜೀವ[...] ನಿದರ್ಶನ.

● ಹುಬ್ಬಳ್ಳಿಯಾಂ[...]

ಒಂದು ಮನವಿ

ಪ್ರಿಯ ನಾಡಬಂಧುಗಳೇ,

ಕರ್ನಾಟಕದ ಉತ್ತರ ಭಾಗದ ಜಿಲ್ಲೆಗಳಲ್ಲಿ ಭೀಕರವಾದ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಹಲವೆಡೆ ಇಡಿ ಊರುಗಳೇ ...ಳುಗಿವೆ. ಅಸಂಖ್ಯಾತ ಮನೆಗಳು ಕುಸಿದಿವೆ. ಕೂಡಿಟ್ಟಿದ್ದ ದವಸ, ಧಾನ್ಯಗಳು, ಪಾತ್ರೆ ಇತ್ಯಾದಿ ದಿನಬಳಕೆಯ ಸಾಮಗ್ರಿಗಳು ...ಚ್ಚಿ ಹೋಗಿವೆ. ನಿಜಕ್ಕೂ ಇದೊಂದು ಭೀಕರ ದುರಂತವೇ ಸರಿ. ಯಾವುದೇ ಭೇದಭಾವವಿಲ್ಲದೆ ಎಲ್ಲಾ ಜಾತಿ/...ರ್ಗಗಳ ಜನರು ಇದರಿಂದ ಬಾಧಿತರು. ಈ ಆಘಾತದಿಂದ ಹೊರಬರಲು ಅವರಿಗೆ ಎಷ್ಟೋ ಕಾಲ ಬೇಕಾಗಬಹುದು. ...ವರೆಗೆ ಸಾಧ್ಯವಿರುವ ಎಲ್ಲಾ ನೆರವು ಹರಿಯಬೇಕಿದೆ.

ಈ ಭೀಕರ ದುರಂತದಿಂದ ನಮ್ಮ ಸೋದರ- ಸೋದರಿಯರು ಹೊರಬರಲು ನಮ್ಮ ಕೈಲಾದಷ್ಟು ಪ್ರಯತ್ನ ...ಡಲೇಬೇಕು.

ಈ ನಿಟ್ಟಿನಲ್ಲಿ ಕರ್ನಾಟಕ ಜನಪರ ವೇದಿಕೆಯು ತನ್ನ ಕಾರ್ಯಚಟುವಟಿಕೆಗಳು ಇರುವ ಸ್ಥಳಗಳಿಂದ, ಸಾಧ್ಯವಿರುವಷ್ಟು ...ವನ್ನು ಸಂಗ್ರಹಿಸಿ ಸಂತ್ರಸ್ತ ಜನರಿಗೆ ನೆರವಾಗಬೇಕೆಂದು ನಿರ್ಧರಿಸಿದೆ.

ನಿಮ್ಮಿಂದ ಸಾಧ್ಯವಾದಷ್ಟು ಹಣ, ಪಾತ್ರೆಗಳು, ಬಟ್ಟೆಗಳು ಮತ್ತು ಧಾನ್ಯಗಳನ್ನು ನಮ್ಮ ಕಾರ್ಯಕರ್ತರ ಕೈಗೊಪ್ಪಿಸಿದರೆ ...ವನ್ನು ಆದಷ್ಟು ಬೇಗ ಸಂಕಷ್ಟದಲ್ಲಿರುವ ಜನರಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತೇವೆ. ನಿಮಗೆ ಬೇಡವಾದ ವಸ್ತುಗಳನ್ನು ...ಟ್ಟುಬಿಡುವುದಕ್ಕಿಂತ ನಿಮಗೆ ಬೇಕಾದುದರಲ್ಲೇ ಒಂದು ಭಾಗವನ್ನು ಸಂಕಷ್ಟದಲ್ಲಿರುವ ನಿಮ್ಮ ನಾಡಬಂಧುಗಳ ಜೊತೆ ...ಟಿಕೊಳ್ಳಿರೆಂದು ನಮ್ರವಾಗಿ ವಿನಂತಿಸುತ್ತಿದ್ದೇವೆ.

ಕರ್ನಾಟಕ ಜನಪರ ವೇದಿಕೆ

ನೀವು ಈ ಕೆಳಕಂಡ ಫೋನ್ ನಂಬರುಗಳನ್ನು ಸಂಪರ್ಕಿಸಿ, ನಿಮ್ಮ ಕೊಡುಗೆಯನ್ನು ನೀಡಬಹುದು.

ಬೆಂಗಳೂರು: ಕುಮಾರ್ ಸಮತಳ	- 9880292674
ದಾವಣಗೆರೆ: ಚಂದ್ರಶೇಖರ ತೋರಣಘಟ್ಟ	- 9481670506
ಶಿವಮೊಗ್ಗ: ಕೆ.ಎಲ್.ಅಶೋಕ್	- 9448256216
ಬಾಗಲಕೋಟೆ: ಮಹಾಲಿಂಗಪ್ಪ ಆಲಬಾಳ	- 9916156055
ಬೆಳಗಾವಿ: ರವಿ ಮ.ಪಾಟೀಲ	- 9731799429
ಹೊಸಕೋಟೆ: ಹೈದರ್ ಬೇಗ್	- 9008484724
ಮಂಡ್ಯ: ಮದ್ದೂರು ಮಹೇಶ್	- 9980724704
ಮೈಸೂರು: ಸೀತಾ	- 9481533607
ಚಿಕ್ಕಮಗಳೂರು: ಗೌಸ್ ಮೊಯಿದ್ದೀನ್	- 9448220998
ಉತ್ತರ ಕನ್ನಡ: ರಮೇಶ್ ಅಂಕೋಲ	- 9448738079
ವಾಸು ಎಚ್.ವಿ	- 9945516267



...ಡಿಯೂರಪ್ಪ ಮತ್ತು ಅವರ ಸರ್ಕಾರ ...ರ್ಣ ನಿದ್ರೆಯಿಂದೆದ್ದ ಮೇಲಾದರೂ ...ದುಕುಗಳ ನಡುವೆ ಹೋರಾಡುತ್ತಿರುವ ಈ ...ನ್ನು ರಕ್ಷಿಸುತ್ತಾರೆಂದುಕೊಂಡಿದ್ದರೆ ಅದೂ ...ಯುತ್ತಿಲ್ಲ. ಮೊದಲನೆಯದಾಗಿ, ಈ ಪ್ರವಾಹದ ...ಸುಳಿಯಲ್ಲಿ ಇಡೀ ಉತ್ತರ ಕರ್ನಾಟಕವೇ ಸಿಲುಕಿ ...ಯುತ್ತಿದ್ದರೂ ಅವರ ನೆರವಿಗೆ ಬಾರದ ...ಯೂರಪ್ಪ ಆಂಧ್ರಪ್ರದೇಶದ ಮಂತ್ರಾಲಯಕ್ಕೆ ... ಹೆಲಿಕಾಪ್ಟರ್ ಅನ್ನು ಕಳುಹಿಸಿ ಅಲ್ಲಿಯೂ ...ಹದ ಸುಳಿಯಲ್ಲಿ ಸಿಲುಕಿದ್ದ ಅದರ ...ಯನ್ನು ರಕ್ಷಿಸಿಕೊಂಡು ಬಂದರು. ಆದರೆ, ... ಮಂತ್ರಾಲಯದಲ್ಲಿ ಅದೇ ಪ್ರವಾಹಕ್ಕೆ ಸಿಕ್ಕು ...ವಿಲ್ಲದೇ, ಕುಡಿಯಲು ನೀರಿಲ್ಲದೇ ಎತ್ತರದ ...ಶಗಳಲ್ಲಿ ಹಾಹಾಕಾರ ಪಡುತ್ತಿದ್ದ ಸಾವಿರಾರು ...ಯ ಭಕ್ತರನ್ನಾಗಲೀ, ಉತ್ತರ ಕರ್ನಾಟಕದ ... ಪ್ರದೇಶದಲ್ಲಿ ಬವಣೆಗಳನ್ನು ಎದುರಿಸುತ್ತಿದ್ದ ...ತ್ತವಾಗಲೀ ಕಣ್ಣು ಹಾಯಿಸಲೇ ಇಲ್ಲ. ಮಳೆ ...ವ ತಾನೇ ಕಡಿಮೆಯಾಗಿ, ಪ್ರವಾಹ ಇಳಿದ ...ಷ್ಟೇ 'ನಾವೂ ನಿಮ್ಮೊಂದಿಗಿದ್ದೇವೆ' ಎಂದು ...ಸು ಕೊಡುತ್ತಿದ್ದಾರೆ.

...ಮಾನ್ಯವಾಗಿ ಯಾವುದೇ ಯುದ್ಧ ಮತ್ತು ...ತಿಕ ವಿಕೋಪಗಳಲ್ಲಿ ಉಂಟಾಗುವ ...ನೋವುಗಳಿಗಿಂತ ಅವು ಸಂಭವಿಸಿದ ...ರದ ದಿನಗಳಲ್ಲಿ ಆಗುವ ಸಾವುನೋವುಗಳೇ ...ಮಾಗಿರುತ್ತವೆ. ಈಗ ಅದಕ್ಕೆ ಉತ್ತರ ...ಟಕವೂ ಜೀವಂತ ನಿದರ್ಶನವಾಗುವ ಸೂಚನೆಗಳು ಕಾಣುತ್ತಿವೆ. ಪ್ರವಾಹದಿಂದ ತಮ್ಮೆಲ್ಲಾ ಮನೆಮಠಗಳನ್ನು, ಬಟ್ಟೆಬರೆಗಳನ್ನು, ಕಾಳುಕಡ್ಡಿಗಳನ್ನು ಮತ್ತಿತರ ಜೀವನಾವಶ್ಯಕ ಪರಿಕರಗಳನ್ನು ಕಳೆದುಕೊಂಡು ಅಕ್ಷರಶಃ ಬರಿಗೈಯಲ್ಲಿರುವ ಜನ ಹಸಿವಿನಿಂದ ಬಳಲುತ್ತಿದ್ದಾರೆ. ಕನಿಷ್ಠ ಕುಡಿಯಲು ಶುದ್ಧ ನೀರು ಸಿಗದಂಥ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಮಳೆನೀರನ್ನೇ ಕುಡಿಯುತ್ತಿದ್ದಾರೆ. ಅಲ್ಲದೇ ಇಡೀ ಪ್ರದೇಶದಾದ್ಯಂತ ಜಾನುವಾರುಗಳು, ಪೈರುಗಳು, ಕಾಳುಗಳು ಕೊಳೆತು ನಾರುತ್ತಿವೆ. ಈ ಎಲ್ಲಾ ಕಾರಣಗಳಿಂದಾಗಿ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಕಂಡುಬರುತ್ತಿದೆ. ಆದರೆ, ನಮ್ಮ ಆರೋಗ್ಯ ಮಂತ್ರಿ ಶ್ರೀರಾಮುಲು ಎಲ್ಲಿದ್ದಾರೆಂಬುದೇ ಯಾರಿಗೂ ಗೊತ್ತಿಲ್ಲ. ಇತ್ತೀಚೆಗೆ ಹಂದಿಜ್ವರದಿಂದ ಜನ ಒಬ್ಬೊಬ್ಬರಾಗಿ ಸಾಯುತ್ತಿದ್ದಾಗ, ಹಂದಿಜ್ವರದ ಭೀತಿ ಇಡೀ ನಾಡನ್ನು ಆವರಿಸಿದ್ದಾಗಲೂ ಶ್ರೀರಾಮುಲು ಎಲ್ಲಿದ್ದರೆಂಬುದು ಯಾರಿಗೂ ಗೊತ್ತಿರಲಿಲ್ಲ. ಮಾಧ್ಯಮಗಳು, ವಿರೋಧ ಪಕ್ಷದವರು, ಬುದ್ಧಿಜೀವಿಗಳು ಅವರನ್ನು ತರಾಟೆಗೆ ತೆಗೆದುಕೊಂಡ ಮೇಲಷ್ಟೇ ಅವರು ಅಜ್ಞಾತವಾಸದಿಂದ ಹೊರಬಂದದ್ದು. ಈಗಲೂ ಅಷ್ಟೇ ಅವರು ಅದ್ಯಾವ ಕೋಣೆಯಲ್ಲಿ ಪುಚ್ಚೆತಪ್ಪಿ ಬಿದ್ದಿದ್ದಾರೋ ಗೊತ್ತಿಲ್ಲ. ಅವರನ್ನು ಹೊರತರುವುದಕ್ಕೆ ಉತ್ತರ ಕರ್ನಾಟಕದ ಪ್ರವಾಹಪೀಡಿತ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗ ಹಬ್ಬಿ ಸಾವಿರಾರು ಜನ ಸಾಯಬೇಕೋ ಏನೋ? ●



ಜನ ಸಾಯುತ್ತಿದ್ದರೆ ಅದರಲ್ಲೂ ಕಮಿಷನ್ ಹೊಡೆದ

ಲಾಟರಿ ಮಂತ್ರಿ ಶಿವನಗೌಡ ನಾಯಕ್‌ನ ಸ್ವಂತ ಕ್ಷೇತ್ರ ದೇವದುರ್ಗದ ಶೇಕಡ ಇಪ್ಪತ್ತರಷ್ಟು ಹಳ್ಳಿಗಳು ಕೊಚ್ಚಿ ಹೋಗಿವೆ. ಅರ್ಧಕ್ಕರ್ಧ ತಾಲ್ಲೂಕೇ ಜಲಾವೃತ ಗೊಂಡಿದೆ. ರಾಯಚೂರು ಜಿಲ್ಲೆಯ ಪೈಕಿ ಅತೀ ಹೆಚ್ಚು ಹಾನಿಗೀಡಾಗಿದ್ದು ದೇವದುರ್ಗವೇ ಆದರೂ ಈ ಬಗ್ಗೆ ಒಂದೇ ಒಂದು ಸಾಲಿನ ಸುದ್ದಿಯಾಗದಂತೆ ಪತ್ರಕರ್ತರ ಮೇಲೆ ಪ್ರಭಾವ ಬೀರಿದವನು ಲಾಟರಿ ಮಂತ್ರಿ ಶಿವನಗೌಡ ನಾಯಕ!

ಅದಕ್ಕೆ ಮುಖ್ಯ ಕಾರಣ ಜನರ ಸಾವಿನಲ್ಲೂ ಕಮೀಷನ್ ಹೊಡೆಯುವ ಆತನ ಕೆಟ್ಟಚಾಳಿ. ರಾಯಚೂರಿನ ಪ್ರಮುಖ ವರದಿಗಾರರನ್ನೆಲ್ಲ ಕರೆದು ಬೆಣ್ಣೆ ತಿಕ್ಕಿದ ಶಿವನಗೌಡ ನಾಯಕ ತನ್ನ ಸ್ವಂತಕ್ಷೇತ್ರ ದೇವದುರ್ಗದ ದುರ್ಗತಿ ಹೊರಜಗತ್ತಿಗೆ ಗೊತ್ತೇ ಆಗದಂತೆ ನೋಡಿಕೊಂಡಿದ್ದು ಆತನ ಕಮೀಷನ್ ಬುದ್ಧಿಗೆ ತಕ್ಕಂತೆ ಇತ್ತು. ಪ್ರವಾಹ ಬಂದ ಮೂರನೇ ದಿನಕ್ಕೆ ಮುಖ್ಯಮಂತ್ರಿ ಯಡ್ಡಿಯ ಮೂಲಕ ಒಂದು ಕೋಟಿಯ ಪ್ಯಾಕೇಜ್ ಗಿಟ್ಟಿಸಿದ ಮರುಕ್ಷಣವೇ ತಾಲ್ಲೂಕಿನ ಅಧಿಕಾರಿಗಳನ್ನೆಲ್ಲ ಕರೆಸಿಕೊಂಡ ಶಿವನಗೌಡ; "ನೀವೇನು ಮಾಡ್ತೀರೋ ಗೊತ್ತಿಲ್ಲ, ಒಂದು ಕೋಟಿಯಲ್ಲಿ ಇಪ್ಪತ್ತು ಪರ್ಸೆಂಟ್ ನನಗೆ ಬರಲೇಬೇಕು. ಪ್ರತಿ ಮನೆಗೂ ಕೊಡುವ ಐದು ಸಾವಿರದಲ್ಲಿ ಒಂದು ಸಾವಿರ ಹಿಡಿದಿಟ್ಟುಕೊಂಡೇ ಸಹಿ ಹಾಕಿಸಿಕೊಳ್ಳಿ..." ಎಂದು ಹೂಂಕರಿಸಿದ್ದಾನೆ.


ಇದರರ್ಥ ಪ್ರವಾಹದಲ್ಲಿ ಕೊಚ್ಚಿಹೋದ ಪ್ರತಿ ಮನೆಯಿಂದ ಶಿವನಗೌಡನಿಗೆ ಸಾವಿರ ರೂಪಾಯಿ ಬರಲೇಬೇಕು. ಅದನ್ನು ತಾಲ್ಲೂಕಿನ ಅಧಿಕಾರಿಗಳು ಸಂಗ್ರಹಿಸಿ ಮಂತ್ರಿಯ ಬಾಯಿಗಿಡಬೇಕು!

ಕಮೀಷನ್ ಹೊಡೆಯುವ, ಕಾಮಗಾರಿಯಲ್ಲಿ ಭ್ರಷ್ಟಾಚಾರವೆಸಗುವ ಎಮ್ಮೆಲ್ಲೆ ಮಂತ್ರಿಗಳಿಲ್ಲವೆಂದಲ್ಲ, ದುಡ್ಡು ದೋಚುವುದಕ್ಕೂ ಒಂದು ಇತಿಮಿತಿಯಿದೆ. ಆದರೆ ಶಿವನಗೌಡನ ದುರಾಶೆಯಿದೆಯಲ್ಲ, ಬಹುಶಃ ಕರ್ನಾಟಕದ ಯಾವೊಬ್ಬ ಶಾಸಕನೂ ಈ ಮಟ್ಟಕ್ಕಿಳಿಯಲಾರ.

ಅರ್ಧ ದೇವದುರ್ಗ ತಾಲ್ಲೂಕೇ ಜಲಾವೃತ ಗೊಂಡಿದೆ. ಖಾನಾಪುರ ಕೆರೆ, ಹೊನ್ನಟ್ಟಗಿ ಕೆರೆ, ಬುದ್ದಿನಿಕೆರೆ, ನಾಗವಲ್ಲಿ ಕೆರೆ ಸೇರಿದಂತೆ ದೇವದುರ್ಗದ ಒಟ್ಟು ಎಂಟು ಕೆರೆಕಟ್ಟೆಗಳು ಒಡೆದುಹೋಗಿವೆ. ಕೃಷ್ಣಾನದಿ ನದಿದಂಡೆಗುಂಟ ಮದರ್‌ಕಲ್ ಹೆಮ್ನಾಳ, ಕೊಳೂರು, ಬೊಮ್ಮನಾಳ, ಹೂವಿನ ಹಡಗಿ, ಕೊಪ್ಪರ, ಮದರಿಹಾಳ, ಕರಿಕಿತಳ್ಳಿ, ಪರತ್‌ಪೂರ, ಕೋಣಚಪ್ಪಳ್ಳಿ, ಹೂನೂರು ಇತ್ಯಾದಿ ಗ್ರಾಮಗಳೆಲ್ಲ ಊರಿಗೆ ಊರೇ ಕೊಚ್ಚಿಹೋಗಿವೆ. ಅರಸಣಗಿ, ಹ್ಯಾಟಗಲ್ಲು, ಗೂಗಲ್ಲು, ರಾಮನಾಳ, ಯಮನಾಳ, ಸಿಬರಗೇರಿ, ಸಿಪತ್‌ಗೇರಿ ಇತ್ಯಾದಿ ಹಳ್ಳಿಗಳ ಅವಶೇಷ ಕೂಡ ಉಳಿಯದಂತೆ ಪ್ರವಾಹ ಗುಡಿಸಿಹಾಕಿದೆ.

ರಾಯಚೂರು ತಾಲ್ಲೂಕಿಗಿಂತಲೂ ದೊಡ್ಡಮಟ್ಟದ ವಿನಾಶವಾಗಿರುವುದು ದೇವದುರ್ಗದಲ್ಲೇ ಆದರೂ ಯಾವೊಂದು ಟಿವಿ ಮಾಧ್ಯಮದವರು ಅತ್ತ ಸುಳಿಯದಂತೆ ನೋಡಿಕೊಂಡ ಶಿವನಗೌಡನ ಲೆಕ್ಕಾಚಾರವೇ ಬೇರೆಯಿತ್ತು. ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಸುದ್ದಿಯಾದರೆ ತಾನೇ ಜನಕ್ಕೆ ಹಾನಿಯ ಲೆಕ್ಕಾಚಾರ ಸಿಕ್ಕುವುದು?

ಗೂಗಲ್ಲು, ಮದರಕಲ್, ಕೊಪ್ಪರ ಗ್ರಾಮಗಳಲ್ಲಿ ಹೊಳೆಯಲ್ಲಿ ಕೊಚ್ಚಿ ಹೋದವರ ಕುರಿತು ಮಾಹಿತಿ ಕೊಡುವವರೇ ಇಲ್ಲ, ಸಮೀಕ್ಷೆ ಮಾಡಲು, ಜನರ ಕಷ್ಟ ಕೇಳಲು ಯಾವೊಬ್ಬ ಅಧಿಕಾರಿಯೂ ಅಡ್ರೆಸ್ಸಿಗಿಲ್ಲ. ಇಂಥಾ ಸ್ಥಿತಿಯಲ್ಲಿ ಪ್ರಳಯರುದ್ರನಂತೆ ಪ್ರತ್ಯಕ್ಷನಾದ ಶಿವನಗೌಡ ಕಾಟಾಚಾರಕ್ಕೊಂದು ಸುತ್ತು ಹೆಲಿಕಾಪ್ಟರ್ ಸುತ್ತು ಹಾಕಿದ್ದೇ ಕೊನೆ. ಮಿಕ್ಕಂತೆ ಏಳೋ ಎಂಟೋ ಗಂಜಿ ಕೇಂದ್ರಗಳು ಶುರುವಾಗಿದ್ದು ಬಿಟ್ಟರೆ ಜನರ ಆಕ್ರಂದನವನ್ನು ಕೇಳುವವರೇ ಗತಿಯಿರಲಿಲ್ಲ.



ಈ ಮಧ್ಯೆ, ಶಿವನಗೌಡನ ಚೇಲಾ ಸಿ.ಎಸ್.ಪಾಟೀಲ್ ಎಂಬ ಲೋಕಲ್ ಬಿಜೆಪಿ ನಾಯಕನೊಂದ ಜನರ ಮಧ್ಯೆ ಪೋಜು ಕೊಡಲು ಹೋಗಿ ಚಪ್ಪಲಿ ಏಟು ತಿಂದ. ನಾಮಾವಶೇಷವಾಗಿದ್ದ ಮದರಕಲ್‌ಗೆ ಮಂತ್ರಿ ಶಿವನಗೌಡ ಬಂದಿದ್ದೇ ತಡ, ಜನ ಕಲ್ಲು-ದೊಣ್ಣೆಗಳಿಂದ ಹೊಡೆದೋಡಿಸಿದ್ದಾರೆ. ಜನರ ಆಕ್ರೋಶ ಯಾವ ಮಟ್ಟಕ್ಕಿತ್ತೆಂದರೆ ಮಲ್ಲಿಕಾರ್ಜುನ ಎಂಬ ಜೆಡಿಎಸ್ ನಾಯಕನನ್ನು ಹಿಡಿದು ಏಕ್ದಮ್ ತದುಕಿದ್ದಾರೆ.

ಇಂಥ ಸ್ಥಿತಿಯಲ್ಲೂ ಶಿವನಗೌಡ ತನ್ನ ಕಮೀಷನ್ ಬುದ್ಧಿ ಬಿಟ್ಟಿಲ್ಲ, ಐನೂರು ಮನೆ ಹಾಳಾಗಿದ್ದರೆ ಸಾವಿರ ಮನೆ ಅಂತ ಬರೆ, ಸಾವಿರ ಮನೆ ಬಿದ್ದಲ್ಲಿ ಸಾವಿರದೈನೂರು ಅಂತ ಲೆಕ್ಕಕೊಡಿ ಎಂದು ಬಿಜೆಪಿ ಕಾರ್ಯಕರ್ತರನ್ನು ಛೂಬಿಟ್ಟ. ಜನ ಕಣ್ಣೀರಿಡುತ್ತಿದ್ದರೆ ಶಿವನಗೌಡನ ಪಟಾಲಂ ಒಂದು ಕೋಟಿಯನ್ನು ಹೇಗೆ ದೋಚಬೇಕೆಂದು ಲೆಕ್ಕ ಹಾಕುತ್ತಿತ್ತು.

ತೆರೆದದ್ದು ಎಂಟೇ ಎಂಟು ಗಂಜಿ ಕೇಂದ್ರಗಳಾದರೆ ಶಿವನಗೌಡನ ಗ್ಯಾಂಗ್ ಇಪ್ಪತ್ತರ ಲೆಕ್ಕ ಕೊಟ್ಟಿದೆ. ಬಿದ್ದ ಪ್ರತಿ ಮನೆಗೂ ನಾಲ್ಕು ಸಾವಿರ ಕೊಟ್ಟು ಐದು ಸಾವಿರಕ್ಕೆ ಸಹಿ ಹಾಕಿಸಿಕೊಳ್ಳುತ್ತಿರುವ ದೇವದುರ್ಗದ ಅಧಿಕಾರಿಗಳ ದುರಾಚಾರಕ್ಕೂ ಮಂತ್ರಿ ಶಿವನಗೌಡ ನಾಯಕನ ದುಷ್ಟತನಕ್ಕೂ ಸಾಕ್ಷಿ ಯಾರು ಬೇಕು? ...

ಊರು ನಾಶವಾದರೆ ಅದರಲ್ಲೇ ಕಮೀಷನ್ ಹೊಡೆಯುವ ದುರುಳರನ್ನು ಏನೆನ್ನಬೇಕು?

● ರಾ.ಸೋಮನಾಥ್

ಸುವರ್ಣ, ವಿ.ಕ.ದಲ್ಲಿ ಬದಲಾಣೆಯ ಗಾಳಿ

ಮಾಧ್ಯಮಲೋಕದಲ್ಲಿ ಒಂದಿಷ್ಟು ಬದಲಾವಣೆಗಳಾಗುತ್ತಿವೆ. ರಾಜ್ಯದ ನಂ.1 ಚಡ್ಡಿ ಪತ್ರಿಕೆ 'ವಿಜಯ ಕರ್ನಾಟಕ' ರೀಲಾಂಚ್ ಆಗುತ್ತಿದೆ. ಇನ್ನು ಇದ್ದೂ ಇಲ್ಲದಹಾಗೆ ಇದ್ದ ಸುವರ್ಣ ಕೂಡ ಇದೇ ಹಾದಿಯಲ್ಲಿದೆ.

'ವಿ.ಕ.' ರೀಲಾಂಚ್ ಆಗುತ್ತಿದೆ ಎಂದಮಾತ್ರಕ್ಕೆ ಅದರ ನಿಲುವಿನಲ್ಲಿ ಬದಲಾವಣೆಗಳಾಗಬಹುದು, ಇನ್ನಾದರೂ ಈ ಪತ್ರಿಕೆ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬೆಲೆ ನೀಡಬಹುದು ಎಂದೇನೂ ನೀವು ಭಾವಿಸಬೇಕಾಗಿಲ್ಲ, ಬರೀ ಲೇಔಟ್, ಪುಟಗಳ ಸಂಖ್ಯೆ ಅಷ್ಟೇ ಬದಲಾವಣೆಗೊಳಪಡಲಿದೆ.

ಕೃಷಿ ವಿಜಯ, ಮಹಿಳಾ ವಿಜಯ, ಕರಾವಳಿ ವಿಜಯ... ಹೀಗೆ ವಿಜಯಗಳ ಸಾಲಿನಲ್ಲಿ ಹೊರಬರುತ್ತಿದ್ದ ಎಲ್ಲ ಪುರವಣಿಗಳೂ ಇನ್ನುಮುಂದೆ ಇರುವುದಿಲ್ಲವಂತೆ. ಬದಲಾಗಿ 'ಲವಲವಿಕೆ' ಎಂಬ ಪುರವಣಿ ಪ್ರತಿದಿನವೂ ಪ್ರಕಟವಾಗಲಿದೆ. ಅದರಲ್ಲಿಯೇ ಈ ಎಲ್ಲ ವಿಜಯಗಳ ಲೇಖನಗಳು ಬೆಳಕು ಕಾಣಲಿವೆ. ಇಂಗ್ಲಿಷ್ ಪತ್ರಿಕೆಗಳಂತೆ ಪ್ರತಿದಿನವೂ ಇನ್ನು ಸಿನಿಮಾ ಸುದ್ದಿಗಳು, ಗಣ್ಯರ ಹುಟ್ಟಾಟಗಳು ಈ ಪುರವಣಿ ಮೂಲಕ ಕನ್ನಡಿಗರ ಮನೆ ತಲುಪಲಿವೆ.

ವಿಜಯ ಕರ್ನಾಟಕ

ಮನುಷ್ಯ ವಿರೋಧಿ ಚಡ್ಡಿ ಸಿದ್ಧಾಂತವನ್ನು ಸಾರುವ ಕಾಲಂಗಳು ಹಾಗೆಯೇ ಮುಂದುವರೆಯಲಿವೆ. ಸಂಪಾದಕ ವಿಶ್ವೇಶ್ವರ ಭಟ್ಟ ಇನ್ನೊಂದಿಷ್ಟು ಅನಾಮಧೇಯ ಹೆಸರಿನಲ್ಲಿ ಯಾರೋ ಬರೆದಿದ್ದನ್ನು ತನ್ನ ಹೆಸರಲ್ಲಿ ಪ್ರಕಟಿಸಿ ಕೊನೆಗೆ ಇದು ತನ್ನದೇ ಅಂಕಣ ಎಂದು ಪುಸ್ತಕ ಪ್ರಕಟಿಸುವ ಪರಿಪಾಠ ಮುಂದುವರೆಸಲಿದ್ದಾರೆ. ಇದಕ್ಕೆ ಯಾವುದೇ ಅಡೆ-ತಡೆ ಇಲ್ಲ!

ಸದ್ಯ ದಶಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಚಡ್ಡಿ ಪತ್ರಿಕೆ ನಿಗದಿಯಂತೆ ಇಷ್ಟೊತ್ತಿಗೆ ರೀಲಾಂಚ್ ಆಗಿರಬೇಕಿತ್ತು. ಆದರೆ ದೆಹಲಿಯ ತಜ್ಞರ ನೆರವು ಪಡೆದು ಪತ್ರಿಕೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡುತ್ತಿರುವುದರಿಂದ ನವೆಂಬರ್‌ಗೆ ರೀಲಾಂಚ್‌ಅನ್ನು ಮುಂದೂಡಲಾಗಿದೆ ಎಂದು ವಿ.ಕ.ದ ಮೂಲಗಳು ಹೇಳುತ್ತಿವೆ.

ಇನ್ನೊಂದೆಡೆ, ಕನ್ನಡ ಪ್ರಭವದಿಂದ ವಲಸೆ ಬಂದಿರುವ ರಂಗನಾಥ್ ಅ್ಯಂಡ್ ಗ್ಯಾಂಗ್ ಮಾಡುವ ಮ್ಯಾಜಿಕ್‌ಗಾಗಿ ಸುವರ್ಣ ಸುದ್ದಿವಾಹಿನಿ ಕಾದು ಕುಳಿತಿದೆ. ಸೆಪ್ಟೆಂಬರ್ ಒಂದರಿಂದಲೇ ಚಾನಲ್ ರೀಲಾಂಚ್ ಆಗಲಿದೆ ಎಂದು ಮಾಧ್ಯಮ ವಲಯದಲ್ಲಿ ಸುದ್ದಿಯಾಗಿತ್ತು, ಆದರೆ ಏಕೋ ರಂಗನಿಗೆ ಧೈರ್ಯ ಬಂದಿಲ್ಲವಂತೆ. ಹೀಗಾಗಿ ನವೆಂಬರ್‌ಗೆ ಮುಂದೂಡಿದ್ದಾರೆ.

ಕನ್ನಡ ಪ್ರಭದಿಂದ ರಂಗನೊಂದಿಗೆ ವಲಸೆ ಬಂದಿರುವ ರವಿ ಹೆಗಡೆ, ಜೋಗಿ, ಉದಯ ಮರಕಿಣಿ ಮತ್ತಿತರರು ದೃಶ್ಯ ಮಾಧ್ಯಮದಲ್ಲಿ ಅದೇನು ಮ್ಯಾಜಿಕ್ ಮಾಡುತ್ತಾರೋ ಕಾದುನೋಡಬೇಕು. ಆದರೆ ಈ ತಂಡ ಈಗಾಗಲೇ 'ಆಪರೇಷನ್ ಸುವರ್ಣ' ಆರಂಭಿಸಿ ಸುದ್ದಿಯಂತೂ ಮಾಡಿದೆ.

'ಉತ್ತಮ ಸಮಾಜ'ಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದ, ಒಂಬತ್ತನೇ ಚಾನಲ್‌ನಲ್ಲಿ ಹೆಸರು ಮಾಡಿದ್ದ ಹಮೀದ್ ಪಾಳ್ಯ ಮತ್ತು ರಂಗನಾಥ್ ಭಾರದ್ವಾಜ್ ಎಂಬಿಬ್ಬರು 'ಆಪರೇಷನ್ ಸುವರ್ಣ'ಕ್ಕೆ ಬಲಿ ಬಿದ್ದಿದ್ದಾರೆ. ಇವರಿಗೆ ನಿಗದಿಯಾಗಿರುವ ವೇತನದ ಸುದ್ದಿ ಕೇಳೇ ಚಾನಲ್ ಮಂದಿ ಮೂರ್ಛೆ ಕೂಡ ಹೋಗಿದ್ದಾರಂತೆ. ಇನ್ನೂ ಹಲವಾರು ಮಂದಿ ಈ ಚಾನಲ್‌ನಿಂದ ಸುವರ್ಣಕ್ಕೆ ನೆಗೆಯಲು ತುದಿಗಾಲಿನಲ್ಲಿ ನಿಂತಿದ್ದಾರೆಂಬ ಸುದ್ದಿ ಇದೆ. ಕನ್ನಡ ಪ್ರಭದಲ್ಲಿ ಕೂಡ ಮತ್ತೊಂದು ತಂಡದ ವಲಸೆ ಕುರಿತು ಗುಸುಗುಸು ಸುದ್ದಿ ಹರಡುತ್ತಿದೆ. ಆದರೆ ರಂಗನಾಥ್ ಬಿಟ್ಟ ಮೇಲೂ 'ಕನ್ನಡ ಪ್ರಭ' ಮೊದಲಿನಂತೆಯೇ ಬರುತ್ತಿರುವುದು ಅಲ್ಲಿಯ ಸಿಬ್ಬಂದಿಗಳ ಆತ್ಮವಿಶ್ವಾಸವನ್ನು ಹೆಚ್ಚಿಸಿದೆಯಂತೆ.

ಒಟ್ಟಾರೆ ಚಡ್ಡಿ ಧೋರಣೆಯ ರಾಜೀವ್ ಚಂದ್ರಶೇಖರ್ ಸುವರ್ಣಕ್ಕೆ ಹೊಳಪು ನೀಡಲು ಪ್ರತಿಭಾವಂತರನ್ನೆಲ್ಲಾ ಕೊಂಡುಕೊಳ್ಳಲಾರಂಭಿಸಿದ್ದಾರೆ. ಬಿಪಿಎಲ್ ಕಂಪನಿಯ ಕೆಲಸಗಾರರನ್ನು ನಡುನೀರಿನಲ್ಲಿ ಕೈಬಿಟ್ಟಂತೆ ಈ ಪತ್ರಕರ್ತರನ್ನೂ ಬೀದಿಗೆ ತಳ್ಳದಿದ್ದರೆ ಸಾಕು.

● ಪ್ರವೀಣ್. ಎಲ್

ಇಸ್ಕಾನ್‌ನಿಂದ ಪತ್ರಕರ್ತರಿಗೆ 'ತೀರ್ಥ'ಯಾತ್ರೆ!

ಶಾಲಾಮಕ್ಕಳಿಗೆ ಬಿಸಿಯೂಟ ನೀಡುವ ಯೋಜನೆಯ ಹೆಸರಿನಲ್ಲಿ ಕೋಟ್ಯಂತರ ರೂ. ಹಣ ಮಾಡುತ್ತಿರುವ ಬೆಂಗಳೂರಿನ ಇಸ್ಕಾನ್ ಈಗ ರಾಜ್ಯದ 'ಜೊಲ್ಲು ಸುರಿಸುವ' ಪತ್ರಕರ್ತರನ್ನು ಬುಟ್ಟಿಗೆ ಹಾಕಿಕೊಳ್ಳುವ ಕೆಲಸ ಮಾಡುತ್ತಿದೆ.

ಪ್ರತಿಯೊಂದು ಪತ್ರಿಕಾ ಕಾರ್ಯಾಲಯಕ್ಕೂ ಪ್ರಸಾದದ ಹೆಸರಿನಲ್ಲಿ ಒಂದಿಷ್ಟು ಸ್ವೀಟು ಮತ್ತು ಪ್ರೆಸ್ ನೋಟ್ ಕಳುಹಿಸಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದ ಇಸ್ಕಾನ್ ಅಧ್ಯಕ್ಷ ಮಧುಪಂಡಿತ ದಾಸ್ ಅ್ಯಂಡ್ ಟೀಮ್ ಇದೀಗ ಪತ್ರಿಕೆಯ ಸಂಪಾದಕರನ್ನು 'ತೀರ್ಥ' ಯಾತ್ರೆಗೆ ಕರೆದುಕೊಂಡು ಹೋಗುವ ಮೂಲಕ ಮಾಧ್ಯಮಗಳಲ್ಲಿ ತಮ್ಮ ವಿರುದ್ಧ ಸುದ್ದಿ ಪ್ರಕಟವಾಗದಂತೆ ಮಾಡಲು ಹೊರಟಿದೆ.



ಈಗಾಗಲೇ ಇಸ್ಕಾನ್‌ನ ಭ್ರಷ್ಟಾಚಾರವನ್ನು ಕಾಂಗ್ರೆಸ್ ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಬಹಿರಂಗಪಡಿಸಿದ್ದಾರೆ. ಬಿಸಿಯೂಟಕ್ಕೆ ಸರ್ಕಾರದ ನೆರವು ಪಡೆಯುತ್ತಿದ್ದರೂ, ವಿದೇಶಗಳಲ್ಲಿ ಬಡಮಕ್ಕಳ ಫೋಟೋ ತೋರಿಸಿ, ಕೋಟ್ಯಂತರ ರೂ. ಸಂಗ್ರಹಿಸಿ, ಅದನ್ನು ದುರುಪಯೋಗಪಡಿಸಿಕೊಂಡಿರುವುದು, ದೇವರ ಹೆಸರಿನಲ್ಲಿ ರಿಯಲ್‌ಎಸ್ಟೇಟ್ ದಂಧೆ ನಡೆಸುತ್ತಿರುವುದು, ರೆಸಾರ್ಟ್‌ಗಳನ್ನು ನಡೆಸುತ್ತಿರುವುದು ಈಗ ದಾಖಲೆ ಸಮೇತ ಬಹಿರಂಗಗೊಂಡಿದೆ.

ಈ ಸಂಬಂಧ ಪ್ರಕರಣ ನ್ಯಾಯಾಲಯದಲ್ಲಿದ್ದಾಗ ನ್ಯಾಯಾಧೀಶರಿಗೇ ಈ ದೇವದೂತರು ಬ್ಲ್ಯಾಕ್‌ಮೇಲ್ ಮಾಡಹೊರಟಿದ್ದರು. ತಮ್ಮ ವಿರುದ್ಧ ತೀರ್ಪು ನೀಡಿದ ಕಾರಣಕ್ಕೆ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧವೇ ಅವಹೇಳನಕಾರಿ ಹೇಳಿಕೆ ನೀಡಿದ್ದರು. ಇದಕ್ಕಾಗಿ ಮಧುಪಂಡಿತ್ ದಾಸ್ ಮತ್ತು ಅವರ ಶಿಷ್ಯ ವರ್ಗದ ವಿರುದ್ಧ ನ್ಯಾಯಾಂಗನಿಂದನೆ ಕೇಸು [illegible]

ಇಂತಿಪ್ಪ ಮಧುಪಂಡಿತ್ ಎಂಬ ಚಾಲು ಗುರು ಮತ್ತು ಆತನ ಚೋರ ಶಿಷ್ಯರು ಕರ್ನಾಟಕದ ಮಾಧ್ಯಮಗಳಲ್ಲಿ ತಮ್ಮ ವಿರುದ್ಧ ಸುದ್ದಿಗಳೇ ಪ್ರಕಟವಾಗದಂತೆ (ನೆನಪಿಸಿಕೊಳ್ಳಿ: ಡಿ.ಕೆ.ಶಿವಕುಮಾರ್ ಹಗರಣವನ್ನು ಸದನದಲ್ಲಿ ಬಹಿರಂಗಪಡಿಸಿದಾಗ ಎಲ್ಲಾ ಪತ್ರಿಕೆಗಳು ಮುಖಪುಟದಲ್ಲಿ ವಿವರವಾಗಿ ವರದಿ ಮಾಡಿದ್ದವು) ನೋಡಿಕೊಳ್ಳಲು ಸಂಪಾದಕರು ಮತ್ತು ಪ್ರಮುಖ ವರದಿಗಾರರನ್ನು ಬುಟ್ಟಿಗೆ ಹಾಕಿಕೊಳ್ಳುವ ಪ್ರಯತ್ನ ಆರಂಭಿಸಿದ್ದಾರೆ. ಮೊದಲ ಪ್ರಯತ್ನವಾಗಿ ಕಳೆದ ಶುಕ್ರವಾರ ಸಂಪಾದಕರ, ಮುಖ್ಯ ವರದಿಗಾರರ ಒಂದು ತಂಡವನ್ನು ಜೈಪುರಕ್ಕೆ ಕರೆದುಕೊಂಡು ಹೋಗಿ, ಮಸಾಜ್ ಮಾಡಿ ಕಳುಹಿಸಿದ್ದಾರೆ.

ಜೈಪುರದಲ್ಲಿ ಇಸ್ಕಾನ್‌ಗೆ ಸೇರಿದ ರೆಸಾರ್ಟ್ ಇದ್ದು, ಅಲ್ಲಿ ಇವರಿಗೆಲ್ಲ ರಾಜಾತಿಥ್ಯ ನಡೆದಿದೆ. ಇಂಥ ಕಳ್ಳ ಆಧ್ಯಾತ್ಮಿಗಳಿಗೆ ಸದಾ ಪ್ರೋತ್ಸಾಹ ನೀಡುತ್ತಾ ಬಂದಿರುವ ಟೈಮ್ಸ್ ಆಫ್ ಇಂಡಿಯಾದ ಸಂಪಾದಕ ಬಲರಾಮ್, ಇದರ ಕನ್ನಡ ಆವೃತ್ತಿಯ ಸಂಪಾದಕ ಈಶ್ವರ ದೈತೋಟ, ಫೋಟೋ ನ್ಯೂಸ್ ನೆಟ್‌ವರ್ಕ್‌ನ ರಾಮಸ್ವಾಮಿ ಸೇರಿದಂತೆ ಪ್ರಮುಖ ಪತ್ರಿಕೆಯ ಪ್ರತಿನಿಧಿಗಳು ಜೈಪುರದಲ್ಲಿ 'ಕೃಷ್ಣ' ದರ್ಶನ ಮಾಡಿಕೊಂಡು ಬಂದಿದ್ದಾರೆ. ಇನ್ನು ಇಸ್ಕಾನ್ ವಿರುದ್ಧದ ಸುದ್ದಿ ಪತ್ರಿಕೆಗಳಲ್ಲಿ ಹಿಂದಿನಂತೆ ಜೋರಾಗಿ ಕಾಣಿಸಿಕೊಳ್ಳಲಾರದು.

ಇನ್ನೊಂದೆಡೆ, ಡಿ.ಕೆ. ಶಿವಕುಮಾರ್ ಇಸ್ಕಾನ್ ಹಗರಣವನ್ನು ಸದನದಲ್ಲಿ ಬಹಿರಂಗಪಡಿಸಿ ಎರಡೂವರೆ ತಿಂಗಳು ಕಳೆದಿದೆ. ಆದರೆ ಸರ್ಕಾರ ಭರವಸೆ ನೀಡಿದಂತೆ ಇನ್ನೂ ತನಿಖೆಗೆ ಸದನ ಸಮಿತಿ ರಚಿಸಿಲ್ಲ, ಪುತ್ತೂರು ಮಠದಲ್ಲಿ ಕಲಿತ 'ಶವಾಸನ' ಹಾಕಿಕೊಂಡು ಸರ್ಕಾರ ಅಡ್ಡಬಿದ್ದಿದೆ. ಇತ್ತ ಇಸ್ಕಾನ್ ಎಗ್ಗಿಲ್ಲದೆ ವಿದೇಶದಲ್ಲಿ ದುಡ್ಡು ಸಂಗ್ರಹ ಮುಂದುವರೆಸಿದೆ. ಈ ರೀತಿ ದೇವರ ಹೆಸರಿನಲ್ಲಿ ಲೂಟಿ ಮಾಡುವವರನ್ನು ಯಾವುದರಿಂದ 'ಪೂಜೆ' ಮಾಡಬೇಕೋ, ಭಕ್ತರೇ ನಿರ್ಧರಿಸಬೇಕು!

● ವರದಿಗಾರ

ಚಿಟ್ಸ್

ಬೃಂದಾವನದ ಕಳ್ಳ 'ಕೃಷ್ಣ'ರು

ಮೊನ್ನೆ ಗೆಳೆಯನೊಬ್ಬ ದೆಹಲಿಯಿಂದ ಆಗ್ರಾ ನಗರಕ್ಕೆ ಹೋದಾಗ, ದಾರಿ ಮಧ್ಯೆ ಬೃಂದಾವನಕ್ಕೂ ತನ್ನ ಗೆಳತಿಯೊ[…] ಭೇಟಿ ನೀಡಿದ. ಜನಸಂದಣಿ ಇದ್ದ ಏರಿಯಾ ಒಂದರ ರಸ್ತೆಯಲ್ಲಿ ಕಾರ್ ಅ[…] ಪಾರ್ಕ್ ಮಾಡಿದ ಅವರಿಬ್ಬರೂ ಬೃಂದಾವನವನ್ನು ಸುತ್ತಾಡಿದರು.

ಸಂಜೆ ಆಗುತ್ತಿದ್ದಂತೆ ಅವರು ತಮ್ಮ ಕಾರ್ ಇದ್ದಲ್ಲಿಗೆ ಬಂದು ನೋಡಿದ[…] ಅದರೊಳಗಿದ್ದ ಮೊಬೈಲ್ ಫೋನ್‌ಗಳು, ಒಂದು ಲ್ಯಾಪ್‌ಟಾಪ್, ಸೂಟ್‌ಕೇ[…] ಅದರೊಳಗಿದ್ದ ಚಿನ್ನಾಭರಣ, ಅಸಲಿ ಕಾಗದಪತ್ರಗಳು, ಬಟ್ಟೆ, ಬರೆಗ[…] ಮಾತ್ರವಲ್ಲ ಪ್ಲಾಸ್ಟಿಕ್ ಕವರ್‌ನಲ್ಲಿಟ್ಟದ್ದ ರಬ್ಬರ್ ಚಪ್ಪಲಿಗಳೂ ಕಳ್ಳತನವಾಗಿದ್ದ[…]

ಇದರ ಬಗ್ಗೆ ಅವರಿಬ್ಬರೂ ಹತ್ತಿರದ ಪೊಲೀಸ್ ಠಾಣೆಯಲ್ಲಿ ದೂ[…] ನೀಡಿ "ನಮ್ಮ ಸಾಮಾನು ವಾಪಸ್ ಸಿಗುವ ಸಾಧ್ಯತೆಗಳಿವೆಯೇ?" ಎಂ[…] ಕೇಳಿದರು. ಆಗ ಬೃಂದಾವನ ಎಂಬ 'ಪುಣ್ಯ ಕ್ಷೇತ್ರ'ದ ಪೊಲೀಸ್ ಅಧಿಕಾ[…] ನಗುತ್ತಾ ಹೇಳಿದ್ದೇನು ಗೊತ್ತಾ? "ಹೇಳಿಕೇಳಿ ಇದು ಕಳ್ಳ ಕೃಷ್ಣನ ಊರ[…] ಇಲ್ಲಿ ಆತನಿಗೆ ಅಪಾರ ಶಿಷ್ಯರಿದ್ದಾರೆ. ನಿಮ್ಮ ಲಕ್ ಮೇಲೆ ನಿಮ್ಮ ಸಾಮಾ[…] ಸಿಗಬಹುದು!"

ಕಳ್ಳ ಕೃಷ್ಣನ ಬೃಂದಾವನದ ಕಳ್ಳ ಕೃಷ್ಣರ ವೃತ್ತಾಂತವಿದು!!

ಮಂತ್ರಿ ಮುಮ್ತಾಜ್ ಅಲಿಖಾನ್

"ಬುರ್ಖಾ ತೆಗೆಯಿರಿ... ಚೆಕ್ ಪಡೆಯಿರಿ...."



ಸದಾ ಚಡ್ಡಿ ಸಿದ್ಧಾಂತಗಳನ್ನು ವೇದಿಕೆಗಳ ಮೂಲಕ, ವಾಚಕರವಾಣಿಯ ಪತ್ರಗಳ ಮೂಲಕ ಪ್ರಸಾರ ಮಾಡುವ ಭಾರೀ ಜವಾಬ್ದಾರಿಯನ್ನು ಹೊತ್ತಿರುವ ವಕ್ಫ್ ಮಂತ್ರಿ ಪ್ರೊ. ಮುಮ್ತಾಜ್ ಅಲಿಖಾನ್ ಈಗ ಬುರ್ಖಾ ಬಗ್ಗೆ ಅಣಿಮುತ್ತು ಉದುರಿಸಿದ್ದಾನೆ. ಮುಸ್ಲಿಂ ಮಹಿಳೆಯರು ಬುರ್ಖಾ ಧರಿಸುವುದರಿಂದ, ಅವರ ಮುಖಚಹರೆ ಗೊ[…] ಗದೇ ಎಷ್ಟೋ ಸರ್ಕಾರಿ ಕಾರ್ಯಕ್ರಮಗಳ ಲಾಭ ಅವರಿಗೆ ತಟ್ಟುವುದ[…] ಇಲ್ಲ; ಪೊಲೀಸ್ ಠಾಣೆ, ಪಾಸ್‌ಪೋರ್ಟ್ ಆಫೀಸುಗಳಲ್ಲೂ ಈ ಕಾರಣಕ್ಕಾ[…] ಬುರ್ಖಾಧಾರಿ ಮಹಿಳೆಯರು ಅನ್ಯಾಯಕ್ಕೊಳಗಾಗುತ್ತಿದ್ದಾರೆ ಎಂದು 'ಉಪದೇ[…] ಮಾಡಿರುವ ಮುಮ್ತಾಜ್ ಸಾಹೇಬರು, ಅದ್ಯಾವ ಠಾಣೆಯಲ್ಲಿ ಮುಖ[…] ಬುರ್ಖಾ ಧರಿಸಿದ ಮಹಿಳೆಯ ಪೋಟೋ ನೋಡಿದ್ದರೊ? ಚುನಾವಣ[…] ಗುರುತಿನ ಚೀಟಿ, ರೇಷನ್ ಕಾರ್ಡು ಮುಂತಾದವುಗಳಿಗೆ ಯಾರೂ ಬುಖ[…] ಧರಿಸಿದ ಪೋಟೋ ನೀಡುವುದಿಲ್ಲ, ಹಾಗೆ ನೀಡಿದರೂ ಸಂಬಂಧಪ[…] ಇಲಾಖೆಗಳು ಅವನ್ನು ಸ್ವೀಕರಿಸುವುದೂ ಇಲ್ಲ. ಇಷ್ಟು ಪ್ರಾಥಮಿಕ ಜ್ಞಾನವಿಲ್ಲ[…] ಮುಮ್ತಾಜ್ ಬಿಜೆಪಿ ನಾಯಕರನ್ನು ತೃಪ್ತಿಪಡಿಸಲು ಏನೇನೋ ಮಾತಾ[…] ಪೆದ್ದನ ತರಹ ವರ್ತಿಸುತ್ತಿದ್ದಾನೆ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಧಾರವಾಡದಲ್ಲಿ ಮುಸ್[…] ಸಮುದಾಯದ ಮಹಿಳೆಯರಿಗಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ[…] ಮುಮ್ತಾಜ್ ಈ ಬುರ್ಖಾ ವಿಷಯ ಎತ್ತುವ ಮೂಲಕ 'ಬುರ್ಖಾ ಧರಿ[…] ದರೆ ಯಾವ ಸೌಲಭ್ಯಗಳನ್ನು ಕೊಡಲಾಗುವುದಿಲ್ಲ' ಎಂದು ಪರೋಕ್ಷವಾ[…] ಎಚ್ಚರಿಸಿದ್ದಾನೆ.

ಕರಾವಳಿಯಲ್ಲಿ ಬುರ್ಖಾ, ಸ್ಕಾರ್ಫ್‌ಗಳನ್ನು ಚಡ್ಡಿಗಳು ಅಸ್ತ್ರ ಮಾಡಿಕೊಂ[…] ದ್ದಾರೆ. ಇಲ್ಲಿ ಹುಬ್ಬಳ್ಳಿ ಕಡೆ ಅಂತಹದ್ದಿನ್ನು ಶುರುವಾಗಿಲ್ಲ ಎಂದು ನೆಮ್ಮ[…] ಪಡುತ್ತಿರುವಾಗಲೇ ಈ ಮೂರ್ಖಮಂತ್ರಿ ಅನಗತ್ಯವಾಗಿ ಬುರ್ಖಾ ವಿಷಯ[…] ಎತ್ತಿದ್ದಾನೆ. ಬುರ್ಖಾ ಧರಿಸುವುದು, ಬಿಡುವುದು ಅವರವರ ಇಷ್ಟ, ಧಾರ್ಮಿ[…] ನಂಬಿಕೆ. ಇದಕ್ಕೆ ನಮ್ಮ ಸಂವಿಧಾನವೂ ಅವಕಾಶ ನೀಡಿದೆ. ಅಂಥದ್ದರ[…] ಸಂಘಪರಿವಾರಿಗಳನ್ನು ಮೆಚ್ಚಿಸಲು ಮುಮ್ತಾಜ್ ತಿಣುಕಾಡುತ್ತಿರುವುದ[…] ಹಾಸ್ಯಾಸ್ಪದವಾಗಿದೆ.

ಶೋಭಕ್ಕನ ಶಿಷ್ಯ ಮಂಜುನಾಥನ ಲೂಟಿ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆಯ[…] ಶಿಷ್ಯ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆರ್ಕೆಸ್ಟ್ರಾ ಮಂಜುನಾಥನ ಲೂಟಿ ಅವ್ಯಾಹತವಾಗಿ ನಡೆದಿದೆ. ಲೋಕಾಯುಕ್ತದಲ್ಲಿ ದೂರು ದಾಖಲಾದರೂ, ಜಿಲ್ಲಾಧಿಕಾರಿ ನೋಟೀಸ್ ನೀಡಿದರೂ ಮಂಜುನಾಥನ ಮೇಯ್ದಾಟ ಮುಂದುವರಿದೇ ಇದೆ.



ದಸರಾ ಉತ್ಸವದ ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕೆಂಬ ನಿಯಮವಿದೆ. ಆದರೆ 'ವೈಷ್ಣವೀದೇವಿ ದರ್ಶನ' ಕಾರ್ಯಕ್ರಮ[…] ಯಾವ ಟೆಂಡರನ್ನೂ ಕರೆದಿಲ್ಲ. ಒಳಒಪ್ಪಂದ ಮಾಡಿಕೊಂಡ ಮಂಜುನಾ[…] ತನಗೆ ಬೇಕಾದವನಾದ ಸಬರ್‌ವಾಲ್‌ಗೆ ಈ ಕೆಲಸ ವಹಿಸಿದ. ದೇವಿದರ್ಶನ[…] 25 ರೂ. ಫೀಸು ವಸೂಲಿ ಮಾಡತೊಡಗಿದ ಸಬರ್‌ವಾಲ್. ಡಿ.[…] ಮಣಿವಣ್ಣನ್ 20 ರೂ. ಫೀಸು ನಿಗದಿ ಮಾಡಿ ಎಂದು ಹೇಳಿದರ[…] ಸಬರ್‌ವಾಲ್ 25 ರೂ. ಸುಲಿಯುತ್ತಲೇ ಇದ್ದಾನೆ. ಈ ದೇವಿದರ್ಶನ 8[…] ದಿನಗಳ ಕಾಲ ಇರುವುದರಿಂದ ಸಬರ್‌ವಾಲ್, ಮಂಜುನಾಥ್‌ಗಳಿಗೆ ಹಬ್ಬವ್ವೋ[…] ಹಬ್ಬ.

ದೇವಿ ದರ್ಶನದ ಟಿಕೆಟ್ ಮೇಲೆ ವಸ್ತು ಪ್ರದರ್ಶನ ಪ್ರಾಧಿಕಾರ[…] ಹೆಸರೂ ಇಲ್ಲ, ಬದಲಿಗೆ ವೈಷ್ಣವಿದೇವಿ ಸಮಿತಿ ಎಂದು ತೆಲುಗ[…] ಬರೆಯಲಾಗಿದೆ. ಅಂದರೆ ಟಿಕೆಟ್ ದುಡ್ಡು ಪ್ರಾಧಿಕಾರಕ್ಕೆ ಹೋಗುವ ಬದಲ[…] ಮಂಜುನಾಥ್, ಸಬರ್‌ವಾಲ್‌ಗಳ ಜೇಬು ಸೇರುತ್ತಿದೆ.

ಹಾಗೆಯೇ ವಾಹನ ನಿಲುಗಡೆಯಲ್ಲೂ ಸುಲಿಗೆ ಅವ್ಯಾಹತವಾಗಿ ನಡೆದ[…] ತನಗೆ ಬೇಕಾದವರಿಗೆಲ್ಲ ಕಾಮಗಾರಿಗಳನ್ನು ಕೊಟ್ಟು ಸಖತ್ ಕಮಾ[…] ಮಾಡಿಕೊಂಡ ಮಂಜುನಾಥ್ ಈಗ ದೇವಿದರ್ಶನದಲ್ಲೂ ಬಾಚಿಕೊಳ್ಳುತ್ತಿದ್ದಾ[…] ಇಂತಹ ತಿನ್ನಬಾಕ ಮಂಜುನಾಥನನ್ನು ಬೆಳೆಸುತ್ತಿರುವ ಶೋಭಾ ಕರಂದ್ಲಾ[…] ರಾಮದಾಸ್, ಶಂಕರಲಿಂಗೇಗೌಡರನ್ನು ತುಳಿಯಲು ಮಂಜುನಾಥ್‌ನ[…] ಬಳಸಿಕೊಳ್ಳುತ್ತಿದ್ದಾರೆ.

ಪ್ರವಾಹ ಎಂಬ ದುರಂತ, ಪರಿಹಾರ ಎಂಬ ಆಪತ್ತು?

...ಬಂದು ಪುನರ್ ರಚಿಸಬೇಕೆಂದು ಸಲಹೆ ನೀಡಲಾಗಿತ್ತು. ...ವಿಪತ್ತು ಸಂಭವಿಸಿದಾಗ ತುರ್ತು ಪರಿಹಾರಕ್ಕೆಂದು ...ಪರಿಹಾರ ನಿಧಿ (Calamity Relief Fund) ...ತ್ತು ನಂತರದ ತುರ್ತುಗಳಿಗಾಗಿ ರಾಷ್ಟ್ರೀಯ ನೈಸರ್ಗಿಕ ...ತುರ್ತು ನಿಧಿ (National Calamity ...gency Fund) ಸ್ಥಾಪಿಸಲಾಯಿತು. ಆಯಾ ...ಈವರೆಗೆ ಪ್ರಕೃತಿ ವಿಕೋಪಕ್ಕೆಂದು ಎಷ್ಟು ವೆಚ್ಚ ...ದೆ ಎಂಬುದರ ಹಿನ್ನೆಲೆಯಲ್ಲಿ ಆಯಾ ರಾಜ್ಯಗಳ ...ನಿಗದಿ ಮಾಡಲಾಯಿತು.

...ಇಡಿ ದೇಶಕ್ಕೆ ಈ ಬಾಬತ್ತಿನಲ್ಲಿ 2000-2005ರವರೆಗೆ ...ಷ್ಟು ಕೇವಲ 11,000 ಕೋಟಿ ರೂಪಾಯಿಗಳನ್ನು ...ಸರ್ಗಿಕ ವಿಪತ್ತುಗಳಿಂದ ಆಸ್ತಿ, ಮನೆ, ಜಾನುವಾರು, ...ತ ಸೌಕರ್ಯ ಮತ್ತು ಆದಾಯಮೂಲಗಳ ಮೇಲೆ ...ಹಾನಿಗಳನ್ನು ಭರಿಸಲು ಈ ನಿಧಿಯನ್ನು ಬಳಸುವಂತಿಲ್ಲ, ...ರ್ಕಾರದ ಬಜೆಟ್ಟುಗಳು ಮತ್ತು ಯೋಜನಾ ವೆಚ್ಚಗಳೇ ...ು. ಈ ನೀತಿಯನ್ನು ಎಲ್ಲಾ ಪಕ್ಷಗಳೂ ಒಪ್ಪಿಕೊಂಡಿವೆ. ...ಕೇಂದ್ರದಿಂದ 10,000 ಕೋಟಿ ರೂಪಾಯಿಗಳ ...ನ್ನು ರಾಜ್ಯ ಸರ್ಕಾರ ಕೇಳಿದರೂ, ಅಖಿಲ ಪಕ್ಷ ...ವನ್ನು ದೆಹಲಿಗೆ ಕರೆದುಕೊಂಡು ಹೋದರೂ ಈ ...ಷ್ಟು ಹಣ ದೊರೆಯುವುದಿಲ್ಲ.

...ಲ್ಲಾ ಒಂದು ...ರೆ ಇಡೀ ದೇಶದಲ್ಲಿ ...ಷ್ಟ್ರ ಮಾತ್ರ ...ಷ್ಟದ ನೈಸರ್ಗಿಕ ...ರ್ವಹಣಾ ...ದನ್ನು ...ಕೊಂಡಿದೆ. ರಾಜಸ್ಥಾನ ...ರಿಸ್ಸಾಗಳು ಕನಿಷ್ಠ ...ವಿತರಣಾ ...ದನ್ನಾದರೂ ...ಂಡಿವೆ. ಆದರೆ ...ವನ್ನೂ ...ದಂತೆ ಉಳಿದ ...ರಾಜ್ಯದಲ್ಲೂ ಅಂಥ ...ರೂಪಿಸಿಲ್ಲ. ಭಾರತದ 14 ರಾಜ್ಯಗಳಲ್ಲಿ ವಿಪತ್ತು ...ಪ್ರಾಧಿಕಾರವೊಂದನ್ನು ಸ್ಥಾಪಿಸಲಾಗಿದೆ. ...ಲ್ಲಾ ಎಲ್ಲಾ ರಾಜ್ಯಗಳು ಇಂಥಾ ಪ್ರಾಧಿಕಾರವನ್ನು ...ಕಿತ್ತು. ಕರ್ನಾಟಕದಲ್ಲಿ ಕಳೆದ ಜನವರಿಯಲ್ಲಿ ...ಮಂತ್ರಿಗಳ ನೇತೃತ್ವದಲ್ಲಿ ಒಂದು ಪ್ರಾಧಿಕಾರ ...ಗಿದೆಯಾದರೂ ಅದು ಈವರೆಗೆ ಒಮ್ಮೆಯೂ ...ಲ್ಲ.

...ಯಾವುದೇ ಸಿದ್ಧತೆಯಿಲ್ಲದೆ ರಾಜ್ಯ ಸರ್ಕಾರ ...ಡಿನ ಸುನಾಮಿ ಮಾದರಿ ಪರಿಹಾರಕ್ಕೆ ಆರೆಸ್ಸೆಸ್‌ನಂಥ ...ಗಳನ್ನು ಕಟ್ಟಿಕೊಂಡು ಹೊರಟಿದೆ. ತಮಿಳುನಾಡಿನಲ್ಲಿ ...ಬಂದನಂತರ ತಮಿಳುನಾಡು ಸರ್ಕಾರಕ್ಕೆ ಸಹಾಯ ...ಹಕಾರಗಳ, ಹಣ ಮತ್ತು ವಸ್ತುಗಳ ಪ್ರವಾಹವೇ ...ತು. ಇದನ್ನು ಅನುಸರಿಸಲು ತಮಿಳುನಾಡು ಸರ್ಕಾರ ...ದ ನೀತಿಯು ಇದ್ದದ್ದನ್ನು ಕಳೆದುಕೊಂಡವರನ್ನು ...ಗಣಿಸಿಕೊಂಡಿತ್ತೇ ವಿನಃ ಈ ಮೊದಲೇ ಎಲ್ಲವನ್ನೂ ...ಡವರನ್ನು ಪರಿಗಣಿಸಿಯೇ ಇರಲಿಲ್ಲ, ಅಂದರೆ ಭೂಮಿ ...ಡವರು, ದೋಣಿ, ಬಲೆ ಕಳೆದುಕೊಂಡವರು.. ಈ ...ಗಾಗಲೇ ಇದ್ದ ಆಸ್ತಿಯನ್ನು ಕಳೆದುಕೊಂಡವರನ್ನು ...ಅರ್ಹರನ್ನಾಗಿ ಮಾಡಿತೇ ವಿನಃ ತಮ್ಮ ಶ್ರಮಶಕ್ತಿಯನ್ನು ...ಡುಕೊಳ್ಳಲು ಬೇರೇನೂ ಆಸ್ತಿಯಿಲ್ಲದ ರೈತಕೂಲಿಗಳನ್ನು, ...ಹೊಟ್ಟೆಗೆ ಶ್ರಮದ ಕೆಲಸ ಮಾಡುವ ದಲಿತ ಕಾರ್ಮಿಕರನ್ನು ಅಧಿಕೃತ ಪರಿಹಾರದ ಪಟ್ಟಿಗೆ ಸೇರಿಸಲೇ ಇಲ್ಲ.

ತುರ್ತು ಪರಿಹಾರ ನೀಡುವಾಗಲೂ ಅದನ್ನು ಹಳ್ಳಿಗಳ ಜಾತಿ ಪಂಚಾಯತಿಗಳ ಮೂಲಕ ಪರಿಹರಿಸುವ ನೀತಿ ಅನುಸರಿಸಿದ್ದರಿಂದ ಬಹುಪಾಲು ದಲಿತ ಕುಟುಂಬಗಳಿಗೆ ತತ್‌ಕ್ಷಣದ ಪರಿಹಾರವೂ ಸಿಗಲಿಲ್ಲ ಎಂದು ಹಲವು ಅಧ್ಯಯನಗಳು ರುಜುವಾತು ಪಡಿಸಿವೆ. ಲೇಖನದ ಪ್ರಾರಂಭದಲ್ಲಿ ಉಲ್ಲೇಖವಾಗಿರುವುದು ಇಂಥಾ ಒಂದು ಸಂದರ್ಭವೇ! ಸುನಾಮಿ ಅಪ್ಪಳಿಸಿದ ಪ್ರಾರಂಭದ ದಿನಗಳಲ್ಲಿ ಆಹಾರದ ಪೊಟ್ಟಣಗಳ ಹಂಚಿಕೆಯ ಜವಾಬ್ದಾರಿ ಹೊತ್ತಿದ್ದ ಸ್ಥಳೀಯ ಪ್ರಭಾವಶಾಲಿಗಳು ದಲಿತ ಸಮುದಾಯಗಳಿಗೆ ತಾವು ಬಳಸಿ ಉಳಿದದ್ದನ್ನು ಮಾತ್ರ ನೀಡಿದರು ಎಂದು ವರದಿಯಾಗಿದೆ. ಅದೇ ರೀತಿ ಸುನಾಮಿಯಿಂದ ಮನೆಮಠ ಕಳೆದುಕೊಂಡವರಿಗೆ ತತ್‌ಕ್ಷಣದ ಶೆಡ್‌ಗಳನ್ನು ಕಟ್ಟಿಕೊಳ್ಳಲು ತಲಾ 2000 ರೂ. ನೀಡಲು 20 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿತ್ತು. ಆದರೆ ಮರುವಾರದಲ್ಲೇ 1 ಲಕ್ಷ ತಾತ್ಕಾಲಿಕ ಮನೆಗಳನ್ನು ನಿರ್ಮಿಸಲು ಖಾಸಗಿಯವರಿಗೆ 40 ಕೋಟಿ ರೂ.ಗಳನ್ನು ನೀಡಿ ಹಳೆಯ ಯೋಜನೆ ರದ್ದುಪಡಿಸಲಾಯಿತು. ನಾಲ್ಕು ವರ್ಷ ಕಳೆದರೂ ಈ ಯೋಜನೆಯಲ್ಲಿ ಕೇವಲ 35,000 ಮನೆಗಳನ್ನು ಮಾತ್ರ ನಿರ್ಮಿಸಲಾಗಿದೆ. ಹೀಗಾಗಿ ಉಳಿದವರು ಬೀದಿಪಾಲಾಗಿಯೇ ಉಳಿದರು.



ಇಂದು ಕರ್ನಾಟಕ ಸರ್ಕಾರವೂ ಸಹ ಖಾಸಗಿ ಸಹಭಾಗಿತ್ವದಲ್ಲಿ 2 ಲಕ್ಷ ಮನೆ ನಿರ್ಮಿಸುವ ಯೋಜನೆ ಹಾಕುತ್ತಿರುವಾಗ ಮತ್ತು ಪರಿಹಾರ ವಿತರಣೆಗೆ ನೀತಿಯನ್ನು ರೂಪಿಸುವ ಕ್ರಮದಲ್ಲಿರುವಾಗ ಸುನಾಮಿ ಪರಿಹಾರ ಸೃಷ್ಟಿಸಿದ ಅಸಮಾನತೆ ಮತ್ತು ವೈಪರೀತ್ಯಗಳು ಗಮನದಲ್ಲಿರಬೇಕು. ಅದರಲ್ಲೂ ಹಾಲಿ ಸರ್ಕಾರಕ್ಕೆ ಮಠ-ಮಾನ್ಯಗಳ ಮತ್ತು ಜಾತಿ ಸಂಘಟನೆಗಳ ಬಗ್ಗೆ ವಿಶೇಷ ವ್ಯಾಮೋಹವಿರುವಾಗ ಈ ಎಚ್ಚರಿಕೆ ನಾಗರಿಕ ಸಮಾಜಕ್ಕಾದರೂ ಅತ್ಯಗತ್ಯವಾಗಿದೆ.


ಅದೇ ರೀತಿ ಗುಜರಾತ್ ಭೂಕಂಪದ ಪರಿಹಾರ ನಿಧಿಗೆ ಆರೆಸ್ಸೆಸ್‌ನ ಅಂಗಸಂಸ್ಥೆಗಳು ಸರ್ಕಾರದ ಸಂಪೂರ್ಣ ಬೆಂಬಲದೊಂದಿಗೆ ಹಣ ಸಂಗ್ರಹ ಮಾಡಿದವು. ಅದರ ವಿತರಣೆಯ ಜವಾಬ್ದಾರಿಯನ್ನೂ ಹೊತ್ತವು. ನಂತರದಲ್ಲಿ ಆವಾಜ್ ಎಂಬ ಸಂಸ್ಥೆಯೊಂದು ಅಲ್ಲಿ ನಡೆದ ಪರಿಹಾರ ವಿತರಣೆಯ ಬಗ್ಗೆ ಅಧ್ಯಯನ ಮಾಡಿ ವರದಿಯನ್ನು ಬಿಡುಗಡೆ ಮಾಡಿತು. ಅದರ ಪ್ರಕಾರ ಪರಿಹಾರದಲ್ಲಿ ವ್ಯವಸ್ಥಿತವಾಗಿ ಅಲ್ಪಸಂಖ್ಯಾತರಿಗೆ ಮತ್ತು ದಲಿತರಿಗೆ ಮೋಸವಾಗಿತ್ತಲ್ಲದೆ ಬಹಳಷ್ಟು ಹಣ ಆರೆಸ್ಸೆಸ್‌ನ ಯೋಜನೆಗಳಿಗೆ ಬಳಕೆಯಾಗಿತ್ತು. ಹೀಗಾಗಿ ಬಿಜೆಪಿ ಸರ್ಕಾರಕ್ಕೆ ಪ್ರವಾಹದಂಥ ಭೀಕರ ಸನ್ನಿವೇಶವೂ ಸಹ ಆರೆಸ್ಸಸ್ಸನ್ನು ಕಟ್ಟಲು ಅತ್ಯುತ್ತಮ ಅವಕಾಶವೆಂದು ಕಂಡುಬರುತ್ತಿದೆ.

ಇಂದು ಕರ್ನಾಟಕದ ದುರದೃಷ್ಟ ಹೇಗಿದೆಯೆಂದರೆ ಇತಿಹಾಸದಲ್ಲೇ ಅತ್ಯಂತ ಭೀಕರವಾದ ಪ್ರವಾಹವೊಂದೆಡೆಯಾದರೆ, ಕರ್ನಾಟಕದ ಇತಿಹಾಸದಲ್ಲೇ ಕಂಡರಿಯದ ದುಷ್ಟ, ಅದಕ್ಷ ಮತ್ತು ಅನನುಭವಿ ಸರ್ಕಾರ ವಿಧಾನ ಸೌಧದಲ್ಲಿ ಕೂತಿದೆ. ಹದ್ದಿನ ತರ ಮಸಣದ ಮನೆಯಲ್ಲೂ ಮಿಕವನ್ನು ಹುಡುಕುತ್ತಿದೆ. ಹೀಗಾಗಿ ಪರಿಹಾರವೆಂಬುದು ಜನತೆಯ ಸಾಮಾಜಿಕ ಬದುಕಿಗೆ ಕಂಟಕವಾಗದಂತೆ ಬದುಕನ್ನು ಪೋಷಿಸುವಂತೆ ಮಾಡುವ ಹೊಣೆ ನಮ್ಮೆಲ್ಲರ ಮೇಲೂ ಇದೆ. ●

ಬ್ಯಾರಿ ಅಕಾಡೆಮಿ: ಚೆಡ್ಡಿಗಳ ಚೆಲ್ಲಾಟ

ಅಧಿಕಾರ ಸಿಕ್ಕರೆ ಸಾಕು ಎಲ್ಲಿ ಕಡೆಯೂ ತಮ್ಮ ದುರ್ಗಂಧ ಹರಡುವ ಚಾಳಿಯ ಬಿಜೆಪಿಗಳು ಈಗ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಗೂ ತಗುಲುಕೊಂಡಿವೆ. ಅಕ್ಟೋಬರ್ 10 ರಂದು ಮಂಗಳೂರಲ್ಲಿ ನಡೆಯಲಿರುವ ಬ್ಯಾರಿ ಸಾಹಿತ್ಯ ಅಕಾಡೆಮಿಯ ಕಚೇರಿ ಉದ್ಘಾಟನಾ ಕಾರ್ಯಕ್ರಮವನ್ನು ಚೆಡ್ಡಿಮಯಗೊಳಿಸಲಾಗಿದೆ.

ಸಮಾರಂಭದ ಅಧ್ಯಕ್ಷತೆಯ ಸ್ಥಾನದಲ್ಲಿ ಡಿ.ವಿ. ಸದಾನಂದಗೌಡ, ಮುಖ್ಯ ಅತಿಥಿಗಳಾಗಿ ಮಂಗಳೂರು-ಉಡುಪಿ ಜಿಲ್ಲೆಗಳ ಬಿಜೆಪಿ ಶಾಸಕರು, ಜಿಲ್ಲಾ ಬಿಜೆಪಿ ಅಧ್ಯಕ್ಷ ಮೋನಪ್ಪ ಭಂಡಾರಿ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಅನ್ವರ್ ಮಾಣಿಕಪಾಡಿ, ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಎನ್.ಬಿ. ಅಬೂಬಕರ್, ಮಾಜಿ ಸಚಿವ ನಾಗರಾಜ ಶೆಟ್ಟಿ-ಹೀಗೆ ಬರೀ ಬಿಜೆಪಿವಾಲಾಗಳೇ ತುಂಬಿದ್ದು, ಮಂಗಳೂರಿನ ಚೆಡ್ಡಿ ಶಾಸಕ, ಸಚಿವ ಕೃಷ್ಣ ಪಾಲೆಮಾರ್ ಉದ್ಘಾಟಿಸಲಿದ್ದು, ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸದ ನಳಿನ್‌ಕುಮಾರ್ ಕಟೀಲು ವಹಿಸುತ್ತಿದ್ದಾನೆ. ಅಂದರೆ ಬ್ಯಾರಿ ಸಾಹಿತ್ಯಕ್ಕೆ ಸಂಬಂಧಿಸಿದವರಿಗೆ ಇಲ್ಲಿ ನೋ ಛಾನ್ಸ್. ಶಾಸಕರು, ಸಂಸದರು ಇರಲಿ; ಏಕೆಂದರೆ ಅವರು ಜನಪ್ರತಿನಿಧಿಗಳು. ಆದರೆ ಚುನಾವಣೆಯಲ್ಲಿ ಸೋತು ಜನರಿಂದ ತಿರಸ್ಕರಿಸಲ್ಪಟ್ಟ ಮೋದಿ ಶಿಷ್ಯ ನಾಗರಾಜ ಶೆಟ್ಟಿಯನ್ನು ಕರೆಯುವ ಅಗತ್ಯವಾದರೂ ಏನಿತ್ತು? ಅವರು ಕರಾವಳಿ



ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಎಂಬ ಸಮಜಾಯಿಷಿ ನೀಡುತ್ತಿದ್ದಾರೆ. ಜಿಲ್ಲಾ ಬಿಜೆಪಿ ಅಧ್ಯಕ್ಷ ಮೋನಪ್ಪ ಭಂಡಾರ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಅನ್ವರ್ ಮಾಣಿಪಾಡಿ ಮತ್ತು ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಎನ್.ಬಿ. ಅಬೂಬಕರ್‌ಗಳನ್ನು ಕರೆಯುವ ಅಗತ್ಯ ಏನಿತ್ತು? ಬ್ಯಾರಿ ಸಾಹಿತ್ಯ ಬಲ್ಲ ಪ್ರಗತಿಪರರನ್ನು ದೂರವಿಟ್ಟು, ಬ್ಯಾರಿ ಅಕಾಡೆಮಿಗೆ ಚೆಡ್ಡಿ ತೊಡಿಸುವ ಹುನ್ನಾರವಿದಾಗಿದೆ.

ಹತ್ತು-ಹನ್ನೊಂದು ವರ್ಷಗಳ ಹೋರಾಟದ ಫಲವಾಗಿ ಮೂರು ವರ್ಷಗಳ ಹಿಂದೆ ಬ್ಯಾರಿ ಸಾಹಿತ್ಯ ಅಕಾಡೆಮಿ ಸ್ಥಾಪಿಸಲಾಗಿತ್ತು. ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವ ಎಚ್.ಎಸ್. ಮಹಾದೇವ ಪ್ರಸಾದರ ಸಲಹೆಯಂತೆ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಅಕಾಡೆಮಿ ಸ್ಥಾಪನೆಯನ್ನು ಘೋಷಿಸಿದರು. ಮುಂದೆ ಅಧ್ಯಕ್ಷರು, ಸದಸ್ಯರನ್ನು ನೇಮಿಸುವ ಮೊದಲೇ ಕುಮಾರಸ್ವಾಮಿ ಸರ್ಕಾರ ಪತನವಾಯ್ತು.

ಆದರೆ ಬಿಜೆಪಿ ಆಡಳಿತ ಬಂದಾಗಿನಿಂದ ಬ್ಯಾರಿ ಅಕಾಡೆಮಿಯನ್ನು ಕೇಸರೀಕರಣಗೊಳಿಸುವ ಕೆಲಸ ನಡೆಯುತ್ತಲೇ ಇದೆ. ಮೊದಲಿಗೆ ಪ್ರಗತಿಪರ ಸಾಹಿತಿ ಫಕೀರ್ ಮಹಮದ್ ಕಟ್ಪಾಡಿಯವರನ್ನು ಅಧ್ಯಕ್ಷ ಸ್ಥಾನಕ್ಕೆ ನೇಮಿಸಿ, ನಂತರ ಕರಾವಳಿಯ ಬಿಜೆಪಿಗಳ ಒತ್ತಡಕ್ಕೆ ಮಣಿದು ಅದನ್ನು ಹಿಂದಕ್ಕೆ ಪಡೆಯಲಾಯ್ತು. ಬಿಜೆಪಿಗಳ ಓಲೈಕೆ ಮಾಡುವ ಎಂ.ಬಿ. ಅಬ್ದುಲ್ ರೆಹಮಾನ್ ಎನ್ನುವವರನ್ನು ಅಧ್ಯಕ್ಷನನ್ನಾಗಿ ಮಾಡಿ, ಬಿಜೆಪಿ ಕಾರ್ಯಕರ್ತರನ್ನು ಸದಸ್ಯರನ್ನಾಗಿ ಮಾಡಲಾಯ್ತು. ತನಗೆ ಸಂಬಂಧಿಸದ ಇಲಾಖೆಯಲ್ಲಿ ವಕ್ಫ್ ಸಚಿವ ಮುಮ್ತಾಜ್ ಅಲಿಖಾನ್ ಕೈಯಾಡಿಸಿ ಬ್ಯಾರಿ ಅಕಾಡೆಮಿಗೆ ಕೇಸರಿ ಬಣ್ಣ ಬಳಿದರು.


ಈಗ ಅಕಾಡೆಮಿ ಕಚೇರಿ ಉದ್ಘಾಟನಾ ಕಾರ್ಯಕ್ರಮವನ್ನು ಚೆಡ್ಡಿ ಸಮಾವೇಶವನ್ನಾಗಿ ಪರಿವರ್ತಿಸುತ್ತಿದ್ದಾರೆ. ಸಾಹಿತ್ಯ ಎನ್ನುವುದು ಜೀವಸೆಲೆ. ಅಂತಹ ಕಡೆ ಜೀವವಿರೋಧಿ ಮತಾಂಧರು ಆಟ ಶುರು ಮಾಡಿದ್ದಾರೆ. ಬ್ಯಾರಿ ಅಕಾಡೆಮಿ ಗಬ್ಬೇಳುವ ಮುನ್ನ ಬ್ಯಾರಿ ಸಾಹಿತಿಗಳು, ಬ್ಯಾರಿ ಪ್ರಗತಿಪರರು ಎಚ್ಚರಗೊಳ್ಳಬೇಕಾಗಿದೆ. ●

ಸಾವಯವ ಕೃಷಿಯಲ್ಲೂ ಕೇಸರೀಕರಣ

ದಶಕಕ್ಕೂ ಹಿಂದೆ ಒಮ್ಮೆ ದಕ್ಷಿಣ ಕನ್ನಡ ಜಿಲ್ಲೆಯ ಬಳ್ಳ ಸಮೀಪದ ಹಳ್ಳಿಯೊಂದಕ್ಕೆ ಪೂರ್ಣಚಂದ್ರ ತೇಜಸ್ವಿ ಬಂದಿದ್ದರು. ಅದು ನೈಸರ್ಗಿಕ ಮತ್ತು ಸಾವಯವ ಕೃಷಿ ಬಗ್ಗೆ ಆಯೋಜಿಸಲಾಗಿದ್ದ ಶಿಬಿರ. ಅದು ಯಾವ ಆತಿರೇಕಕ್ಕೆ ಹೋಯಿತೆಂದರೆ ಕುಲಕರ್ಣಿಯೋ ಮತ್ಯಾವುದೋ ಹೆಸರಿನ ಸುಪಾಸ್ನೂಲ ವ್ಯಕ್ತಿ ಒಬ್ಬಾತ ಸಾವಯವ ಕೃಷಿಪದ್ಧತಿ ವೇದಕಾಲದಿಂದಲೂ ನಮ್ಮಲ್ಲಿ ಬಳಕೆಯಲ್ಲಿದೆ ಎನ್ನುತ್ತಾ ಅಂದಿನ ಜನರಿಗೆ **chemical fertilizers** ಗೊತ್ತಿತ್ತು ಆದರೂ ಉಪಯೋಗಿಸುತ್ತಿರಲಿಲ್ಲ ಎಂಬಂತೆ ಗಪ್ಪ ಹೊಡೆಯಲಾರಂಭಿಸಿದರು. ಆತ ಹೇಳಿದ ಇನ್ನಷ್ಟು ಚೋದ್ಯದ ವಿಷಯಗಳೆಂದರೆ ಅಗ್ನಿಹೋತ್ರ ಮಾಡುವುದರಿಂದ ನೆಲದ ಫಲವತ್ತತೆ ವರ್ಧಿಸುತ್ತದೆ ಮತ್ತು ಕೃಷಿಗೆ ಬೀಳುವ ಹುಳಹುಪ್ಪಟೆಗಳಿಂದ ಮುಕ್ತಿ ದೊರಕುತ್ತದೆ. ಎಲ್ಲಕ್ಕೂ ಮಿಗಿಲಾದ ಆತನ ಆವಿಷ್ಕಾರವೆಂದರೆ ಅಗ್ನಿಹೋತ್ರದ ಹೊಗೆ ವಾತಾವರಣದ ಮೇಲ್ಭಾಗವನ್ನು ತಲುಪಿ ಓಜೋನ್ ಪದರದಲ್ಲಿ ಆಗುವ ರಂಧ್ರಗಳನ್ನು ಮುಚ್ಚುತ್ತದೆ.

ಬೆಂಗಳೂರಿನ ಪ್ರಗತಿಪರ ಕೃಷಿಕ ನಾರಾಯಣ ರೆಡ್ಡಿ ಈತನ ಈ ಅವೈಚಾರಿಕ ತೆಕ್ಕೆಯಲ್ಲಿ ಸಿಕ್ಕಿ ನುಲಿದು ಹೈರಾಣಾಗಿದ್ದು ಆ ದಿನ ಎದ್ದು ಕಾಣಿಸುತ್ತಿತ್ತು. ವೈಟ್ ಫೀಲ್ಡ್ ಸಂಪರ್ಕದ ಕೆಲವು ಯುರೋಪಿಯನ್ನರಿಂದ ಸಾವಯವ ಕೃಷಿಯ ಮೊದಲ ಪಾಠ ಹೇಳಿಸಿಕೊಂಡಿದ್ದ ನಾರಾಯಣ ರೆಡ್ಡಿಯವರ ಚಿಂತನೆ ಪಾಪ ಶೋಚನೀಯ ದಾರಿಯನ್ನು ಹಿಡಿದಿತ್ತು. ಆ ದಿನ ಅಧ್ಯಕ್ಷೀಯ ಭಾಷಣ ಮಾಡಲು ಎದ್ದು ನಿಂತ ತೇಜಸ್ವಿ ಈ ತಮಾಷೆಯಿಂದ ಕಚಕುಳಿ ಇಟ್ಟಂತೆ ಮಾತು ಹೊರಡದೆ ಒಂದಷ್ಟು ಕಾಲ ಗಹಗಹಿಸಿ ನಕ್ಕಿದ್ದರು. ಶಿಬಿರದಲ್ಲಿ ಬೋಧಿಸಲ್ಪಟ್ಟ ವಿಚಾರಗಳನ್ನು ನಮ್ಮ ವಿಶ್ವವಿದ್ಯಾನಿಲಯಗಳು ವೈಜ್ಞಾನಿಕ ವಿಶ್ಲೇಷಣೆಗೆ ಒಡ್ಡಬೇಕು, ಅವುಗಳು ಸತ್ಯವೆಂದು ಕಂಡು ಬಾರದ ಹೊರತು ಜನ ಸ್ವೀಕರಿಸಬಾರದು ಎಂದಷ್ಟೇ ಹೇಳಿ ಸಂಘಟಕರತ್ತ ನೋವು, ಸಿಟ್ಟು, ಕನಿಕರ ಬೆರೆತ ನೋಟ ಬೀರಿ ಕುಳಿತುಬಿಟ್ಟಿದ್ದರು.

ಈ ಮಾತು ಯಾಕೆಂದರೆ ಬೆಳಗಿನ ಹೊತ್ತು ಆಕಾಶವಾಣಿಯಲ್ಲಿ ಕೇಳಿಬರುತ್ತಿದ್ದ 'ರೈತರಿಗೆ ಸಲಹೆ' ಕಾರ್ಯಕ್ರಮವನ್ನು ಇತ್ತೀಚೆಗೆ ನಿಲ್ಲಿಸಲಾಗಿದೆ. ಅದರ ಬದಲಾಗಿ ಕರ್ನಾಟಕ ರಾಜ್ಯ ಸಾವಯವ ಕೃಷಿ ಮಿಶನ್ ಯೋಜನೆಯಡಿ ಕೃಷಿ ಇಲಾಖೆಯು ನೀಡುವ ಸಾವಯವ ಸಲಹೆಗಳನ್ನು ನೀವು ಕೇಳಬಹುದು. ಜೀವಾಮೃತವನ್ನು ಹಾಕಿ, ಪಂಚಗವ್ಯವನ್ನು ಹಾಕಿ, ದನದ ತುಪ್ಪವನ್ನು ಹಾಕಿ, ಮಜ್ಜಿಗೆಯನ್ನು ಹಾಕಿ, ಎರೆಗೊಬ್ಬರವನ್ನು ಹಾಕಿ, ಯೂರಿಯಾ ಮರಳನ್ನು ಹಾಕಿ, ಹಟ್ಟಿಗೊಬ್ಬರವನ್ನು ಹಾಕಿ, ಹಸಿರೆಲೆ ಗೊಬ್ಬರವನ್ನು ಹಾಕಿ, ಎಕ್ಕದ ಸೊಪ್ಪನ್ನು ಹಾಕಿ, ಕೆರೆ ಗೋಡುಮಣ್ಣನ್ನು ಹಾಕಿ, ಹೀಗೆ ಒಂದನ್ನೊಂದು ವಿರೋಧಿಸುವ ವಿವಿಧ ಕೃಷಿವಿಧಾನಗಳ ಬಳಕೆಗೆ ಏಕಕಾಲದಲ್ಲಿ ಓತಪ್ರೋತ ಸಲಹೆಗಳನ್ನು ನೀಡಲಾಗುತ್ತಿದೆ. ರೈತರಿಗೆ ಕಾಲಕಾಲಕ್ಕೆ ರಸಗೊಬ್ಬರ, ಕೀಟನಾಶಕಗಳನ್ನು ಪೂರೈಸಲಾಗದೆ ತೀವ್ರವಾದ ಪ್ರತಿರೋಧವನ್ನು ಎದುರಿಸುತ್ತಿರುವ ಕರ್ನಾಟಕದ ಘನ ಸರಕಾರ ಈಗ ಉಚಿತ ಪುಳಿಚಾರು ಬೋಧನೆಯಲ್ಲಿ ತೊಡಗಿದೆ. ಸರಕಾರದ ಎದ್ದು ಕಾಣಿಸುವ ಅಪಾಯಕಾರಿ ಪ್ರವೃತ್ತಿಯೆಂದರೆ ಇಲ್ಲಿಯತನಕ ನಮ್ಮ ರೈತರಿಗೆ ಸುಲಭದಲ್ಲಿ ಮತ್ತು ಸರಳ ಸ್ವರೂಪದಲ್ಲಿ ದೊರಕುತ್ತಿದ್ದ ಜ್ಞಾನದ ಶಾಖೆಯೊಂದು ಎಂದೂ ಸಿಗದಂತೆ ವಂಚಿಸಿರುವುದು. ಜೊತೆಗೆ ಸಾವಯವ ಕೃಷಿ ಮಿಶನ್ ಹಲವು ಸುಳ್ಳುಗಳನ್ನು ವೈಜ್ಞಾನಿಕ ಸತ್ಯವೆಂಬಂತೆ ಬಿಂಬಿಸತೊಡಗಿದೆ. ಪ್ರಾಮಾಣಿಕತೆ ಮತ್ತು ಪ್ರಮಾಣವಚನಕ್ಕೆ **etimological** ಸಂಬಂಧವೂ ಇಲ್ಲವೇನೋ! ಈ ರೀತಿ ಮುಂದುವರಿದರೆ ನಮ್ಮ ಗೊಡ್ಡು ಸಂಪ್ರದಾಯವಾದಿ ಮತ್ತು ಢೋಂಗಿ ಹಿಂದೂವಾದಿ ಸರಕಾರ ನಮ್ಮ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಬಾಗಿಲು ಜಡಿದರೂ ಅಚ್ಚರಿಯಿಲ್ಲ; ಕೃಷಿ ಇಲಾಖೆಯು ಫಲಜ್ಯೋತಿಷ್ಯವನ್ನೂ, ವಾಸ್ತು ಸಲಹೆಗಳನ್ನೂ ನೀಡತೊಡಗದಿದ್ದರೆ ಮಾತ್ರ ಆಶ್ಚರ್ಯ. ನಾವು ಕಾಲದ ಹಿಮ್ಮುಖ ಚಲನೆಯಲ್ಲಿದ್ದೇವೆ.



ಜಪಾನಿನ ಕೃಷಿ ವಿಜ್ಞಾನಿ ಫುಕುವೋಕಾ ನೈಸರ್ಗಿಕ ಕೃಷಿ ಬಗ್ಗೆ ಅಪಾರವಾದ ಸಂಶೋಧನೆ ಮತ್ತು ಗಾಢವಾದ ಸಾಧನೆ ಮಾಡಿದ ಸಂತ ಎಂದೇ ಗುರುತಿಸಲ್ಪಡುತ್ತಾರೆ. ನೈಸರ್ಗಿಕ ಕೃಷಿ ನಿಜಕ್ಕೂ ನಿರಂತರ ಪ್ರಯೋಗಶೀಲತೆಯ ದಾರಿ. ಪ್ರಯೋಗಗಳಿಗೆ ಮನಸ್ಸು ತೆರೆದುಕೊಳ್ಳಲು ಸಾಧ್ಯವಿಲ್ಲದಲ್ಲಿ ಇದರ ಗೊಡವೆ ಬೇಡ ಎನ್ನುವುದು ಅವರ ಖಚಿತ ಅಭಿಪ್ರಾಯವಾಗಿತ್ತು. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ವಿಷದಿಂದ ಮಣ್ಣಿನ ಫಲವತ್ತತೆ, ಜೀವಂತಿಕೆ ನಾಶವಾಗುತ್ತದೆ ಎನ್ನುವುದು ಮಾತ್ರ ಫುಕುವೋಕಾ ಕಾಳಜಿಯಾಗಿರಲಿಲ್ಲ. ಅವುಗಳ ಉತ್ಪಾದಕರಾದ ಬಹುರಾಷ್ಟ್ರೀಯ ಕಂಪನಿಗಳ ಮಾರಣಾಂತಿಕ ಹಿಡಿತದಿಂದ ಕೃಷಿಕರನ್ನು ಹೊರತರಬೇಕೆಂಬುದು ಅವರ ಪ್ರಮುಖ ಚಿಂತನೆ, ಕನಸು ಮತ್ತು ಶ್ರಮವಾಗಿತ್ತು. ಫುಕುವೋಕಾ ಮಾದರಿಯನ್ನು ಸ್ಥಳೀಯ ಪರಂಪರಾಗತ ಕೃಷಿ ವಿಧಾನದೊಂದಿಗೆ ಸಮ್ಮಿಳನಗೊಳಿಸುವ ಪ್ರಯೋಗಗಳನ್ನು ಮಹಾರಾಷ್ಟ್ರದ ಕೃಷಿ ವಿಜ್ಞಾನಿ ಸುಭಾಷ್ ಪಾಳೇಕರ್ ನಡೆಸಿರುವುದು ಎಲ್ಲರಿಗೂ ತಿಳಿದಿದೆ.

● ಕೆ.ಆರ್.ವಿದ್ಯಾಧರ, ಮಡಿಕೇರಿ

ಪಾಳೇಕರ್ ಕೃಷಿ ಪದ್ಧತಿ ಕರ್ನಾಟಕದಲ್ಲೂ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದೆ. ಸ್ವಾಮಿಆನಂದ್ ಈ ಬಗ್ಗೆ ಪುಸ್ತಕ ಪ್ರಕಟಿಸಿದ ಮೇಲಂತೂ ಈ ಪದ್ಧತಿ ವ್ಯಾಪಕ ಪ್ರಚಾರವನ್ನು ಪಡೆದುಕೊಂಡಿತು. ನಾನು ಸಹ ಕಳೆದ 3-4 ವರ್ಷಗಳಿಂದ ಇದೇ ರೀತಿಯ ಕೃಷಿಯಲ್ಲಿ ತೊಡಗಿಕೊಂಡಿದ್ದೇನೆ. ಪಾಳೇಕರ್ ಕೃಷಿ ಪದ್ಧತಿ ಆರಂಭಿಸಿದ ಮೇಲೆ ಬಂಪರ್ ಬೆಳೆ ತೆಗೆದ ಬಗ್ಗೆ ಹಲವು ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ನಾನು ಗಮನಿಸಿದ್ದೇನೆ. ಅಂತಹ ಪವಾಡ ನನ್ನ ಅಡಿಕೆತೋಟದ ಜಮೀನಿನಲ್ಲಿ ನಡೆದಿಲ್ಲ. ಆದರೆ ಹೆಚ್ಚಿನ ಉತ್ಪತ್ತಿಯನ್ನು ತೆಗೆಯುವ ಆಸೆಯಿಂದ ಮಣ್ಣನ್ನು ರಾಸಾಯನಿಕ ವಿಷವಸ್ತುಗಳಿಂದ ಕಲುಷಿತಗೊಳಿಸಲು ಮನಸ್ಸಿಲ್ಲದ ಕಾರಣ ಈ ವಿಧಾನ ನನಗೆ ತೃಪ್ತಿ ಕೊಟ್ಟಿದೆ. ಅದಕ್ಕೂ ಹೆಚ್ಚಾಗಿ 'ಯುವಜನತೆಯ ಕೈಗೆ ತ್ರಿಶೂಲ ಕೊಡುವುದರ ಬದಲು ಒಂದು ಮುಷ್ಟಿ ಬಿತ್ತನೆಬೀಜವನ್ನು ಕೊಡಿ' ಎಂಬ ಅವರ ವಿವೇಕ ನನ್ನನ್ನು ಹೆಚ್ಚು ಸೆಳೆದಿದೆ.

ಪಾಳೇಕರ್ ತಮ್ಮ ಕೃಷಿ ವಿಧಾನಕ್ಕೆ ಭಾರತೀಯ ತಳಿಯ ದನಗಳ ಸಗಣಿ ಮತ್ತು ಗಂಜಲವನ್ನು ಬಳಸಲು ಹೇಳುತ್ತಾರೆ. ಅದು ಆಕಳಿನದ್ದೇ ಆಗಬೇಕಿಲ್ಲ, ಭಾರತೀಯ ತಳಿಯ ಎತ್ತು, ಎಮ್ಮೆ ಮತ್ತು ಕೋಣದ ಸಗಣಿ ಮತ್ತು ಗಂಜಲವನ್ನು ಸಹ ಬಳಸಬಹುದು ಎಂಬುದಾಗಿ ಹೇಳುತ್ತಾರೆ. ಆದರೆ ನಮ್ಮ ಸಾವಯವ ಕೃಷಿ ಮಿಶನ್ ಸಲಹೆ ಪ್ರಕಾರ ಇನ್ನೂರು ಲೀಟರ್ ಜೀವಾಮೃತ ಮಾಡಲು ಐದು ಕಿಲೋಗ್ರಾಮ್ ಆಕಳಿನ ಸಗಣಿ ಮತ್ತು ಅಷ್ಟೇ ಪ್ರಮಾಣದ ಗೋಮೂತ್ರ ಬೇಕೇಬೇಕು. ಉಳಿದ ಐದೈದು ಕೆ.ಜಿ. ಸಗಣಿ ಮತ್ತು ಗಂಜಲ ಭಾರತೀಯ ತಳಿಯ ಹೋರಿಯದ್ದಾದರೂ ಆಗುತ್ತದೆ. ಎಮ್ಮೆಕೋಣಗಳ ಪ್ರಸ್ತಾಪವೇ ಇಲ್ಲ. ಅವುಗಳು ಇವರಿಗೆ ಅಸ್ಪೃಶ್ಯ.

ಸಾವಯವ ಕೃಷಿ ಮಿಶನ್‌ನಲ್ಲಿ ಇನ್ನೊಬ್ಬ ವಿದ್ವಾಂಸ ಮಾತನಾಡಿ ಭಾರತೀಯ ಗೋತಳಿಯ ಇಪ್ಪತ್ತೆರಡು ಲಕ್ಷಣಗಳನ್ನು ಪಟ್ಟಿ ಮಾಡುತ್ತಾನೆ. ಗಂಗೆದೊಗಲು ಇರಬೇಕು, ಚರ್ಮವನ್ನು ಅಲ್ಲಲ್ಲಿ ಅಲುಗಿಸುವ ಸಾಮರ್ಥ್ಯ ಇರಬೇಕು, ಎತ್ತರದ ಭುಜ ಇರಬೇಕು, ಹಿಂಭಾಗ ವಿಶಾಲವಾಗಿರಬೇಕು, ಬಾಲ ನೀಳವಾಗಿದ್ದು ಅದರ ಕೂದಲು ದಟ್ಟವಾಗಿರಬೇಕು, ಹೀಗೆ ಆತನ ಲಿಸ್ಟ್ ಸಾಗುತ್ತದೆ. ಇಂತಹ ಗೋವಿನಿಂದ ಮಾತ್ರ ಕೃಷಿ ಸಾಧ್ಯ ಎಂಬುದು ಆತನ ವಾದ. ಈತ ಹೇಳುವ ಲಕ್ಷಣಗಳಲ್ಲಿ ಒಂದೆರಡನ್ನು ಹೊರತುಪಡಿಸಿ ಉಳಿದೆಲ್ಲವೂ ಎಮ್ಮೆಕೋಣಗಳಲ್ಲಿವೆ. ಈತ ದನದ ಜಾತಿಗೆ ಸೇರಿಯೇ ಇಲ್ಲ ಎನ್ನುವ ಜರ್ಸಿ, ಹೆಚ್.ಪಿ. ತಳಿಗಳನ್ನು ಮಾತ್ರ ಬಳಸಿ ನಮ್ಮವರಾದ ಪ್ರಫುಲ್ಲಚಂದ್ರ ತರಹದ ಪ್ರಯೋಗಶೀಲ ಕೃಷಿಕರು ಯಶಸ್ಸನ್ನು ಗಳಿಸಿದ್ದಾರೆ. ಎಂದೂ ಭೂಮಿಯಲ್ಲಿ ಉಳುಮೆ ಮಾಡದ ಜನ ಆಕಳಿನ ಹೆಸರನ್ನು ಸಾಂಸ್ಕೃತಿಕ ಭಯೋತ್ಪಾದನೆಗೆ ಬಳಸಿಕೊಳ್ಳುವ ವಿಧಾನದ ಭಾಗ ಇದಾಗಿದೆ.

ಪಾಳೇಕರ್ ಪ್ರಕಾರ ರಾಸಾಯನಿಕ ಬಳಕೆಗಿಂತಲೂ ಹೆಚ್ಚು ಅಪಾಯಕಾರಿಯಾದುದು ಇಂದು ಮಾರುಕಟ್ಟೆಯಲ್ಲಿ ಕ್ಷಿಪ್ರಗತಿಯಲ್ಲಿ ಬಿಕರಿಗೊಳ್ಳುತ್ತಿರುವ ಸಾವಯವ ಗೊಬ್ಬರ ಎನ್ನುವ ಬಗೆಬಗೆಯ ಪ್ರಾಡಕ್ಟ್‌ಗಳು. ಇವುಗಳು ಅವೈಜ್ಞಾನಿಕ ಮಾತ್ರವಲ್ಲ ಕೃಷಿಕನ ಆರ್ಥಿಕ ಹೊರೆಯನ್ನು ಹೆಚ್ಚಿಸುವಂತಹವು. ಜತೆಗೆ ಕೃಷಿ ಹೊಂಡ, ಎರೆಗೊಬ್ಬರ ಮೊದಲಾದವುಗಳಿಂದ ಮಣ್ಣಿನ ನೈಸರ್ಗಿಕ ಸ್ವರೂಪಕ್ಕೆ, ಸುಸ್ಥಿರತೆಗೆ ಧಕ್ಕೆ ಮಾತ್ರ. ಅಗ್ನಿಹೋತ್ರ, ಪಂಚಗವ್ಯ ಇತ್ಯಾದಿಗಳು ಅತಾರ್ಕಿಕ ಮತ್ತು ಹಾಸ್ಯಾಸ್ಪದ.

ಪಾಳೇಕರ್ ತಮ್ಮ ಕೃಷಿ ವಿಧಾನದತ್ತ ನನ್ನ ಸೆಳೆತ ಮತ್ತು ಹಳ್ಳಿಕಾರ್, ಅಮೃತಮಹಲ್ ತಳಿಗಳ ಮೇಲೆ ನನಗಿದ್ದ ಪ್ರೀತಿ ನನ್ನನ್ನು ರಾಮಚಂದ್ರಾಪುರ ಮಠದಲ್ಲಿ ಎರಡು ವರ್ಷಗಳ ಹಿಂದೆ ನಡೆದ ವಿಶ್ವ ಗೋಸಮ್ಮೇಳನದಲ್ಲಿ ವಿವಿಧ ಗೋತಳಿಗಳನ್ನು ನೋಡಲು ಪ್ರೇರೇಪಿಸಿತ್ತು. ಅಚ್ಚುಕಟ್ಟಾಗಿ ಆಯೋಜಿಸಿದ್ದ ಕಾರ್ಯಕ್ರಮವದು. ಅದ್ಭುತ ಆತಿಥ್ಯ. ಸಭಾಂಗಣ ತಲುಪುವ ಮೊದಲೇ ... ನೀರು, ಕುಡಿಯಲು ಜ್ಯೂಸ್, ಪಾನಕ ಅಥವಾ ... ಜೊತೆಯಲ್ಲೇ, "ಹರೇ ರಾಮ್" ಎಂದು ಮಹಿಳೆಯ... ಮತ್ತು ಪಂಚೆ ತೊಟ್ಟ, ಕುಂಕುಮ ಧರಿಸಿದ ಮಹ... ರಿಂದ ಆತ್ಮೀಯ ಸ್ವಾಗತ. ಮಧ್ಯಾಹ್ನದ ಹೊತ್ತು ... ಸಪ್ಪೆ ಊಟವಾದರೂ ರುಚಿಕರವಾಗಿತ್ತು. ಕೊನೆಗೆ ಬ... ಭೇಟಿಯಾದ ಕೆ.ಆರ್.ಪೇಟೆ ಕಡೆಯ ಅಧ್ಯಾಪಕರೂ... "ಕೇವಲ ಬ್ರಾಹ್ಮಣರು ಮಾತ್ರ ಸ್ವಯಂಸೇವಕ... ದುಡಿದದ್ದು ಸಾರ್, ಅವರ ಹಾಗೆ ಮಾಡಲು ನ... ಸಾಧ್ಯವಿಲ್ಲ" ಎಂದು ಲೊಚಗುಟ್ಟಿದ್ದರು; ಅ... ಮುಂಗೈಯಲ್ಲಿ ದಪ್ಪನೆಯ ರಾಖಿ ಮುಖಕ್ಕೆ ರಾಚುವ...

ಅಲ್ಲಿ ಬೇರೆಬೇರೆ ಕಡೆ ಗೋತಳಿಗಳ ಪ್ರದರ್ಶನ... ದೇಶದ ವಿವಿಧ ಪ್ರಾಂತಗಳ ದನಗಳನ್ನು ನೋಡಬಹುದಿ... ಸಮ್ಮೇಳನಕ್ಕೆಂದು ಚಿಕ್ಕಚಿಕ್ಕ ಹಟ್ಟಿಗಳನ್ನು ನಿ... ಅವುಗಳನ್ನು ಪ್ರತ್ಯೇಕವಾಗಿ ಕಟ್ಟಿದ್ದರು. ಗೋತ... ಪರಿಶುದ್ಧತೆಯನ್ನು ಕಾಪಾಡುವುದು ತಮ್ಮ ಆದ್ಯತೆಯೆ... ಆಗಿಂದಾಗ್ಗೆ ಹೇಳುತ್ತಿದ್ದರೂ ಎರಡು ಕಡೆ ವಿಶಾಲ... ಪ್ರದೇಶಗಳಲ್ಲಿ ಸುತ್ತಲೂ ತಂತಿಬೇಲಿ ನಿರ್ಮಿಸಿ, ... ಪ್ರಬೇಧದ ಹಸುಗಳನ್ನು ಮತ್ತು ಹೋರಿಗಳನ್ನು ಒ... ಬಿಟ್ಟಿದ್ದರು. ಅವುಗಳ ತಳಿ ಸಮ್ಮಿಶ್ರವಾಗದಂತೆ ಅ... ದೇವರೇ ಕಾಪಾಡಬೇಕಿತ್ತು.

ವಿಶ್ವ ಗೋಸಮ್ಮೇಳನದೊಳಗೆ ಎಮ್ಮೆಕೋಣಗ... ಪ್ರವೇಶವಿರಲಿಲ್ಲ. ಹೊರ ಆವರಣದಲ್ಲಿ ದಷ್ಟಪು... ಕೋಣಗಳನ್ನು ಗಾಣಕ್ಕೆ ಕಟ್ಟಿ ಕಬ್ಬಿನ ಜ್ಯೂಸ್ ಮಾರುತ್ತಿ... ಈ ನೆನಪಲ್ಲಿ ಊರಿಗೆ ಹಿಂದಿರುಗಿದ ತಕ್ಷಣ ಸು... ಜಾತಿಯ ಎಮ್ಮೆಕರುವೊಂದನ್ನು ಖರೀದಿಸಿದೆ. ಅ... ನನ್ನ ಚಿಕ್ಕ ಮಗಳು ವೈಷ್ಣವಿ ಎಂಬ ಸುಂದರ ಹೆಸರಿಟ್ಟ...

ಸಮ್ಮೇಳನದ ಯಾವುದೇ ಒಂದು ಭಾ... ಸಂಘಪರಿವಾರದ ಭಾಷಣವಲ್ಲ ಎಂಬ ಚಿಕ್ಕದೊಂ... ಸೂಚನೆಯನ್ನೂ ಕೊಡಲಿಲ್ಲ. ಅಷ್ಟು ರಣಭಯಂಕರವಾಗಿ... ಏಡ್ಸ್, ಕ್ಯಾನ್ಸರ್, ಹೆಪಟೈಟಿಸ್-ಬಿ, ಹೀಗೆ ಈ ಭೂಮಿ... ಮೇಲೆ ಅಸ್ತಿತ್ವದಲ್ಲಿರುವ ಮಾನವಜೀವಿಗೆ ತಗಲಿಕೊ... ಪ್ರತಿಯೊಂದು ರೋಗಕ್ಕೂ ರಾಮಬಾಣವಾ... ಗೋಮೂತ್ರದಿಂದ ಆವಿಷ್ಕರಿಸಿದ ಔಷಧಿಗಳ ಬಗ್ಗೆ ... ಸಂಶೋಧಕರ ಪೇಪರುಗಳಿದ್ದವು. ಈ ದೇಶ... ಸಾಬರುಗಳೂ ಗೋವುಗಳೂ ಒಂದೇ ಕಡೆ ಇರ... ಸಾಧ್ಯವಿಲ್ಲ ಎಂಬ ಸುಸಂಬದ್ಧ ತಾರ್ಕಿಕ ಅಂತ್ಯಕ್ಕೆ... ಸಮ್ಮೇಳನ ಬಂದಿರುವುದು ಸುಸ್ಪಷ್ಟವಿತ್ತು.

ರಾಮಚಂದ್ರಾಪುರದ ಮಠದ ಪರಿಸರದಲ್ಲಿ ಉದ್ದ... ತಿರುಗಾಡಿ ಹಿಂದಿರುಗುವಾಗ ಮಹಿಳೆಯೊಬ್ಬರಿಂದ ಅ... ಆತ್ಮೀಯವಾದ ಉಲಿತ, "ಹರೇ ರಾಮ್."

ನಾನು ಯಾವುದೇ ಕುಹಕವಿಲ್ಲದೆ ಹೇಳಿ... "ನಮಸ್ಕಾರ."

ಆಕೆ ಮತ್ತೆ ಹೇಳಿದರು, "ಹರೇ ರಾಮ್."

ನಾನು ಮತ್ತೆ ಪ್ರತ್ಯುತ್ತರಿಸಿದೆ, "ನಮಸ್ಕಾರ."

ಆಕೆ ಕೆದಕಿ ಹೇಳಿದರು, "ಹರೇ ರಾಮ್ ಹೇಳಬೇ... ...ವು."

ನಾನು ಹೇಳಿದೆ, "ಹೇಳುವುದಿಲ್ಲ. ನಿಮ್ಮ... ಶುಭಹಾರೈಕೆಯಲ್ಲ, ಬೆದರಿಕೆ".

ಆಕೆ, "ಬೆದರಿಕೆಯಲ್ಲ ಮಾರಾಯ್ರೆ, ನೀವು ಹ... ರಾಮ್ ಹೇಳಬೇಕು."

ನಾನು, "ಇಲ್ಲ ಹೇಳುವುದಿಲ್ಲ, ನಮಸ್ಕಾರ."


ಅಷ್ಟು ಹೊತ್ತಿಗೆ ಅಲ್ಲಿ ಒಂದಷ್ಟು ಜನ ಸೇರಿದ್ದ... ಮತ್ತೊಂದಷ್ಟು "ಹರೇ ರಾಮ್"ಗಳು.

ಅಲ್ಲಿ ಮತ್ತಷ್ಟು ಸಮಯ ಕಳೆಯುವು... ಹಿತಕರವಾಗಿರಲಿಲ್ಲ. ಅವರಿಗೆ ಸೋಲುವುದಾಗಲೀ ಅಥ... ಅವರೊಂದಿಗೆ ವೃಥಾ ಚರ್ಚೆಗೆ ಇಳಿಯುವುದಾಗ... ಸೂಕ್ತವಾಗಿ ತೋರಲಿಲ್ಲ.

ಅಲ್ಲಿನ ಪುಂಡರ ತಂಡ ಹೊಸದೇನಲ್ಲ ಬಿಡಿ!

ಮಿಠಾಯಿಗೆ ಮುತ್ತಿಗೆ

● ಸುನಂದಾ ಪ್ರಕಾಶ ಕಡಮೆ



ತಟ್ಟೆ ಗೋಲದ ನೀರ ನಡುವೆ
ಮಿಠಾಯಿ ಡಬ್ಬ
ಸುತ್ತ ಇರುವೆಗಳ ಹಬ್ಬ

ನೀರು ಬತ್ತಲಿ ಎಂದು
ಇರುವೆ ಕಾಯುವುದಿಲ್ಲ
ಕಲಿವುದು ಈಜು ನೀರಿಗೆ ಬಿದ್ದೇ

ಮುಳುಗುವವನ ಕಲ್ಯಾಣಕ್ಕೆ
ಹುಲುಕಡ್ಡಿಯೇ ಆಗಬೇಕಿಲ್ಲ
ತೇಲುವ ಇನ್ನೊಬ್ಬನ ಕಳೆಬರವಾದರೂ

ಮೀಸೆ ನುಸುಳಿದರೆ ಸಾಕು
ಅದರ ಹಿಂದೆ ಇಡೀ ದೇಹ
ಅಂಗುಲಂಗುಲ ಸ್ವಾಹ

ಡಬ್ಬದ ಮುಚ್ಚಳ ಬಿಗಿ ಮಾಡಿದವರು
ಮೋಸ ಹೋದರು

ಕ್ರಮೇಣ ಆರುತ್ತಿದೆ
ತಟ್ಟೆ ಗೋಲದ ನಿಂತ ನೀರು

ಮುಗಿದಿದೆ ಮಿಠಾಯಿ
ಒಳಗೆ ಅಂಧಕಾರ

ಹುಟ್ಟಿ ಬರಬೇಕು ಅಕ್ಕ ಅಣ್ಣರೇ
ಪುನಃ ಡಬ್ಬ ತುಂಬಿಸಲು

ತಟ್ಟೆಗೋಲದ ಒಡ್ಡನೊಡೆದು
ನದಿ ಕಾಲುವೆ ತೋಡಲು

ಹರಿವ ನೀರಲಿ
ಜೀವ ಹಿಡಿದು ಈಸ ಕಲಿಸಲು




...ಲಸಮಾದಿಗೆದ್ರಿದ ಸ್ವಾಮಿ ಇನ್ನೇಟುದಿನಿದ್ದನಂತೆ?

...ತ್ತರ ಕರ್ನಾಟಕದ ಪ್ರವಾಹದ ಗುಂಗಿನಲ್ಲೇ ...ಣಮಾವ.

...ನ್ನು ಹುಟ್ಟಿದಾಗಿಂದ ಇಂತ ಮಳೆ ಸುದ್ದಿ ...ಲ್ಲ" ಎಂದ.

...ನ್ಯಾಕಣ್ಣ ಕೇಳಿರಲಿಲ್ಲ. ಒಂದೇ ರಾತ್ರಿಗೆ ಕ್ವರೆ ...ಂಗಿನ ಸೊಪಿಯುಲ್ಲ ಕೊಚಗಂಡೋಗಿದ್ರೊ.



...ಮರತೆ ಬುಟ್ಯಾ" ಎಂದ ಸೀರ.

...ಇಂತ ಮಳೆ ಅಲ್ಲ ಕಂದ್ಯ. ಇದು ...ಹೂದದಪ್ಪ."

...ನ್ನಿ ಹೂದಿತ್ತೇನೊ. ಈಗಿನಂಗೆ ಪೇಪ್ರು ...ದ್ದೊ ಆಗ. ರೇಡಿಯೊನೂ ಇರಲಿಲ್ಲ" ...ರ.

...ತಿಯೊ ಇಲ್ದೆಯಿದ್ರುವೆ ಸಂತಿಗೋದಾಗ ..."

...ಯಾವತ್ತು ನಿಜ ಹೇಳಿದ್ದರು ಮಾವ. ...ಬಂದು ಹತ್ತು ಜನ ಕೊಚಗಂಡೋದ್ರು ...ದ್ದಿ ಕೇಳಿದೋನು ನಿನ್ನತ್ರ ಬಂದು ...ಷ್ಟರಲ್ಲಿ ಐದು ಜಾಸ್ತಿ ಹೇಳಿರತನೆ. ಅದ್ಕಲ್ಲ ...ವತ್ತಿನ ಪೇಪರ್‌ನೆ ನೋಡು. ...ದು ಪೇಪ್ರು ಒಂದೊಂತರ ಬರದವೆ. ...ತ್ತು ಜನ ಸತ್ತರು ಅಂತ ವಬ್ಬ ಬರದ್ರೆ, ...ನ್ನೂರು ಅಂತ್ಯ ಕ್ವರಿತನೆ, ಅಂಗೆ ಯಾರು ...ಕ್ಕೆ ತಯಾರಿಲ್ಲ. ಸುಳ್ಳು ಬರಿಯದ್ರಿಂದ ...ಮಕ್ಕಳಿಗೇನು ಸಿಗತದೊ ಕಾಣೆ ...ಗೆ" ಎಂದ ಉಗ್ರಿ.

...ಪ್ರುರು ಬರಿಯದ್ರಿಂದ ಜನಕೆ ...ದ್ರೆ, ಬರಕಳ್ಳಿ ಬುಡ್ರ ಅತ್ತಗೆ" ಎಂದ

...ಗನಿಸಿದಂಗೆ ಇವುರ‍್ಯಾವ ಅನುಕೂಲನೂ ...ಗದಿಲ್ಲ ಕಣಮಾವ. ಯಾಕೆ ಅಂದ್ರೆ ಈ ...ಲ್ಲಿ ಮನಿ ಬದ್ದೋಗ್ಯವೆ, ದನಕರ ...ಕೊಚಗಂಡೋಗ್ಯವೆ, ಬ್ಯಳೆ ನಷ್ಟಾಗ್ಯದೆ. ...ಸರಿಮಾಡ್ತರೆ, ಯಾವುದಕೆ ಪರಿಯಾರ ...ಅದ್ಕೆ ದ್ಯಾವೇಗೌಡ್ರು ಪ್ರಧಾನಮಂತ್ರಿಗೆ ...ದವ್ರುರಂತೆ."

...ತ ಬರದವ್ರುನೇ?"

...ಸರಕಾರ ನಚ್ಚಗಂಡ್ರಾಗದಿಲ್ಲ. ನೀವೇ ...ದೋದಿ ಏನಾರ ಮಾಡಿ ಅಂತವ."

...ಸರಕಾರ ನಚ್ಚಗಂಡ್ರಾಗದಿಲ್ಲ, ಅಂದ್ರೆ ...ದಕಾರವ ತಂದು ಮಡಗಿದೋನ್ಯಾರ್ಲ?" ...ಸೀರ ಸಿಟ್ಟಾದ.

...ದು ಮಡಗಿದೋರು ಅವುರೆ ಸರಿ. ...ದೋರು ಅಂತ ಯಾರಿಗೊತ್ತೇಳು.

ಮದಿವಾದ ಮ್ಯಾಲಲ್ಲವೆ ಗಂಡೇನು, ಗಂಡನ ಮನಿಯೋರು ಯಂಥೋರು ಅಂತ ಗೊತ್ತಾಗದು. ಆಗೊ ಅಂಗಾಗ್ಯದೆ ಈಗ. ಇಂತ ಅನಾಹುತನ್ಕಲ್ಲ ನಿಭಾಯಿಸಬೇಕಾದ್ರೆ ಸರಕಾರಕ್ಕೆ ಅನುಭವ ಇರಬೇಕು. ಅದೇ ಇಲ್ಲ ಇವುರಿಗೆ. ಅದ್ಕಂಗೆ ಮಾಡ್ತರೊ ಏನು ಮಾಡ್ತರೊ. ಅಂತೂ ನಮ್ಮ ನಿಮ್ಮಂಗೆ ಅವುರು ಸುಮ್ಮನಾದ್ರೂ ಆದ್ರೆಯಾ" ಎಂದ ಉಗ್ರಿ ಏನೊ ನೆನೆಸಿಕೊಂಡಂತೆ ಬಿದ್ದು ಬಿದ್ದು ನಗತೊಡಗಿದ. ಸಿಟ್ಟುಗೊಂಡ ಜುಮ್ಮಿ,

"ಅದ್ಯಾಕ್ಲ ಅಂಗೆ ನಗತಿ, ನಿನಿಗೇನು ಮಲ್ಲಾಗ್ರಿ" ಎಂದಳು.

"ಮಲ್ಲಾಗರಲ್ಲ ಕಣೆ. ಮಂತ್ರಾಲಯಕೆ ನೀರು ನುಗ್ಗಿ ಜನ ಜಾನುವಾರ್ಕಲ್ಲ ಮುಳುಗುತಾಯಿದ್ರೆ, ಅಲ್ಲಿದ್ದ ಸ್ವಾಮಿ ಹೆಲಿಕಾಪ್ಟರ್ ತರಿಸಿಗಂಡು ಓಡಿದನಂತಲ್ಲಾ, ಆ ಸುದ್ದಿ ಕೇಳಿದಾಗಿಂದ ನಗಬತ್ತದೆ" ಎಂದ.

"ಪಾಪ, ಅವುನಿನ್ನೆನು ಮಾಡಬೇಕಾಗಿತ್ತು, ಅವುನ ಪ್ರಾಣ ಉಳಿಸಿಗಂಡ್ರೆ ಸಾಕಾಗಿತ್ತೇನೊ."

"ಆ ಸ್ವಾಮಿ ಪ್ರಾಣ ಉಳಿಸಿಗಂಡು ಮಾಡೋ ಅಂತ ಕ್ಯಲಸ ಯಾವೂ ಇದ್ದಂಗೆ ಕಾಣದಿಲ್ಲ ಕಣೇ."

"ಅದ್ಯಾಕ್ಲ ಅಂಗಂತಿ?"

"ಆ ಸ್ವಾಮಿ ನೋಡಿದ್ರೆ ಆಗ್ಲೆ ಊರೋಗು ಅಂತದೆ ಕಾಡು ಬಾ ಅಂತದೆ ಅಂಗವುನೆ. ನಾನೇನಾರ ಆಗಿದ್ರೆ ಜಲಸಮಾದಿಯಾದ್ರು ಇಲ್ಲಿಂದ ಹೋಗದಿಲ್ಲ ಅಂತ ಹೇಳತಿದ್ದೆ. ಅಂತದ್ರಲ್ಲಿ ಸ್ವಾಮಿಯಾದ ಇವುನೇ ಓಡ್ಯವುನಲ್ಲ ಹೇಳು."

"ಅವುನ್ನ ತಿರಗ ಮಠಕ್ಕೆ ಸೇರಸಬ್ಯಾರ್ದು ಕಂದ್ಯ. ಜಲಸಮಾದಿಗೆದ್ರಿದೋನು ಇನ್ನೇಟುದಿನಿದ್ದನಂತೆ" ಎಂದ ಕಾಳಮಾವ.

"ನಿಜ ಕಣ ಮಾವ, ಭಕ್ತಾದಿಗಳು, ಹೆಂಗಸರು, ಮಕ್ಕಳು ಯಲ್ಲ ಮಾಡಿಮ್ಯಾಲೆ ನಿಂತಗಂಡು ಕೂಗತಯಿದ್ರುವೆ ಇವುನು ಶೋಭ ಕರಂದ್ಲಾಜೆ ಜ್ವತೆ ಮಾತಾಡಿಕಂಡು ಹೆಲಿಕ್ಯಾಪ್ಟರಲ್ಲಿ ವಂಟೋದನಂತಲ್ಲಾ, ಇವುನ್ನ ತಿರಗ ಮಂತ್ರಾಲಯಕ್ಕೆ ಸೇರಸಬವುದೆ" ಎಂದ ಉಗ್ರಿ. ಆಗ ಕಾಳಮಾವ,

"ಅದಕಲ್ಲ ಕಂದ್ಯ ನಾನೇಳಿದ್ದು. ಆ ಮಂತ್ರಾಲಯದಲ್ಲಿ ಇದ್ದ ಸ್ವಾಮಿ ಜೀವ ಭ್ಯರಕೆ ಸಮಾಧಿಯಾದನಂತೆ. ಅಂತ ಮಠಕ್ಕೆ ಸ್ವಾಮಿಯಾದೋನು ಜಲಸಮಾಧಿಗೂ ತಯಾರಿರಬೇಕು. ಅದು ಬುಟ್ಟು ಗುಳ್ಳೆನರಿಯಂಗೆ ಇವುನೆ ಓಡೋದ್ರೆ ಜಾಗದ ಮಯಿಮೆ ಉಳದತೆ?" ಎಂದ.

"ಜಾಗದ ಮಯಿಮೆ ಇಲ್ಲ ಅನ್ನದು ಪ್ರೂ ಆಯ್ತಲ್ಲ ಮಾವ. ಮಠಕ್ಕೆ ನೀರು ನುಗ್ಗಿದಾಗ ಅಲ್ಲಿ ಸಮಾದಿಯಾಗಿರೊ ರಾಘವೇಂದ್ರ ತದಿಬೇಕಾಗಿತ್ತಲವೆ" ಎಂದು ಉಗ್ರಿ ಹೇಳುವಾಗ ಕಾಣಿಸಿಕೊಂಡ ವಾಟಿಸ್ಸೆ,

"ರಾಘವೇಂದ್ರ ಮಠಕ್ಕೆ ಪ್ರವಾಹ ಎಂಟ್ರಿ ಕೊಟ್ಟ ಮ್ಯಾಟ್ರ ಮಾತಾಡ್ತಯಿದ್ದೀರಾ?" ಎಂದ.

"ಏನೆಂಟ್ರಿ ಕೊಟ್ಟದೊ? ಸರಿಯಾಗಿ ಕನ್ನಡ ಮಾತಾಡು" ಎಂದ ಉಗ್ರಿ.

"ಅದ ನನಿಗೇಳ ಬ್ಯಾಡ ಟಿವಿಲಿ ಹೇಳೊರಿಗೆ ಬುದ್ಧಿ ಹೇಳೊ ಉಗ್ರಿ. ಅವುಳ್ಯಾವಳೊ ಒನಪು ವೈಯಾರದಲ್ಲಿ 'ತುಂಗಭದ್ರಾ ಪ್ರವಾಹ ರಾಯರ ಮಠಕ್ಕೆ ಎಂಟ್ರಿ ಕೊಟ್ಟದೆ' ಅಂತಳಲ್ಲಾ, ನಮ್ಮ ಕನ್ನಡದಲ್ಲಿ ಯ್ಯಂತ್ಯಂಥಾ ಪದಗಳವೆ, ಅವುನ್ಕಲ್ಲ ಮುಂಡಾಮೋಚತಾ ಅವುರಲ್ಲ ಹೇಳು."

"ಇಡೀ ಉತ್ತರ ಕರ್ನಾಟಕನೇ ಪ್ರವಾಹ ಮುಂಡಾಮೋಚರವಾಗ ಪದತಗಂಡೇನು ಮಾಡಿಯೋ?"

"ಅಂಗಲ್ಲ ಕಣೊ ಉಗ್ರಿ. ಸಾವುನೋವಾದಾಗ್ಲು ತಮಾಸಿ ಮಾಡ್ತವಲ್ಲೊ, ಮನೆ ಕುಸಿತು, ಹೆಣ ಬಿದ್ದಿದೆ ಅಂತಳಲ್ಲಾ. ಇವುರಪ್ಪನೋ ಇವರವ್ವನೊ ಸತ್ತರೆ ಹೆಣಬಿತ್ತು ಅಂತಾವ ಇವು. ನನ್ನ ಕೈಗೆ ಸಿಕ್ಕಬೇಕವು, ನಿಮ್ಮವುನ ಮದ್ಲು ಕನ್ನಡ ಕಲಿ ಆಮ್ಯಾಲೆ ಟಿವಿಲಿ ಕಾಣಿಸಿಕೊ ಅಂತಿನಿ."

"ಯಾವ್ರೊ ನಿನ್ನಂತವು ಬರಕೊಟ್ಟಿದ್ದ ಓತ್ತವೆ ಕಣೊ. ಪಾಪ ಅವು ವಟ್ಟೆಪಾಡಿನ ಬಡ್ಡೆತ್ತವು."

"ವಟ್ಟೆಪಾಡು ಅಂತ ಬಾಯಿಗೆ ಬಂದಂಗೆ ಮಾತಾಡದಲ್ಲ ಕಣೊ ಉಗ್ರಿ. ನಾನು ಅಂಗೇ ನೋಡ್ತಯಿದ್ದಿನಿ. ಇಡೀ ಉತ್ತರ ಕರ್ನಾಟಕ ಕೊಚಗಂಡೋಗದು ಇವುರಿಗೆ ಸುದ್ದಿಯುಲ್ಲ, ರಾಘವೇಂದ್ರ ಮಠಕ್ಕೆ ನೀರು ನುಗ್ಗಿದ್ದೇ ಇವುರಿಗೆ ಸುದ್ದಿ, ಅಲ್ಲಿ ಪೂಜೆ ನಿಂತಿರದೇ ಇವುರಿಗೆ ಸುದ್ದಿ."

"ಆ ಸುದ್ದಿ ಇರ್ಲಿ ಈ ಸುದ್ದಿ ಕೇಳಿದೇನೊ?"

"ಯಾವ ಸುದ್ದಿನೊ ಉಗ್ರೀ?"

"ಮಂತ್ರಾಲಯದಲ್ಲಿ ಮಂಚಾಲಮ್ಮ ಅಂತ ದೇವಿ ಇದ್ದಳಂತೆ. ಈ ಬ್ರಾಂಬ್ರು ಅವುಳಗುಡಿ ಕಟ್ಟದಂಗೆ ನೋಡಿ ಕಂದಿದ್ದರಂತೆ. ಅದ್ಕೆ ಅವುಳಿಗೆ ಸಿಟ್ಟುಬಂದು ತುಂಗಭದ್ರಾ ನೀರ ಅತ್ತಗೆ ತಿರುಗಿಸಿಗಂಡು ರಾಯರ ಮಠ ಮುಳುಗಿಸಿದ್ಲಂತೆ" ಎಂದು ಉಗ್ರಿ ಹೇಳುವಾಗ, ಕುತೂಹಲದಿಂದ ಕೇಳಿಸಿಕೊಂಡ ಸೀರ,

"ಇರಬವುದು ಬುಡು" ಎಂದ.

"ತಗಳಪ್ಪ, ಮಂಚಾಲಮ್ಮನ ಭಕ್ತ ಇಲ್ಲೆ ಅವುನೆ" ಎಂದ ವಾಟಿಸ್ಸೆ.

"ಅಂಗಲ್ಲ ಕಂದ್ಯ. ಮಂಚಾಲಮ್ಮ ರಾಯನ ಮಠನೇ ಮುಳುಗುಸ್ತಳೆ ಅಂದ್ರೆ ಅವುಳು ರಾಯನಿಗಿಂತ್ಲೂ ಸಗಿತಿವಂತೆ ಅನ್ನಂಗಾಯ್ತಪ್ಪ."

"ಅದಲ್ಲ ಮ್ಯಾಟ್ರು ಚಿಗಪ್ಪ, ಸ್ಥಳೀಯವಾದ ಜನಕೆ ಇವತ್ತಿಗೂ ಮಂಚಾಲಮ್ಮನೆ ದೇವತೆ. ಅವುಳಿಂದ್ಲೆ ಆ ಊರೇ ವರತೂ, ಈ ವೆಂಕಟಭಟ್ಟರಿಂದ ಅಲ್ಲ ಅಂತ ಜನಗಳ ನಂಬುಕೆ."

"ಯಂಗಟ ಭಟ್ಟರ‍್ಯಾರ್ಲ?" ಎಂದಳು ಜುಮ್ಮಿ.

"ಅವುರೆ ಗುರುರಾಯರು ಕಣಕ್ಕ. ಗುರುರಾಘವೇಂದ್ರ ಆಗದಕೂ ಮದ್ಲು ಅವುರು ವೆಂಕಟಭಟ್ಟರಾಗಿದ್ರು. ಮದಿವಾದ್ರು, ಮಕ್ಕಳೂ ಇದ್ರೊ ಬರೀ ವೀಣೆ ನುಡಿಸಿಗಂಡು, ದೇವರ ಭಜನೆ ಮಾಡಿಕಂಡಿದ್ರೆ ವಟ್ಟೆ ತುಂಬತದಾ? ಅದ್ಕೆ ಬಡತನ ಸಯಿಸ್ಸಕ್ಯಾಗದೇ ಜೀವ ಸಮಾದಿಯಾದ್ರು. ಪವಾಡ ಮ್ಯರಿಸಿದ್ರು. ಆವಾಗ್ಲಿಂದ ಅವರ ಕುಲಗೋತ್ರದೋರು ಕುಬೇರಾದ್ರು. ಮಂಚಾಲಮ್ಮನ ಕಡಿಯೋರು ಬಡವರಾದ್ರು. ಈಗ ಮಂಚಾಲಮ್ಮನ ಭಕ್ತರು ಅವುಳ ಗುಡಿ ಕಟ್ಟದೆಯಿರದ್ರಿಂದ ಪ್ರವಾಹ ಬಂತು, ಮದ್ಲು ಗುಡಿ ಕಟ್ಟಿ ಅಂತ ಕುಂತವ್ರುರೆ. ಇದಕೇನೇಳ್ತಿ ಚಿಗಪ್ಪ?"

"ನೋಡು ಮತ್ತೆ ಮಂಚಾಲಿ ಮರ್ಮ ಯಂಗದೆ?"

"ರಾಯರಮ್ಯಾಲೆ ಅಂಗ್ಯಲ್ಲ ಮಾತಾಡಬ್ಯಾಡ ಕಂದ್ಯ, ವಳ್ಳೆದಲ್ಲ."

"ಪ್ರವಾಹ ಬತ್ತದೇನಕ್ಕ? ಬರ್ಲಿ ಬುಡು!" ●



...ಸ್ !


...ತ್ತು ಗುರುವಾರ. ಬಂದ್ ಹಿಂದಿನ ಸಂಜೆ. ಶುಕ್ರವಾರ ಬಂದ್ ಘೋಷಿಸಿದ್ದರೂ ಗುರುವಾರವೇ ಹಿಂಸೆ ಶುರುವಾಗಿತ್ತು. ನನ್ನ ಗೆಳೆಯರು ...ಡೆ ನಡೆದ ಗೂಂಡಾಗಿರಿ, ಹಿಂಸಾಚಾರ ನೋಡಿ ಖಿನ್ನರಾಗಿದ್ದರು. ಗುರುವಾರವೇ ಹೀಗಾದರೆ ಶುಕ್ರವಾರ ಇನ್ನೇನಾಗುತ್ತೋ ಎಂದು ...ಡಿದ್ದರು. ಅಷ್ಟರಲ್ಲಿ ಸುಮಾರು ಒಂಬತ್ತೂವರೆಗೆ ಅವಾಂತರಕಾರಿಗಳ ಗುಂಪೊಂದು ನಮ್ಮ ಕಚೇರಿಯ ಎದುರು ಓಡಾಡುತ್ತಾ ಎಲ್ಲ ...ನನ್ನು ಮುಚ್ಚಿಸತೊಡಗಿತ್ತು, ಶಟರ್‌ಗಳು ಮುಚ್ಚಿಕೊಳ್ಳುವ ಸದ್ದು, ರಾತ್ರಿಯ ನಿಶ್ಯಬ್ದ ಹೆಚ್ಚುತ್ತಿದ್ದಂತೆ ಬಾಗಿಲುಗಳು ಮುಚ್ಚಿಕೊಳ್ಳುವ ಕರ್ಕಶ

...ಗಳು ಸರಿದು ಹತ್ತೂವರೆ ಆಗಿತ್ತು, ಇದ್ದಕ್ಕಿದ್ದಂತೆ ನಾನು "ರಾತ್ರಿಯೆಲ್ಲ ನಡೆಯುವ ಅಂಗಡಿಗಳು, ಹೋಟೆಲುಗಳು ಮುಚ್ಚಿಕೊಳ್ಳುತ್ತವಾ?" ...ಲವರು "ಎಲ್ಲರೂ ಬಾಗಿಲು ಹಾಕುತ್ತಾರೆ" ಅಂದರು. ಕೆಲವರು "ಜನಪ್ರಿಯ ಹೋಟೆಲ್‌ಗಳು ಬಾಗಿಲು ಹಾಕುವುದಿಲ್ಲ" ಅಂದರು ...ರಿ ಸಿಟಿ ಮಾರ್ಕೆಟ್‌ನಲ್ಲಿರುವ ತಾಜ್‌ಹೋಟೆಲ್?" ಅದು ಕೂಡ ಮುಚ್ಚಬೇಕಾಗುತ್ತೆ!' ಅಂದೆ.

..."ತಾಜ್" ಬಗ್ಗೆ ನೀವು ಕೇಳಿರಬಹುದು. ಕೋಳಿ ಕಬಾಬ್, ಮಾಂಸದ ಚಾಪ್ಸ್‌ಗೆ ಪ್ರಸಿದ್ಧವಾದ ಈ ಹೋಟೆಲ್ ಎಲ್ಲರಿಗೆ ಪ್ರಿಯವಾದ ...; ಬೆಲೆಗಳು ಕೂಡ ಕಮ್ಮಿ. ರಿಕ್ಷಾ ಡ್ರೈವರ್‌ಗಳಿಂದ ಹಿಡಿದು ಅತ್ಯಂತ ಶ್ರೀಮಂತರು ಕೂಡ ಇಲ್ಲಿಗೆ ಬರುತ್ತಾರೆ; ಅಥವಾ ಇಲ್ಲಿಂದ ...ಸಿಕೊಳ್ಳುತ್ತಾರೆ. ನಾನು "ಈ ಮುಸ್ಲಿಂ ಮಾಲೀಕ ಕೂಡ ಬಾಗಿಲು ಹಾಕಿರುತ್ತಾನೆ" ಅಂದೆ. "ಇಲ್ಲ! ಆತ ಹಾಕುವುದಿಲ್ಲ!" ಅಂದರು ... ಪಣ ಕಟ್ಟಿದರು. ಫೋನ್ ಮಾಡಿದರೆ ತಾಜ್ ತೆರೆದೇ ಇತ್ತು!

...ನ್ನು, ಕಲ್ಲು, ದೊಣ್ಣೆ, ಬೆಂಕಿ ಹಚ್ಚುವ ಪುಂಡರು ಕೂಡ ತಿಂದು ಖುಷಿಪಡುವುದು ಈ ತಾಜ್‌ನಲ್ಲಿ! ಅದು ಮುಚ್ಚಿದರೆ ಅವರ ... ಹೇಗೆ ಮುಂದುವರಿಯಬೇಕು?

ಕಾರಣ ಬೇಕಿಲ್ಲ



ಹಿಂಸೆಗೆ ಕಣ್ಣಿರುವುದಿಲ್ಲ, ನನ್ನ ಗೆಳೆಯರೊಬ್ಬರು ಕೆಂಪೇಗೌಡ ಸರ್ಕಲ್‌ನಿಂದ ಬಸವನಗುಡಿ ಕಡೆಗೆ ಆಟೋರಿಕ್ಷಾದಲ್ಲಿ ಬರುತ್ತಿದ್ದರು. ಇದ್ದಕ್ಕಿದ್ದಂತೆ ಗಲಾಟೆ ಶುರುವಾಯಿತು. ನೋಡಲು ವಿದ್ಯಾವಂತರಂತಿದ್ದ ಹುಡುಗರು; ಕಾರುಗಳನ್ನು ನಿಲ್ಲಿಸಿ ಬೆಂಕಿಹಚ್ಚತೊಡಗಿದರು. ಆಟೋರಿಕ್ಷಾ ನಿಲ್ಲಿಸಿದ. ಡ್ರೈವರ್ ಕೈಮುಗಿದು ಬೇಡಿಕೊಂಡ, 'ನಾನು ಮುಸ್ಲಿಂ ಬೇರೆ. ಸುಮ್ಮನೆ ಹೊಡೆದು ಬೆಂಕಿ ಹಚ್ಚಿಬಿಡ್ತಾರೆ. ದಯವಿಟ್ಟು ಕ್ಷಮಿಸಿ. ನೀವು ಬಾಡಿಗೆ ಕೊಡಬೇಡಿ. ನಾನು ಮನೆಗೆ ಹೋಗ್ತೇನೆ" ಅಂದ.

"ಹಾಗಲ್ಲ, ನೀನು ಮುಸ್ಲಿಂ ಆದ ಮಾತ್ರಕ್ಕೆ ನಿನಗೇಕೆ ತೊಂದರೆ ಕೊಡ್ತಾರೆ? ಇದು ಕಾವೇರಿ ವಿವಾದಕ್ಕೆ ಸಂಬಂಧಿಸಿದ್ದು" ಅಂದ ಗೆಳೆಯ.

"ಅವರಿಗೆ ಇದೆಲ್ಲ ನೆಪ. ಸಿಟ್ಟಿಗೆ ಅದೆಲ್ಲ ತಿಳಿಯೊಲ್ಲ" ಅಂದ ಆ ರಿಕ್ಷಾ ಚಾಲಕ.

ಗೆಳೆಯ ಆತನಿಗೆ ಎರಡರಷ್ಟು ಮಜೂರಿ ಕೊಟ್ಟು ಇಡೀ ವಾತಾವರಣದ ಬಗ್ಗೆ ನಡುಗುತ್ತಾ ನಡೆದು ಬಂದ.

-ಡಿಸೆಂಬರ್ 22, 1991

ದೈವಚಿಕಿತ್ಸೆ

ಏನಾಗಿದೆ ಈ ಪುಣ್ಯಭೂಮಿಗೆ?

ಆಯಿತೆ ದೈವಭಕ್ತರಿಲ್ಲದ ಬಂಜರು ಭೂಮಿ?

ಬರ ಬಂದರೇನು ಮಾಡುತ್ತಿದ್ದರು ಇಲ್ಲಿ?

ಸರ್ಕಾರ ಘೋಷಿಸುತ್ತಿತ್ತು-ದೇವಾಲಯ, ಚರ್ಚು, ಮಸೀದಿಗಳಲ್ಲಿ ಪ್ರಾರ್ಥನೆ ನಡೆಯಲಿ.

ಸಾಂಗವಾಗಿ ನೆರವೇರುತ್ತಿತ್ತು ಪ್ರಾರ್ಥನೆ.

ಸರ್ಕಾರದ ಬೆಂಬಲಕ್ಕೆ ನಿಲ್ಲುತ್ತಿತ್ತು ಆಸ್ತಿಕ ಪಡೆ. ಸ್ವಯಂಸ್ಫೂರ್ತಿಯಿಂದ ನಡೆಸುತ್ತಿತ್ತು ಹೋಮ, ಹವನ. ಲೋಕ ಕಲ್ಯಾಣಕ್ಕಾಗಿ, ಬರಪರಿಹಾರಕ್ಕಾಗಿ ನಡೆಯುತ್ತಿತ್ತು ಯಜ್ಞ. ವಸುಧೈವ ಕುಟುಂಬಕಂ ಎಂದು ನಂಬಿದರಲ್ಲವೆ ಇವರು.

ಪರಿಣಾಮ: ಬರ ಮಾಯವಾಗುತ್ತಿತ್ತು, ನೆಲೆಸುತ್ತಿತ್ತು ಶಾಂತಿ, ನೆಮ್ಮದಿ.

ಈಗ? ನೆರೆ ಬಂದು ಲಕ್ಷಾಂತರ ಮಂದಿ ಸಾವುನೋವಿಗೆ ತುತ್ತಾಗಿದ್ದಾರೆ. ಕುಡಿಯಲು ನೀರೂ ಸಿಗದಂತಹ ಸ್ಥಿತಿ. ಹೆಂಗಸರು ಮಕ್ಕಳ ಗೋಳು ನೋಡಲಾಗದು. ಹೀಗಿದ್ದರೂ ಸರ್ಕಾರ ಪ್ರಾರ್ಥನೆಗೆ

ಅಣಕ

▶ ಎಚ್.ಎಲ್. ಕೇಶವಮೂರ್ತಿ

ಆದೇಶ ಹೊರಡಿಸಿಲ್ಲ! ಪವಿತ್ರ ಭಾರತದ ಕೀರ್ತಿ ಕಾಪಾಡಲೆಂದು ಕ್ರಿಕೆಟ್ ಮ್ಯಾಚಿಗೂ ಸ್ವಯಂಸ್ಫೂರ್ತಿಯಿಂದ ಸ್ಪಂದಿಸುತ್ತಿದ್ದ ಯಜ್ಞ ಪ್ರವೀಣರ ಸುಳಿವಿಲ್ಲ!

ನೆರೆ ಹಾವಳಿ ತಡೆಯಲು ದೈವಚಿಕಿತ್ಸೆ ತೋರಿಲ್ಲ!

ಬಂಜೆ ಆದಳೆ ಭಾರತ ಮಾತೆ?

ಇದು ಹೋಗಲಿ. ಬೆಳಗಾಗುವುದೇ ತಡ. ಎಲ್ಲ ಪ್ರಮುಖ ಟಿವಿ ವಾಹಿನಿಗಳಲ್ಲೂ ಕಣ್ಣು ಕುಕ್ಕುವ ವೇಷದಲ್ಲಿ ವಿಜೃಂಭಿಸುತ್ತಿದ್ದ.... ಭೂತ, ವರ್ತಮಾನ, ಭವಿಷ್ಯ ಕುರಿತು ಪ್ರವಚನ ನೀಡುತ್ತಾ ಹೆಂಗಳೆಯರ ಮನಸೂರೆಗೊಂಡಿರುವ ಪ್ರಕಾಂಡ ಜ್ಯೋತಿಷಿಗಳು.... ಇದೇನು.... ಯಾವ ಯಾವ ಗ್ರಹಗಳು ಯಾವ ಯಾವ ಮನೆಗಳನ್ನು ಹೊಕ್ಕಿರುವುದರಿಂದ ನೆರೆಹಾವಳಿ ಬರುತ್ತದೆ ಎಂಬ ಮುನ್ಸೂಚನೆಯನ್ನೂ ನೀಡಲೇ ಇಲ್ಲವಲ್ಲ... ಕ್ಷುದ್ರ ಹವಾಮಾನ ಇಲಾಖೆ ಜಂತುಗಳಿಗೆ ಒಂದು ವಾರದ ಮುಂಚೆಯೇ ಅರಿವಾದದ್ದು ಇವರ ಪರಿಧಿಯೊಳಕ್ಕೆ ಬಾರದಿರಲು.... ಗ್ರಹಗಳೇನಾದರೂ ಗುಪ್ತವಾಗಿ ತಮ್ಮ ಚಲನವಲನಗಳನ್ನು ಅವರಿಗೆ ತಿಳಿಸಿರುವ ಸಾಧ್ಯತೆ ಏನಾದರೂ ಇದೆಯ.... ಇರಲಾರದು. ಇವರ ಕಣ್ತಪ್ಪಿಸಿ ಅವೆಲ್ಲೂ ಸಂಚರಿಸಲಾರವು. ಆದರೂ ಮನುಷ್ಯ ಸ್ವಭಾವಕ್ಕನುಗುಣವಾಗಿ ಯಾವ ಮಾಯದಲ್ಲೋ ಇವರ ಮನೆ ಹೊಕ್ಕು ಮಂಕು ಕವಿದಿರಬಹುದು!

ಎಂತಹ ದಾರುಣ ಸನ್ನಿವೇಶವಿದು! ವಿಶ್ವವಿದ್ಯಾಲಯಗಳಲ್ಲಿ ಜ್ಯೋತಿಷ್ಯ ಶಾಸ್ತ್ರ ಬೋಧಿಸುವ ಪ್ರಯತ್ನ ನಡೆಯುತ್ತಿರುವಾಗಲೇ.... ಅಕಟಕಟಾ ಇಂತಹ ಅವಘಢ ಸಂಭವಿಸಬೇಕೆ!

ಆಹಾ, ಆ ಸಿವನ ಆಟವ ಬಲ್ಲವರಾರು.....

ಇಷ್ಟಾದರು ನಿರಾಶೆಯಿಂದ ಕುಸಿಯುವ ಅವಶ್ಯಕತೆ ಇಲ್ಲ.

ಎಲ್ಲವೂ ಅವನ ಆಟ! ಭಕ್ತನನ್ನು ಪರೀಕ್ಷಿಸುವ ಪರಿ ಇದು!

ದೇವರು, ನವಗ್ರಹಗಳು ನೆರೆಹಾವಳಿಯಿಂದ ಕೊಚ್ಚಿಹೋಗಿವೆ, ಇಲ್ಲ ನೀರಿನಲ್ಲಿ ಮುಳುಗಿವೆ. ಇದೆಲ್ಲದಕ್ಕೂ ಅಣಿ ಮಾಡಿದ್ದು ಆ ದೇವನೆ!

ಈಗ ಮನುಷ್ಯನ ಕರ್ತವ್ಯವೇನು?

ದೇವರನ್ನು ರಕ್ಷಿಸುವುದು!

ಇದು ಭಗವಂತ ಒಡ್ಡಿರುವ ಪರೀಕ್ಷೆ.

ಶೋಭಾ ಕರಂದ್ಲಾಜೆಗೆ ಇದು ತಿಳಿದಿದೆ! ಆದರಿಂದಲೇ ಮಂತ್ರಾಲಯಕ್ಕೆ ಹಾರಿದರು. ರಕ್ಷಿಸಿದರು! ಯಾರನ್ನು? ದೇವರ ಪ್ರಮುಖ ಏಜೆಂಟರನ್ನ!

ಭಕ್ತರನೇಕರು ಇಂತಹದ್ದೇ ಸಂಕಷ್ಟದಲ್ಲಿ ಸಿಲುಕಿದ್ದರಲ್ಲಾ?

ಅವರನ್ನೂ ಮರೆತಿಲ್ಲ ಶೋಭಾಜಿ ಅವರು. ಸಮೀಪದಿಂದ ಹೆಲಿಕಾಪ್ಟರ್ ನೋಡುವ ಅವಕಾಶವನ್ನ ಅವರಿಗೆ ಕಲ್ಪಿಸಿದರು! ಮತ್ತೆ ಬರುವುದಾಗಿ ಆಶ್ವಾಸನೆ ನೀಡಿ ಮಠಾಧೀಶರೊಡನೆ ಭಕ್ತಿಯಲ್ಲಿ ಲೀನವಾದರು!

ಮಠಾಧೀಶರನ್ನು ರಕ್ಷಿಸಿದ್ದು ಸರಿ. ಆಯಿತೆ ದೇವರ ರಕ್ಷಣೆ?

ಈ ಅನುಮಾನ ಬೇಕಿಲ್ಲ, ಮಠಾಧೀಶರು ತಮ್ಮೊಡನೆ ಮೂಲ ದೇವರನ್ನೂ ಕೊಂಡೊಯ್ದಿದ್ದರಂತೆ!

ನೆರೆಯೊಡನೆ ಬಂದ ಹೊಲಸಿನಿಂದ ಆಗಲಿಲ್ಲವೆ ದೇವರಿಗೆ ಮೈಲಿಗೆ ಎಂಬ ಚಿಂತೆ ಬೇಕಿಲ್ಲ, ಅದಕ್ಕಾಗಿ ನಡೆಯಲಿದೆ ಪುಣ್ಯ ಕಾರ್ಯ. ನಿಂತಿದೆ ಸರ್ಕಾರ ಅದರ ನೆರವಿಗೆ. ಹತ್ತು ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಜನರಿಗೆ ಸೂರಿಲ್ಲದಿರಬಹುದು. ಪ್ರತಿಷ್ಠಿತ ದೇವರಿಗೆ ಬೇಡವೆ ಅದ್ದೂರಿ ದೇವಾಲಯ!

ಅಲ್ಲಿಗೆ ಮುಗಿಯಿತಲ್ಲ ನೆರೆ ಹಾವಳಿ ದುರಂತ ಕತೆ. ಮಠಾಧೀಶರು ಪಾರಾದರು; ದೇವರೂ ಪಾರಾದ! ಇನ್ನು ಮುಂದೆ ಮತ್ತೆ ಹೋಮಹವನ, ಯಜ್ಞ ಯಾಗ, ಪೂಜೆ ಪುನಸ್ಕಾರಗಳು ಎಂದಿನಂತೆ ವಿಜೃಂಭಣೆಯಿಂದ ನಡೆದು ಭಕ್ತ ವೃಂದಕ್ಕೆ ಶಾಂತಿ, ಸಮಾಧಾನ ತರಲಿವೆ! ಹೆಂಗಳೆಯರಿಗೆ ವಂಚನೆಯಾಗುವುದಿಲ್ಲ. ಬೆಳಗಿನ ಟಿವಿ ವಾಹಿನಿಗಳಲ್ಲಿ ಯಥಾರೀತಿ ಜ್ಯೋತಿಷ್ಯ ಭೋಜನವನ್ನು ಆನಂದದಿಂದ ಅನುಭವಿಸಬಹುದು!

ಯಾರ ಬಂಧು?

ಯಡ್ಯೂರಪ್ಪ ಕೆಲಕ್ಷಣ ವಿಚಲಿತರಾದರು. ಸುತ್ತೂರು ಮಠದಲ್ಲಿ ಚಿಂತನ ಶಿಬಿರ ನಡೆದಿತ್ತು. ಅತಿಥಿ ಆತಿಥೇಯರಿಬ್ಬರಿಗೂ ಲಾಭದಾಯಕವಾಗಿರಬೇಕು ಈ ಶಿಬಿರ. ಎಲ್ಲರೂ ತೃಪ್ತಿಗೊಂಡಿದ್ದರು. ಶಿಬಿರ ಪ್ರಾರಂಭಕ್ಕೆ ಮುನ್ನವೇ ಹವಾಮಾನ ಇಲಾಖೆ ಬರಲಿರುವ ಸಂಕಷ್ಟಗಳ ಮುನ್ಸೂಚನೆ ನೀಡಿತ್ತು ನಿಜ. ಧನಂಜಯಕುಮಾರ್ ಎಂಬ





ಬಿಜೆಪಿಯ ಉಂಡಾಡಿಗುಂಡ ಇಲಾಖೆ[...] ಮುನ್ಸೂಚನೆಯ ಬಗ್ಗೆಯೇ ಪ್ರತಿಕಾಗೋಷ್ಠಿಯ[...] ಅನುಮಾನ ವ್ಯಕ್ತಪಡಿಸಿದ್ದಾರೆ. ಅವರಂತೆಯೇ ಇ[...] ಹೊಟ್ಟೆಪಾಡಿನ ಇಲಾಖೆ ಎಂದಾಯಿತು. ಇದ[...] ಯಡ್ಯೂರಪ್ಪನವರು ಅದರ ಬಗ್ಗೆ ಗಮನಹರಿಸದೆ ಚಿಂ[...] ಶಿಬಿರದಲ್ಲಿ ತಲ್ಲೀನರಾಗಿದ್ದರು. ಅವರ ದುರಾದೃಷ್ಟ ನೋ[...] ಇಲಾಖೆಯ ಮುನ್ಸೂಚನೆಯೇ ಸರಿಯಾಯಿತು. ಅದ[...] ಜನ ಸಾಯ್ತಾರೋ, ಆದಂಗೆ ಸಾಯ್ತಾರೋ ನೋ[...] ಬರೋಣ ಅಂತಾನೋ ಏನೋ ಹೊರಟು ನಿಂತ[...] ಅಷ್ಟರಲ್ಲಿ ಏನಾಗಿತ್ತು... ಕೆಎಂಎಫ್‌ನ ಇತ್ತೀಚಿನ ಚಕ್ರವ[...] ಸೋಮಶೇಖರ ರೆಡ್ಡಿ 'ರಾಂಡಿ ಸಾರ್ ಮೀಕು ಪ್ರ[...] ಇಸ್ತಾನು' ಅಂದದ್ದು ನೆನಪಾಯಿತು. ಅಲ್ಲಿ ಜನ ಸಾಯೊ[...] ನೋಡೋದೋ, ಪ್ರಶಸ್ತಿ ಸ್ವೀಕರಿಸೋದೋ ಅಂತ ವಿಚ[...] ರಾದರು. ಇಲ್ಲಿಗೆ ಹೋದರೆ ಕ್ಷೀರಬಂಧು ಪುರಸ[...] ಅಲ್ಲಿಗೆ ಹೋದರೆ ಏನಿದೆ ಮಣ್ಣು? ಬರೀ ಹೆಣಗ[...] ಗೋಳಾಡೋ ಜನ. ಈ ಗೋಳ ಇವತ್ತು ನೋಡಿದರ[...] ಒಂದೆ, ನಾಳೆ ನೋಡಿದರೂ ಅದೇ. ಜನಕ್ಕೆ ಬೇಕಾಗಿ[...] ವುದು ಪರಿಹಾರ. ನಷ್ಟ ಹೆಚ್ಚಿದಷ್ಟೂ ಕೇಂದ್ರದಿಂ[...] ಹೆಚ್ಚು ಪರಿಹಾರ ಸಿಗ್ತದೆ. ಇದರಿಂದ ಜನರಿಗೂ ಲಾ[...] ಪರಿಹಾರ ಧನ ಅಂತ ಬಂದರೆ ಅದೂ ಆದಾಯ[...] ಮೂಲವೇ ಅಲ್ಲವಾ ಎಂದೆಲ್ಲ ಚಿಂತಿಸಿದರೋ ಎಂ[...] ಗೊತ್ತಿಲ್ಲ. ಅಂತೂ ಪ್ರಶಸ್ತಿ ಪ್ರದಾನ ಸಮಾರಂಭ[...] ಹಾಜರಾದರು.

ವಜ ಆಗಬೇಕು ಯಾರು?

ಕಡೆಗೂ ಯಡ್ಯೂರಪ್ಪ ನೆರೆ ಹಾವಳಿ ಕಾಣ[...] ಹೆಲಿಕಾಪ್ಟರ್ ಹತ್ತಿ ಹೊಂಟರು. ವೀಕ್ಷಣೆಯ ನಂತ[...] ಒಂದು ತಿಂಗಳು ಯಾರೂ ರಜ ಹಾಕಬಾರದು ಎಂ[...] ಸರ್ಕಾರಿ ನೌಕರರಿಗೆ ತಾಕೀತು ಮಾಡಿದರು. (ಇ[...] ರಸದೌತಣ ಕಾಯ್ತಾ ಇರುವಾಗ ರಜ ಹಾಕೊ ಮೂ[...] ಯಾರು ಸ್ವಾಮಿ!) ಆಮೇಲೆ ನೆರೆ ಹಾವಳಿಯನ್ನು ತಾ[...] ಗಂಭೀರವಾಗಿ ಪರಿಗಣಿಸಿದ್ದೀನಿ ಅನ್ನೋದು ಜನರ[...] ಮನವರಿಕೆಯಾಗಬೇಕಲ್ವ. ಅದ್ಕೇ ಒಂದಿಬ್ಬರು ಸಿಬ್ಬಂದಿ[...] ಕರ್ತವ್ಯ ನಿರ್ಲಕ್ಷ್ಯ ಮಾಡಿದ್ದೀರಿ ಅಂತ ಅಮಾನತ್ತಿನ[...] ಟ್ಟರು.

ಇದು ಸರಿ. ನೆರೆ ಹಾವಳಿಯಿಂದ ಜನ ಬಳಲುತ್ತಿ[...] ವಾಗ ಕರ್ತವ್ಯ ನಿರ್ಲಕ್ಷ್ಯ ಘೋರ ಅಪರಾಧವೇ ಸ[...] ಆದರೆ ಇದೇ ಸಮಯದಲ್ಲಿ ನೆರೆ ಬರುತ್ತೆ ಎಂಬು[...] ತಿಳಿದಿದ್ದೂ ತಾವು ಚಿಂತನ ಶಿಬಿರದಲ್ಲಿ ಶವಾ[...] ಹಾಕಿಕೊಂಡಿದ್ದರಲ್ಲ...

ಈಗ ನಮ್ಮ ಪ್ರಶ್ನೆ: ಯಾರನ್ನು ಈ ಲೋಪ[...] ಶಿಕ್ಷಿಸಬೇಕು?

ಸಿಬ್ಬಂದಿಯನ್ನೊ ಅಥವಾ....

ಹೃದಯಹೀನ ಚಿದಂಬರಂ.....

'ಆಪರೇಷನ್ ಗ್ರೀನ್ ಹಂಟ್' ಎಂಬುದು ನಿಸ್ಸಹಾಯಕ, ಬಡ ಆದಿವಾಸಿಗಳ ಮೇಲೆ ಸರ್ಕಾರ ಸಾರಿರುವ ಸಮರ ಎಂಬುದು 100% ನಿಜ. (ಲಂಕೇಶ್ 14.10.09) ಕೇಂದ್ರ ಗೃಹ ಸಚಿವ ಚಿದಂಬರಂನ ಬ್ರೇನ್ ಚೈಲ್ಡ್ ಈ 'ಗ್ರೀನ್ ಹಂಟ್.'

ಈ ಚಿದುವಿನ ವಿಭಿದ್ರಕಾರಿ ಬುದ್ಧಿಯಿಂದಾಗಿ ಭಾರತೀಯ ಸಾರ್ವಜನಿಕ ಬ್ಯಾಂಕುಗಳೂ ಅಮೆರಿಕದ ಬ್ಯಾಂಕ್‌ಗಳಂತೆ ದಿವಾಳಿಯೆದ್ದು ಭಾರತ ದೇಶದ ಇಡೀ ಆರ್ಥಿಕ ವ್ಯವಸ್ಥೆ ಘೋರ ಆರ್ಥಿಕ ಹಿಂಜರಿತಕ್ಕೆ ಒಳಗಾಗುತ್ತಿತ್ತು. ಐದು ವರ್ಷಗಳ ಹಿಂದೆ ಈತ ಹಣಕಾಸು ಸಚಿವನಾಗಿದ್ದಾಗ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳನ್ನು ಖಾಸಗಿಯವರಿಗೆ ಮಾರುವ ಹುನ್ನಾರು ನಡೆಸಿದ್ದನು. ಆದರೆ ಕಮ್ಯುನಿಸ್ಟ್ ಪಾರ್ಟಿಯ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ತೀವ್ರ ವಿರೋಧದಿಂದಾಗಿ ಬ್ಯಾಂಕ್ ಖಾಸಗೀಕರಣ ಆಗ ನಡೆಯಲಿಲ್ಲ. ಒಂದು ವೇಳೆ ಚಿದುವಿನ ಕುತಂತ್ರ ಆಗ ಫಲಿಸಿದ್ದರೆ ಇಂದು ಭಾರತೀಯ ಸಾರ್ವಜನಿಕ ಬ್ಯಾಂಕುಗಳೆಲ್ಲಾ ಅಮೆರಿಕದ ಖಾಸಗಿ ಬ್ಯಾಂಕ್‌ಗಳಂತೆ ಆರ್ಥಿಕ ಹಿಂಜರಿತದ ಹೊಡೆತದಿಂದಾಗಿ ಮುಳುಗಿಹೋಗಿ ದೇಶದ ಆರ್ಥಿಕ ವ್ಯವಸ್ಥೆಯನ್ನೂ ಅಧೋಗತಿಗೆ ದೂಡುತಿತ್ತು.

ಹೊಗಳಿಕೆ ತೆಗಳಿಕೆ

ನಂತರವೂ ಈ ಚಿದಂಬರಂ ಮಾಡಿದ್ದೇನೆಂದರೆ, ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೂ ಮಹಾಭ್ರಷ್ಟರನ್ನೇ ಹುಡುಕಿ-ಹುಡುಕಿ ಅಧ್ಯಕ್ಷರು ಹಾಗೂ ನಿರ್ದೇಶಕರನ್ನಾಗಿ ನೇಮಿಸಿ ಕೋಟ್ಯಂತರ ಕಮಾಯಿಸಿದ್ದು. ಅಷ್ಟೇ ಅಲ್ಲ, ಎಲ್ಲಾ ಬ್ಯಾಂಕ್‌ಗಳೂ ತಮ್ಮ ಸುಂದರವಾದ ಹಳೆಯ ಸೈನ್-ಬೋರ್ಡ್‌ಗಳನ್ನು ವಿನಾಕಾರಣ ಬದಲಾಯಿಸುವಂತೆ ಒತ್ತಡ ಹೇರಿ ಸುಮಾರು 25,000 ಬ್ಯಾಂಕ್ ಶಾಖೆಗಳಿಗೆ ಹೊಸ ಗ್ಲೋ-ಸೈನ್ ಬೋರ್ಡ್‌ಗಳನ್ನು ಒದಗಿಸುವ ಕಾಂಟ್ರಾಕ್ಟ್‌ಗಳನ್ನೆಲ್ಲಾ ತನ್ನ ಅಳಿಯ ಕೇಶವನ್‌ನ ಜಾಹೀರಾತು ಕಂಪನಿಗೇ ಕೊಡಿಸಿದ್ದು. ಒಂದು ಶಾಖೆಗೆ ಎರಡು ಬೋರ್ಡ್, ಒಂದು ಬೋರ್ಡ್‌ಗೆ ರೂ. 35,000 ರೂಪಾಯಿ, ಈ ಲೆಕ್ಕದಲ್ಲಿ 25,000 ಶಾಖೆಗಳ 50,000 ಬೋರ್ಡ್‌ಗಳಿಗೆ ಒಟ್ಟು ಎಷ್ಟು ಹಣವಾಗುತ್ತದೆ ಎಣಿಸಿ. ಒಂದು ಬೋರ್ಡ್‌ನ ಮೂಲ ಬೆಲೆ ಕೇವಲ ರೂ. 8,000. ಅಂದರೆ ಲಾಭ 450%....! ಪಕ್ಕಾ ವ್ಯಾಪಾರಿ ಬುದ್ಧಿಯ, ಕಡು ಭ್ರಷ್ಟ, ಮಹಾ ಬಂಡವಾಳಶಾಹಿ, ಹೃದಯಹೀನ ಮನೋವೃತ್ತಿಯ ಚಿದಂಬರಂ ಭಾರತದಂತಹ ಸಮಾಜವಾದಿ ಆರ್ಥಿಕ ನೀತಿ ಅನುಸರಿಸುವ ದೇಶದ ಗೃಹ ಮಂತ್ರಿ ಪದಕ್ಕೆ ಶುದ್ಧ ಅಯೋಗ್ಯ.

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ಸೆ. 23 ರ ಸಂಚಿಕೆಯಲ್ಲಿ ಮಂಡ್ಯದ ಸಿ.ಪಿ. ಮೂರ್ತಿಯವರ ಪತ್ರಕ್ಕೆ ಪ್ರತಿಕ್ರಿಯಿಸುವಂಥಾದ್ದೇನೂ ಇಲ್ಲ. ಎಲ್ಲಾ ಮೇಲ್ವರ್ಗದವರ ಮಾಮೂಲಿ ಮಾತುಗಳೇ ಅದರಲ್ಲಿ ಪುನರುಚ್ಚರಿಸಲ್ಪಟ್ಟದೆಯಾದರೂ ಕೆಲ ವಿಷಯಗಳನ್ನಿಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಲೋಕಾಭಿರಾಮವಾಗಿ ಮಾತಾಡುವ ತರಹ (ಶೀರ್ಷಿಕೆ ಕೂಡ ಹಾಗೇ ಇದೆ) ಸೆ. 16 ರ ಸಂಚಿಕೆಯಲ್ಲಿ ಗೌರಿಯವರು ಬರೆದ ಸಂಪಾದಕೀಯ ಸಕಾಲಿಕವಾಗೇ ಇದೆ. ಸಾಮಾಜಿಕ ಪ್ರಾಬಲ್ಯದ ಮೂಲಕ ಸಮಾಜದಲ್ಲಿ 'ಹಿಡಿತ'ವನ್ನು ಈ ಬಲಾಢ್ಯರು ಹೊಂದಿದ್ದಾರೆಂಬುದನ್ನು ಉದಾಹರಣೆಗಳ ಮೂಲಕ ವಿವರಿಸಿದ್ದನ್ನೇ ನೆಗೆಟಿವ್ ದೃಷ್ಟಿಕೋನ ಅಂತ ಹೇಳುವುದು ಅವರ ಸೀಮಿತ ಯೋಚನೆಯನ್ನಷ್ಟೇ ತೋರಿಸುತ್ತದೆ.

ಪತ್ರದಲ್ಲಿ ಮೂರ್ತಿಯವರು "ಮುಂದುವರಿಕೆಗೆ ಕೇವಲ ದೈಹಿಕ ಬಲವಿದ್ದಷ್ಟೇ ಸಾಲದು ಜ್ಞಾನಭಂಡಾರವೂ ಬೇಕು" ಎಂದು ಒಂದು ವರ್ಗವನ್ನ ಹೀಯಾಳಿಸಿದ್ದಾರೆ. ಆದರೆ ಇದೇ ವರ್ಗದ ದೈಹಿಕ ಬಲದ ಜೀತದಾಳುತನದ ಕಾರಣಕ್ಕೇ ಉಳಿದವರ ಹೊಟ್ಟೆ ಜೊತೆಗೆ ಜ್ಞಾನ ಭಂಡಾರವೂ ವೃದ್ಧಿಗೊಂಡಿತ್ತೆಂಬುದನ್ನು ಮರೆಯಲಾದೀತೆ? ಅದೇ ರೀತಿ ಮುಂದುವರೆದು "ಇಂದು ಸರ್ಕಾರಿ ವ್ಯವಸ್ಥೆಯ ಎಲ್ಲಾ ದೋಷಗಳಿಗೂ ಮೀಸಲಾತಿ ನೀತಿಯೇ ಹೊಣೆ" ಎಂದಿದ್ದಾರೆ.

ಹೌದಪ್ಪ! ಹೆಚ್ಚು ಹಣದ, ಹೆಚ್ಚು ಗೌರವದ (States, abroad, foreign ಅನ್ನೋದು ಗೌರವದ ಸಂಕೇತವಾಗಿದೆ) ಆಸೆಗಾಗಿ ವಿದೇಶಕ್ಕೆ ಹೋದರೂ, ಈ brain, drainಗೆ ಮೀಸಲಾತಿಯೇ ಕಾರಣ (ದೇಶದ ಉನ್ನತ ಹುದ್ದೆಗಳಲ್ಲಿ ಅವರೇ ತುಂಬಿದ್ದರೂ ಕೂಡ) ಎನ್ನುವವರ ಹಾಗು ಮೂಲತಃ ಭ್ರಷ್ಟಾಚಾರದ ಕಾರಣಕ್ಕೆ ಸರಕಾರೀ ವ್ಯವಸ್ಥೆ ಕುಲಗೆಟ್ಟಿದ್ದಕ್ಕೂ ಮೀಸಲಾತಿಯನ್ನೇ ದೂರುವವರ ಬಗ್ಗೆ ಬೇರೇನೂ ಹೇಳಲು ಇಲ್ಲ ಬಿಡಿ.

ಇನ್ನು ಪ್ರಾಬಲ್ಯದ ಬಗ್ಗೆ ಹೇಳುವುದಾದರೆ ಮೂಲತಃ ಬನಿಯಾ (ವಾಣಿಜ್ಯ ಎಂಬ ಪದದಿಂದ ಬಂದ ಹೆಸರು; ಬನಿಯಾ ಜಾತಿಗೆ ಸೇರಿದ ಗಾಂಧೀಜಿಯ ಹಿಂದಿನವರು ಗಂಧಕದ ವ್ಯಾಪಾರಿಗಳಾಗಿದ್ದರಂತೆ) ವೈಶ್ಯರ ಪಂಗಡಕ್ಕೆ ಸೇರಿದ್ದರೂ ದುಡ್ಡುಕಾಸಿನ ಸಿರಿವಂತಿಕೆಯಿಂದಾಗಿ ಸಮಾಜದಲ್ಲಿ ಅವರ 'ದೊಡ್ಡಪ್ಪ' ತನಕ್ಕೇನೂ ತೊಂದರೆಯಾಗಲಿಲ್ಲ. ಆದರೆ ಹುಟ್ಟುತ್ತಲೇ ಸಾಮಾಜಿಕವಾಗಿ 'ದೊಡ್ಡಜನ'ರಾಗೇ ಹುಟ್ಟುವ ಬ್ರಾಹ್ಮಣರ ದೊಡ್ಡತನ ಪ್ರಶ್ನಾತೀತವಾದುದು. ವಿವರಿಸ ಹೊರಟರೆ ಬೇಕಷ್ಟಿದೆಯಾದರೂ ಶ್ರೀಯುತ ಮೂರ್ತಿಯವರೇ ಹೇಳಿದ ಹೋಟೆಲ್ ಉದ್ಯಮವನ್ನೇ ತೆಗೆದುಕೊಂಡರೆ, (ಎಲ್ಲಕ್ಕೂ ಶಾಸ್ತ್ರಗಳನ್ನು ಉಲ್ಲೇಖಿಸುವ ಬ್ರಾಹ್ಮಣರು ಶಾಸ್ತ್ರಗಳ ಪ್ರಕಾರ ಅನ್ನವನ್ನು ಮಾರುವಂತಿಲ್ಲ-ಅದು ಮಹಾಪಾಪ) ಬ್ರಾಹ್ಮಣರ ಊಟದ ಹೋಟೆಲ್, ಲಿಂಗಾಯತರ ಖಾನಾವಳಿ ರೀತಿಯೇ ಮೂರ್ತಿಯವರ "ನಿಷ್ಠೆ, ಪ್ರಾಮಾಣಿಕತೆ, ಆದರ್ಶ"ವನ್ನೇ ನಂಬಿಕೊಂಡು ಒಬ್ಬ ತನ್ನ ಹರಿಜನ ಖಾನಾವಳಿಯನ್ನು ತೆರೆದರೆ (ಮೂಲತಃ ಬ್ರಾಹ್ಮಣರ ಹೋಟೆಲ್‌ನಲ್ಲಿ ಕೆಲಸಕ್ಕಿರುವವರು ಅಬ್ರಾಹ್ಮಣರೇ ಆದರೂ) ಆತ ಬದುಕಬಲ್ಲನೇ ಎಂಬುದನ್ನು ಮೂರ್ತಿಯವರು ವಿಶ್ಲೇಷಿಸಿದರಷ್ಟೇ ಈ ದೈಹಿಕಬ[...] ಜ್ಞಾನ ಭಂಡಾರದ ಜತೆ ಜಾತಿ 'ಬಲ'ವೂ ಎಷ್ಟರಮಟ್ಟಿ[...] ಬೇಕೆಂಬುದು ಗೊತ್ತಾಗುತ್ತದೆ. ಇನ್ನು ಹೋರಾಟ[...] (ಕೇವಲ ದೊಣ್ಣೆ ಕತ್ತಿಗಳ ಬಡಿದಾಟವಷ್ಟೇ ಹೋರಾಟವ[...] ಬಗ್ಗೆ ಮೂರ್ತಿಯವರು ಆಕ್ಷೇಪಿಸಿದ್ದಾರೆ. ಜಾತೀಯತೆಯ[...] ಕಾರಣ ಸ್ವಾಮಿ ವಿವೇಕಾನಂದರಿಂದ Lunatic asylu[...] ಎಂದು ಕರೆಸಿಕೊಂಡ ಕೇರಳದಿಂದ ಬಂದ ಶ್ರೀನಾರಾಯಣ[...] ಗುರುಗಳು (ಪಾಪ, ಎಲ್ಲೆಡೆ ಇವರನ್ನ ಧ್ಯಾನಾಸಕ್ತ ಜಡಭಂ[...] ಯಲ್ಲೇ ಚಿತ್ರಿಸುತ್ತಾರೆ. ವಾಸ್ತವವಾಗಿ ಕ್ರಿಯಾಶೀ[...] ಚಟುವಟಿಕೆಯ ಚೈತನ್ಯದ ಚಿಲುಮೆಯಾಗಿದ್ದರಿಂದಲೇ[...] ಅಂದು ಹೀನಾಯವಾಗಿ ಬದುಕುತ್ತಿದ್ದ ಬಿಲ್ಲವರಿಗೊಂದ[...] ಸಾಮಾಜಿಕ ನೆಲೆ ದೊರಕುವಂತಾಯ್ತು, ಬರೀ ಧ್ಯಾನ[...] ಕೂತಿದ್ದರೆ ಯಾವನೂ ಉದ್ಧಾರವಾಗುತ್ತಿರಲಿಲ್ಲ) ಎಲ್ಲವನ್ನ[...] ಎಲ್ಲರನ್ನು ಎದುರಿಸಿ ಎಲ್ಲೆಡೆ ಸಂಚರಿಸಿ ತುಳಿತಕ್ಕೊಳಗಾ[...] ತಮ್ಮ ಸಮಾಜದ ಬದುಕಿಗೊಂದು ಹೊಸ ತಿರುವನ್ನ[...] ನೀಡಿದರು. ಶೋಷಕರು ಇರುವ ತನಕ 'ಹೋರಾಟ[...] ಯಾವ ರೂಪದ್ದೇ ಇರಲಿ ಅದು ಇದ್ದೇ ಇರುತ್ತದ[...] ಮೂರ್ತಿಯವರೆ, ಅದನ್ನೇನೂ ಮಾಡಲಾಗದು.

ಹೋರಾಟಗಳೂ ಬೇಕು. ಸಾಮಾಜಿಕ ಅರಿವ[...] ಬೇಕು. ಇದರ ಜತೆಗೆ ತಮ್ಮ ಸುಳ್ಳು ಸಿದ್ಧಾಂತಗಳನ್[...] ಹಬ್ಬಿಸಿ ಜನರ ದಿಕ್ಕು ತಪ್ಪಿಸುವವರನ್ನ ಎಚ್ಚರಿಸಲು ನಿಜಸ್ಥಿ[...] ತಿಳಿಸುವಂತಹ ಲೇಖನಗಳೂ ಬೇಕಲ್ಲವೇ. ಅದನ್ನೆ[...] ಗೌರಿಯವರು ಮಾಡಿದ್ದಾರಷ್ಟೇ.

-ರವಿ ಪುತ್ತೂರು, ದಕ್ಷಿಣ ಕನ್ನ[...]

ಕಳೆದ ಸಂಚಿಕೆಯಲ್ಲಿ ತಾವು ವೈದ್ಯರ ಮುಷ್ಕರದ ಕುರಿತು ಬರೆಯುತ್ತ ಸರ್ಕಾರಿ ವೈದ್ಯರ ಕಷ್ಟಕಾರ್ಪಣ್ಯಗಳನ್ನು ವಿವರಿಸಿದ್ದೀರಿ. ಸರ್ಕಾರಿ ವೈದ್ಯರ ಬಗ್ಗೆ ತಾವು ತೋರಿದ ಕಾಳಜಿಗೆ ಥ್ಯಾಂಕ್ಸ್.

ಆದರೆ ಇನ್ನೊಂದು ಅಂಶ ಲೇಖನದಲ್ಲಿ ಬಿಟ್ಟು ಹೋಗಿದೆ. ಈಗ ಮುಷ್ಕರದಲ್ಲಿ ಭಾಗವಹಿಸುತ್ತಿರುವವರು ಕೇವಲ ಆಲೋಪಥಿಕ್ (ಆಂಗ್ಲ ಪದ್ಧತಿ) ವೈದ್ಯರು ಮಾತ್ರ. ಆದರೆ AYUSH (ಆಯುರ್ವೇದಿಕ್, ಯೋಗ, ಯುನಾನಿ, ಸಿದ್ಧ, ಹೋಮಿಯೋಪತಿ) ವೈದ್ಯರ ಸಮಸ್ಯೆಗಳು ಹಲವಾರಿವೆ. ರಾಜ್ಯದಲ್ಲಿ ಒಟ್ಟು 800 ಕ್ಕೂ ಹೆಚ್ಚು ಸರ್ಕಾರಿ ಆಯುಷ್ ವೈದ್ಯರಿದ್ದು ಗ್ರಾಮೀಣ ಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆಲೋಪಥಿ ಗುತ್ತಿಗೆ ವೈದ್ಯರಿಗೆ ಮಾಸಿಕ 18 ಸಾವಿರ ರೂಪಾಯಿ ಸಂಬಳವಿದ್ದರೆ ಆಯುಷ್ ವೈದ್ಯರಿಗೆ ಕೇವಲ 11,300 ರೂ. ಮಾತ್ರ. ಈಗ ಸರ್ಕಾರ ಪ್ರಕಟಿಸಿರುವ ವೇತನ ಹೆಚ್ಚಳ, ಉದ್ಯೋಗ ಖಾಯಮಾತಿಗಳು ಕೇವಲ ಆಲೋಪಥಿಕ್ ವೈದ್ಯರಿಗೆ ಸಂಬಂಧಿಸಿವೆ. ಆಯುಷ್ ವೈದ್ಯರ ಗೋಳು ಕೇಳುವವರೇ ಇಲ್ಲ.

ನಮ್ಮ ಈ ಸಮಸ್ಯೆಯನ್ನು ಸರ್ಕಾರದ ಕಿವಿಗೆ ಹಾಕುವಿರಿ ಎಂಬ ನಂಬಿಕೆಯಿಂದ ಈ ಪತ್ರ ಬರೆದಿರುವೆ.

-ಓರ್ವ ಆಯುಷ್ ವೈದ್ಯ[...]

...ಶ್ವದಾಖಲೆಗೆ ಹೊರಟಿರುವ ಸುಗ್ರೀವ

...ಜಿ ನಿರ್ಮಿಸುತ್ತಿರುವ ...ದ ಹೆಸರು 'ಸುಗ್ರೀವ'. ...ರಾಜ್‌ಕುಮಾರ್ ಈ ...ದ ನಾಯಕ ನಟ. ಇದು ...ಯಾಳಂ ಚಿತ್ರದ ...ಕ್. ಈ ಚಿತ್ರ ...ಬರ್ 11ರಂದು ...ಗ್ಗೆ ಸೆಟ್ಟೇರಿ ನಡುರಾತ್ರಿ ...ಗಂಟೆಗೆ ...ರ್ಣಗೊಳ್ಳಲಿದೆ. ...ವೊಂದನ್ನು 18 ...ಗಳಲ್ಲಿ ಮುಗಿಸುವುದು ...ಮಾನ್ಯ ಕೆಲಸವಲ್ಲ.




ಅಲ್ಲೂ ಶಿವಣ್ಣ... ಇಲ್ಲೂ ಶಿವಣ್ಣ....

ಈಗ ಪ್ರಯೋಗಗಳ ಮತ್ತು ವಿಶ್ವದಾಖಲೆಯ ಗೀಳು ಕನ್ನಡ ಚಿತ್ರರಂಗದ ಎಲ್ಲರಿಗೂ ಹತ್ತಿರುವಂತಿದೆ. ಅತ್ತ ಅಣಜಿ ನಾಗರಾಜ್ 'ಸುಗ್ರೀವ'ನ ಮುಖಾಂತರ ವಿಶ್ವದಾಖಲೆ ಮಾಡಲು ಹೊರಟಿದ್ದರೆ, ಇತ್ತ ಮೊದಲ ಬಾರಿ ಚಿತ್ರ ನಿರ್ದೇಶಿಸುತ್ತಿರುವ ರಘುರಾಮ್ 'ಚೆಲುವೆಯೇ ನಿನ್ನ ನೋಡಲು' ಎಂಬ ಚಿತ್ರವನ್ನು ವಿಶ್ವದ ಹೊಸ ಎಂಟು ಅದ್ಭುತಗಳಲ್ಲಿ ಚಿತ್ರೀಕರಿಸುವ ಮೂಲಕ ಮತ್ತೊಂದು ದಾಖಲೆ ಮಾಡಲು ಹೊರಟಿದ್ದಾರೆ.

ಈಗಾಗಲೇ ಅದರ ಬಹುತೇಕ ಚಿತ್ರೀಕರಣ ಮುಗಿದಿದ್ದರೂ ಚೀನಾದ ಮಹಾಗೋಡೆಯಲ್ಲಿ ಮಾತ್ರ ಚಿತ್ರೀಕರಿಸಲು ಸಾಧ್ಯವಾಗಿಲ್ಲವಂತೆ. ಚೀನಾ ಸರ್ಕಾರದ ವೀಸಾ ಧೋರಣೆಯಿಂದ ಈ ಸಮಸ್ಯೆ ಎದುರಾಗಿತ್ತು. ಆದರೀಗ ಆ ಸಮಸ್ಯೆ ಬಗೆಹರಿದಿದೆ. ಚಿತ್ರದಲ್ಲಿ ಕೇವಲ 23 ಸೆಕೆಂಡ್ ಮೂಡಿಬರಲಿರುವ ಆ ದೃಶ್ಯಗಳ ಚಿತ್ರೀಕರಣಕ್ಕಾಗಿ ಇದೀಗ 'ಚೆಲುವೇ..' ತಂಡ ಚೀನಾಕ್ಕೆ ಹೊರಟಿದೆ. ಆ ಒಂದು ದೃಶ್ಯಕ್ಕಾಗಿ ನಿರ್ಮಾಪಕ ಎಸ್.ಎಂ. ಸುರೇಶ್ 22 ಲಕ್ಷ ರೂಪಾಯಿ ವೆಚ್ಚ ಮಾಡಲಿದ್ದಾರಂತೆ. ಅಂದರೆ, ಒಂದು ದಾಖಲೆಗಾಗಿ ಕನ್ನಡಿಗರು ಎಷ್ಟು ಶ್ರಮ ಪಡುತ್ತಿದ್ದಾರೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು.

ವಿಶೇಷವೆಂದರೆ, ಒಂದೇ ದಿನದಲ್ಲಿ ಮುಗಿಯಲಿರುವ 'ಸುಗ್ರೀವ' ಮತ್ತು ಕಳೆದ ಒಂದು ವರ್ಷದಿಂದ ವಿಶ್ವದೆಲ್ಲೆಡೆ ಚಿತ್ರೀಕರಣಗೊಳ್ಳುತ್ತಿರುವ 'ಚೆಲುವೆಯೇ ನಿನ್ನ ನೋಡಲು' ಇವೆರಡೂ ಚಿತ್ರಗಳ ನಾಯಕನಟ ಶಿವರಾಜ್‌ಕುಮಾರ್. ಅಂದರೆ ಅಲ್ಲೂ, ಇಲ್ಲೂ ಎಲ್ಲೆಲ್ಲೂ ಸಲ್ಲುವ ನಾಯಕನಟನಾಗಿ ಶಿವರಾಜ್ ಕುಮಾರ್ ರೂಪುಗೊಳ್ಳುತ್ತಿದ್ದು ನಿರ್ಮಾಪಕರಿಗೆ ಸುಲಭವಾಗಿ ಸಿಗುತ್ತಿದ್ದಾರೆ. ಒಂದು ದಿನದ ಚಿತ್ರವಾದರೂ ಸೈ, ಒಂದು ವರ್ಷದ ಚಿತ್ರವಾದರೂ ಸೈ ಎನ್ನುವ ಶಿವರಾಜ್‌ಕುಮಾರ್ ಅವರಂತಹ ಮನೋಭಾವ ಉಳಿದ ನಾಯಕ ನಟರುಗಳಿಗೂ ಬಂದರೆ ಕನ್ನಡ ಚಿತ್ರರಂಗದಲ್ಲಿ ಇಂತಹ ಅನೇಕ ಪ್ರಯೋಗಾತ್ಮಕ, ಸಾಹಸಾತ್ಮಕ ಚಿತ್ರಗಳು ಬರಲು ಸಾಧ್ಯ ಅಲ್ಲವೇ?

...ರ್ಮಾಪಕ ಅಣಜಿ ನಾಗರಾಜ್ 18 ...ಲ್ಲಿ ಚಿತ್ರವೊಂದನ್ನು ಚಿತ್ರೀಕರಿಸಿ ತಮ್ಮ ... ಗಿನ್ನೆಸ್ ಪುಸ್ತಕದಲ್ಲಿ ದಾಖಲಿಸಲು ...ದ್ದಾರೆ. ಹಾಗೆ ನೋಡಿದರೆ, ಇಂತಹ ... ಕನ್ನಡ ಚಿತ್ರರಂಗಕ್ಕೆ ಹೊಸತಲ್ಲ, ಬಹಳ ... ದಿನೇಶ್ ಬಾಬು 48 ಗಂಟೆಗಳಲ್ಲಿ ...ಾಧ್ಯ' ಎಂಬ ಚಿತ್ರವನ್ನು ನಿರ್ದೇಶಿಸಿ ...ನಿರ್ಮಿಸಿದ್ದರು. ಆನಂತರ ... ಕ್ಯಾಸ್ಟಲಿನೋ 'ಸೆಪ್ಟೆಂಬರ್ ...' ಎಂಬ ತುಳು ಚಿತ್ರವನ್ನು ...24 ಗಂಟೆಗಳಲ್ಲಿ ನಿರ್ಮಿಸಿದ ...ಪಾತ್ರರಾಗಿದ್ದರು. ಇದೀಗ ...ಹಾದಿಯಲ್ಲಿ ಅಣಜಿ ನಾಗರಾಜ್ ...ದ್ದಾರಷ್ಟೇ.



ಅಣಜಿ ನಾಗರಾಜ್

... ದಿನದ ಚಿತ್ರ

...ಜಿ ನಿರ್ಮಿಸುತ್ತಿರುವ ಚಿತ್ರದ ...'ಸುಗ್ರೀವ'. ಶಿವರಾಜ್‌ಕುಮಾರ್ ಈ ...ನಾಯಕ ನಟ. ಇದು ಮಲಯಾಳಂ ಚಿತ್ರದ ... ಈ ಚಿತ್ರ ಬರುವ ಅಕ್ಟೋಬರ್ ... ಬೆಳಗ್ಗೆ ಸೆಟ್ಟೇರಿ ನಡುರಾತ್ರಿ 11 ಗಂಟೆಗೆ ...ಗೊಳ್ಳಲಿದೆ. ಚಿತ್ರವೊಂದನ್ನು 18 ...ಲ್ಲಿ ಮುಗಿಸುವುದು ಸಾಮಾನ್ಯ ಕೆಲಸವಲ್ಲ. ..., ಇದನ್ನು ಅವಸರದಲ್ಲಿ ...ಾಗುತ್ತಿರುವ ಚಿತ್ರವೆಂದೋ, ಅಥವಾ ...ೋ ಬಜೆಟ್ ಚಿತ್ರವೆಂದೋ ಭಾವಿಸುವ ...

...ಹ ಚಿತ್ರವನ್ನು ನಿರ್ಮಿಸುವಾಗ ಮುಖ್ಯವಾಗಿ ...ಬೇಕಾದದ್ದು ಅದರ ನಿರ್ಮಾಪಕ ಮತ್ತು ...ನ ಪೂರ್ವಭಾವಿ ಸಿದ್ಧತೆಯನ್ನು, ಚಿತ್ರೀಕರಣ ...ಗಳಲ್ಲಿ ಸಂಪೂರ್ಣಗೊಂಡರೂ ಅದಕ್ಕೆ ಬೇಕಾದ ...ವನ್ನು ಕಳೆದ ಆರು ತಿಂಗಳುಗಳಿಂದ ಅಣಜಿ ...ಜ್ ಮತ್ತು ನಿರ್ದೇಶಕ ಪ್ರಶಾಂತ್ ...ಂಡಿದ್ದಾರೆ. ಅವರ ಪ್ಲಾನ್ ಪ್ರಕಾರ ಎಲ್ಲವೂ ...ಕ್ಕಾಗಿ ನಡೆದರೆ ನಿಗದಿತ ಸಮಯದೊಳಗೆ ...ಲ್ಲಿ ಆತಂಕವಿಲ್ಲದೆ ಚಿತ್ರೀಕರಣ ಮುಗಿಯುತ್ತದೆ. ... ಇನ್ನೊಂದು ವಿಶೇಷವೆಂದರೆ, ಚಿತ್ರದ ಶೇ. 80ರಷ್ಟು ಭಾಗ [illegible] ನಾಯಕನಟ ಶಿವರಾಜ್ [illegible] ...ಕಾಣಿಸಿಕೊಳ್ಳುತ್ತಿದ್ದಾರೆ. ಇಂತಹ ಪ್ರಯೋಗಾತ್ಮಕ ...ಸಾಹಸಮಯ ಚಿತ್ರಕಥೆ ನಿರ್ಮಿಸುವಾಗ ...ವಾಗಿ ಒಂದು ಕಾಮಿಡಿ ಟ್ರ್ಯಾಕ್, ಇನ್ನೊಂದು ..., ಹೀಗೆ ಬೇರೆಬೇರೆ ಮಜಲುಗಳನ್ನು ... ಹುದುಗಿಸಿರುತ್ತಾರೆ. ಆ ಮೂಲಕ ನಾಯಕ ...ನಟನ ಚಿತ್ರದ ಶೇ. 40ರಿಂದ 50ರಷ್ಟರಲ್ಲಿ ...ಮಾತ್ರ ಕಾಣಿಸಿಕೊಳ್ಳುತ್ತಾರೆ. ಆದರೆ 'ಸುಗ್ರೀವ' ...ನಿಗೆ ಒಂದು ಅಪವಾದ.

ಎನರ್ಜಿ ಸ್ಟಾರ್ ಶಿವಣ್ಣ

ಈ ಚಿತ್ರವನ್ನು ಹತ್ತು ನಿರ್ದೇಶಕರು ಮತ್ತು ಹತ್ತು ಕ್ಯಾಮೆರಾಮನ್‌ಗಳು ಒಂದೇ ಸಮಯದಲ್ಲಿ ಸೆರೆ ಹಿಡಿಯುತ್ತಿದ್ದರೂ ಅವರೆಲ್ಲರ ಮುಂದೆ ನಟಿಸುತ್ತಿರುವುದು ನಟ ಶಿವರಾಜ್‌ಕುಮಾರ್. ಒಬ್ಬ ನಾಯಕನಟ 18 ಗಂಟೆಗಳ ಕಾಲ ನಿರಂತರವಾಗಿ ಕ್ಯಾಮೆರಾವನ್ನು ಎದುರಿಸುವುದು ಸುಲಭದ ಕೆಲಸವಲ್ಲ, ಬಹುಶಃ ಶಿವಣ್ಣನಿಗೆ ಅವರ ಅನುಭವ ಮತ್ತು ಚುರುಕುತನ ಇಲ್ಲಿ ಸಹಾಯ ಮಾಡಲಿದೆ. ಅಷ್ಟೊಂದು ನಿರ್ದೇಶಕರು ಮತ್ತು ಕ್ಯಾಮೆರಾಗಳ ಮುಂದೆ ಒಬ್ಬನೇ ನಾಯಕನಟ ಜೊತೆ ಕೆಲಸ ಮಾಡುವುದು ಆತನ ಎನರ್ಜಿ ಲೆವೆಲ್ ಅನ್ನು ಸೂಚಿಸುತ್ತದೆ. ಹೀಗಾಗಿ ಶಿವರಾಜ್‌ಕುಮಾರ್ ಅವರನ್ನು ಇನ್ನು ಮುಂದೆ ಅವರ ಅಭಿಮಾನಿಗಳು 'ಎನರ್ಜಿ ಸ್ಟಾರ್' ಎಂದು ಕರೆದರೂ ಆಶ್ಚರ್ಯವಿಲ್ಲ.

ಅಣಜಿಗೆ ಉದ್ಯಮದ ಸಾಥ್

ಇಂತಹ ಚಿತ್ರ ತಯಾರಾಗಬೇಕಾದರೆ ಅದಕ್ಕೆ ಆ ಚಿತ್ರೋದ್ಯಮದಿಂದ ಅಪಾರ ನೆರವೂ ಬೇಕಾಗುತ್ತದೆ. ಉದಾಹರಣೆಗೆ ಹತ್ತು ಜನ ನಿರ್ದೇಶಕರು, ಹತ್ತು ಕ್ಯಾಮೆರಾಮನ್‌ಗಳು, ಹತ್ತು ಜನರೇಟರ್‌ಗಳು ಮತ್ತು ದೊಡ್ಡ ತಂಡದ ಸಹಕಾರ ಇದ್ದೇಇರಬೇಕು. ಅಣಜಿ ನಾಗರಾಜ್ ಅವರು ಸ್ನೇಹಜೀವಿಯಾದ್ದರಿಂದ ಅವರಿಗೆ ಎಲ್ಲರ ಬೆಂಬಲ ಸಿಕ್ಕಿದೆ. ಈ ನಿಟ್ಟಿನಲ್ಲಿ ಅಣಜಿ ಕನಸಿಗೆ ಹೆಗಲು ಕೊಡುತ್ತಿರುವ ತಂತ್ರಜ್ಞರನ್ನೂ, ನಿರ್ದೇಶಕರನ್ನೂ ಅಭಿನಂದಿಸಬೇಕು. ಯಾಕೆಂದರೆ, ಅವಕಾಶ ಸಿಕ್ಕರೆ ಇತರರ ಕಾಲೆಳೆಯುವುದಕ್ಕೇ ಹೆಸರುವಾಸಿಯಾದ ಕನ್ನಡ ಚಿತ್ರರಂಗದಲ್ಲಿ ಇಂತಹ ಸಾಹಸಕ್ಕೆ ಹೆಗಲುಕೊಡುವ ಜನರೂ ಇದ್ದಾರೆಂಬುದು ಸಂತಸದ ವಿಚಾರವೇ ಸರಿ.

ನಿರ್ಮಾಪಕ ಅಣಜಿಯವರ ಈ ಸಾಹಸ ದೊಂದಿಗೆ ಕಾರ್ಮಿಕ ಒಕ್ಕೂಟದ ಸದಸ್ಯರೂ ಜೊತೆಗೂಡಿಸಿರುವುದು ಮೆಚ್ಚುವಂತಹದ್ದು. ಸಾಧಾರಣವಾಗಿ ಎರಡನೇ ಭಾನುವಾರ ಯಾವ ಕಾರಣಕ್ಕೂ ಕಾರ್ಮಿಕರು ಕೆಲಸಕ್ಕೆ [illegible]ರಾಗುವುದಿಲ್ಲ, [illegible] ಈ [illegible] ಅನೇಕ [illegible] ದೊಡ್ಡ ನಿರ್ಮಾಪಕರ ಸೆಕೆಂಡ್ ಸಂಡೇ ಶೂಟಿಂಗ್‌ನ ಆಹ್ವಾನವನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದ ಉದಾಹರಣೆಗಳಿವೆ. ಆದರೆ ಈ ಬಾರಿ ಅಣಜಿ ಮನವಿಗೆ ಓಗೊಟ್ಟು ಕಾರ್ಮಿಕರು ಕೂಡಾ ಎರಡನೇ ಭಾನುವಾರದ ರಜಾ ದಿನದಂದೂ ಕೆಲಸ ಮಾಡಲು ಒಪ್ಪಿ 'ಸುಗ್ರೀವ'ನ ಗಿನ್ನಿಸ್ ದಾಖಲೆಗೆ ತಮ್ಮ ಕಿರುಕಾಣಿಕೆಯನ್ನು ಸಲ್ಲಿಸುತ್ತಿದ್ದಾರೆ.

ಮೇಕಿಂಗ್ ಆಫ್ ಸುಗ್ರೀವ

ಈ ಚಿತ್ರವನ್ನು ಅಣಜಿ ನಾಗರಾಜ್ ಮತ್ತು ನಿರ್ದೇಶಕ ಪ್ರಶಾಂತ್ ಬಹಳ ಜಾಣತನದಿಂದ ರೂಪಿಸುತ್ತಿದ್ದಾರೆ. ಉದಾಹರಣೆಗೆ, ಪ್ರೇಕ್ಷಕರಿಗೆ ಬೋರಾಗದಂತೆ ವಿವಿಧ ಲೊಕೇಶನ್‌ಗಳನ್ನು ಆಯ್ಕೆ ಮಾಡಿದ್ದಾರೆ. ಆದರೆ ಟ್ರಾಫಿಕ್ ಜಾಮ್‌ಗೆ ಹೆಸರಾಗಿರುವ ಬೆಂಗಳೂರಿನಂತಹ ಜನನಿಬಿಡ ನಗರದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಶಿಫ್ಟ್ ಆಗಲು ಬಹಳಷ್ಟು ಸಮಯ ಹಿಡಿಯುವುದರಿಂದ ಅಣಜಿ ನಾಗರಾಜ್ ರಾಜರಾಜೇಶ್ವರಿ ನಗರದಲ್ಲಿ ಸೆಟ್‌ಗಳನ್ನು ನಿರ್ಮಿಸಿದ್ದಾರೆ. ಅಂದರೆ, ಇಡೀ ಚಿತ್ರ ರಾಜರಾಜೇಶ್ವರಿ ನಗರದ ಸುತ್ತಮುತ್ತಲಿನಲ್ಲೇ ಮುಗಿಯುತ್ತದೆ; ಆದರೂ ನೋಡುಗರಿಗೆ ಮಾತ್ರ ಬೇರೆ ಬೇರೆ ಪ್ರದೇಶಗಳಲ್ಲಿ ಚಿತ್ರಿಸಿದಂತೆ ಭಾಸವಾಗುತ್ತದೆ. ಈ ಸೆಟ್‌ಗಳ ಜವಾಬ್ದಾರಿಯನ್ನು ಕಲಾ ನಿರ್ದೇಶಕ ಇಸ್ಮಾಯಿಲ್ ವಹಿಸಿಕೊಂಡಿದ್ದಾರೆ.

'ಸುಗ್ರೀವ' ಗೆಲ್ತಾನಾ?

ಒಂದು ಮಾತಂತೂ ಸತ್ಯ. ಚಿತ್ರ ಎಷ್ಟು ದಿನಗಳಲ್ಲಿ ನಿರ್ಮಾಣಗೊಂಡಿದೆ, ಚಿತ್ರ ನಿರ್ಮಾಣಗೊಳ್ಳಲು ಎಷ್ಟು ವರ್ಷಗಳು ಬೇಕಾದವು ಎಂಬಿತ್ಯಾದಿ ವಿಷಯಗಳು ಹಣ ಕೊಟ್ಟು ನೋಡುವ ಪ್ರೇಕ್ಷಕನಿಗೆ ಮುಖ್ಯವಾಗುವುದೇ ಇಲ್ಲ, ಯಾಕೆಂದರೆ, ವರ್ಷಾನುಗಟ್ಟಲೆ ಚಿತ್ರೀಕರಣಗೊಂಡ ರವಿಚಂದ್ರನ್ ಅವರ 'ಶಾಂತಿಕ್ರಾಂತಿ'ಯಂಥ ಅದ್ದೂರಿ ಚಿತ್ರವನ್ನೇ ಪ್ರೇಕ್ಷಕ ಮೊದಲ ವಾರಕ್ಕೆ ತಿರಸ್ಕರಿಸಿದ್ದ. ಆದರೆ ಅದೇ ರವಿಚಂದ್ರನ್ 18 ದಿನಗಳಲ್ಲಿ ಮುಗಿಸಿದ 'ರಾಮಾಚಾರಿ' ಚಿತ್ರಕ್ಕೆ ಇಪ್ಪತ್ತೈದು ವಾರಗಳ ರಜತ ಮಹೋತ್ಸವ ಗೌರವವನ್ನೂ ಅದೇ ಪ್ರೇಕ್ಷಕ ನೀಡಿದ್ದ. ಇಂತಹ ಹಲವಾರು ಉದಾಹರಣೆಗಳು ಚಿತ್ರರಂಗದ ಇತಿಹಾಸದಲ್ಲಿ ಸಿಗುವುದರಿಂದ 'ಸುಗ್ರೀವ' ಗೆಲ್ಲುತ್ತಾನೋ, ಸೋಲುತ್ತಾನೋ ಎಂದು ಈಗಲೇ ಹೇಳಲು ಸಾಧ್ಯವಿಲ್ಲ, ಆದರೆ ಈ ಒಂದು ಪ್ರಯತ್ನ ಮತ್ತು ಸಾಹಸವನ್ನು ಮೆಚ್ಚಬಹುದೇ ವಿನಃ ಇದು ಕನ್ನಡ ಚಿತ್ರರಂಗದ ದುಸ್ಥಿತಿಯ ದಿಕ್ಕನ್ನು ಬದಲಾಯಿಸಬಹುದು ಎಂದು ಹೇಳಲು ಸಾಧ್ಯವೇ ಇಲ್ಲ.

ಏನೇ ಆಗಲಿ ನಮ್ಮ ಕನ್ನಡದ 'ಸುಗ್ರೀವ' ವಿಶ್ವ ದಾಖಲೆಯತ್ತ ಕಾಲಿಟ್ಟಿರುವುದು ಸಂತೋಷದ ವಿಷಯ.



ಪ್ರಶಾಂತ್

'ಸುಗ್ರೀವ' ಚಿತ್ರದ ನಿರ್ದೇಶಕ ಪ್ರಶಾಂತ್ ಮಲಯಾಳಂನಲ್ಲಿ ಇದೇ ಚಿತ್ರವನ್ನು 19 ಗಂಟೆಗಳಲ್ಲಿ ನಿರ್ಮಿಸಿ ದಾಖಲೆ ಮಾಡಿದ್ದರು. ಈಗ ಅದನ್ನೇ ಕನ್ನಡದಲ್ಲಿ 18 ಗಂಟೆಗಳಲ್ಲಿ ನಿರ್ಮಿಸುವ ಮುಖಾಂತರ ತಮ್ಮ ದಾಖಲೆಯನ್ನು ತಾವೇ ಮುರಿಯಲು ಹೊರಟಿದ್ದಾರೆ. ಅಂದು 'ಇದು ಸಾಧ್ಯ' ಚಿತ್ರ ಮಾಡಿದ್ದ ಮಲಯಾಳಂನಿಂದ ಆಗಷ್ಟೇ ಕನ್ನಡಕ್ಕೆ ಬಂದಿದ್ದ ದಿನೇಶ್ ಬಾಬು ಸುದ್ದಿ ಮಾಡಿದರು. ಇದೀಗ ಅದೇ ಕೇರಳದ ಪ್ರಶಾಂತ್ ಕನ್ನಡದಲ್ಲಿ ಸುದ್ದಿ ಮಾಡುತ್ತಾ ಸ್ಯಾಂಡಲ್‌ವುಡ್‌ಗೆ ಕಾಲಿಡುತ್ತಿದ್ದಾರೆ.


'ಸೇವಕ'ನಾದ ರಮೇಶ್ ಕಿಟ್ಟಿ

ಇತ್ತೀಚೆಗಷ್ಟೇ ಕಣ್ಮರೆಯಾದ ರಾಜ್ ಕಿಶೋರ್ ಅವರ ಸಹೋದರ ರಮೇಶ್ ಕಿಟ್ಟಿ ಮತ್ತೆ ಚಿತ್ರ ನಿರ್ದೇಶನಕ್ಕೆ ಮರಳಿದ್ದಾರೆ. ಐದಾರು ವರ್ಷಗಳ ಹಿಂದೆ ದರ್ಶನ್ ನಟಿಸಿದ್ದ 'ದರ್ಶನ್' ಚಿತ್ರವನ್ನು ರಮೇಶ್ ನಿರ್ದೇಶಿಸಿದ್ದರು. ಆ ಚಿತ್ರದ ನಿರ್ಮಾಪಕ ಪಾಂಡುರಂಗನ್ ಎಂಬಾತ ರಮೇಶ್ ತಲೆಮೇಲೆ ಎಂಟು ಲಕ್ಷ ರೂಪಾಯಿಗಳ ಸಾಲ ಹೊರಿಸಿ ಪರಾರಿಯಾಗಿದ್ದ. ಹೀಗಾಗಿ ಕಷ್ಟದಲ್ಲಿ ಸಿಲುಕಿದ್ದ ರಮೇಶ್ ಇಷ್ಟು ವರ್ಷಗಳ ಕಾಲ ಹರಸಾಹಸ ಮಾಡಿ ಹಳೆಯ ಸಾಲದಿಂದ ಮುಕ್ತರಾಗಿ ಈಗ ಹೊಸ ಚಿತ್ರದ ನಿರ್ದೇಶನಕ್ಕೆ ಮರಳಿದ್ದಾರೆ.

ಕನ್ನಡದಲ್ಲಿ ಸದ್ಯದ ಓಡುವ ಕುದುರೆಯಂತಿರುವ ಒಬ್ಬ ನಾಯಕನಟನೇ ತಮ್ಮ ಚಿತ್ರದಲ್ಲಿ ನಟಿಸಲಿದ್ದಾನೆ ಎಂದು ರಮೇಶ್ ಹೇಳುತ್ತಿದ್ದಾರಾದರೂ ಅದು ಯಾರು ಎಂಬುದನ್ನು ಮಾತ್ರ ಇನ್ನೂ ಗೌಪ್ಯವಾಗೇ ಇಟ್ಟಿದ್ದಾರೆ. ಸದ್ಯ ಈ ಚಿತ್ರಕ್ಕೆ 'ಸೇವಕ' ಎಂಬ ಹೆಸರನ್ನಿಟ್ಟಿದ್ದಾರೆ. ವಿ. ಹರಿಕೃಷ್ಣ ಅವರ ಸಂಗೀತ ನಿರ್ದೇಶನದಲ್ಲಿ ಹಾಡುಗಳ ಧ್ವನಿಮುದ್ರಣ ಇನ್ನೇನು ಆರಂಭವಾಗಲಿದೆ.

ತನ್ನಿಡೀ ಜೀವನವನ್ನು ಚಿತ್ರರಂಗದಲ್ಲೇ ಕಳೆದು ಕಷ್ಟದಲ್ಲೇ ಕಣ್ಮುಚ್ಚಿದ ರಾಜ್ ಕಿಶೋರ್‌ರ ಸಹೋದರನಾದರೂ ಚಿತ್ರರಂಗದಲ್ಲಿ ಉತ್ತಮ ನೆಲೆ ಕಂಡುಕೊಳ್ಳಲಿ.

ನಾಯಕ ನಿರೂಪಕ!



ರಂಗನಾಥ್

ನ್ಯೂಸ್ ಚಾನೆಲ್ ಒಂದರಲ್ಲಿ ನಿರೂಪಕರಾಗಿದ್ದ ರಂಗನಾಥ್ ಭಾರದ್ವಾಜ್‌ಗೆ ಇದ್ದಕ್ಕಿದ್ದಂತೆ ಸಿನಿಮಾದಲ್ಲಿ ನಟಿಸುವ ತಿಕ್ಕಲು ಹಿಡಿದಿದೆ. ಇತ್ತೀಚೆಗೆ ಈ ರಂಗನಾಥ್ 'ಚೆಲುವಿನಾ ಗೆಳತಿ' ಎಂಬ ಚಿತ್ರದ ಜಾಹೀರಾತುಗಳಲ್ಲಿ ಮಿಂಚುತ್ತಿದ್ದಾರೆ. ಪ್ರೇಮಾತನಯ ಶ್ರೀನಿವಾಸ್ ಎಂಬ ಬೋರ್ಡಿಗಿಲ್ಲದ ವ್ಯಕ್ತಿ ಈ ಚಿತ್ರದ ನಿರ್ದೇಶಕನಂತೆ. ನಕಲಿ ಪಾಸ್‌ಪೋರ್ಟ್ ಕೇಸಿನಲ್ಲಿ ಜೈಲು ಸೇರಿ ಈಗಷ್ಟೇ ಹೊರಬಂದಿರುವ ಫ್ಲೋರಾ ಸೈನಿ ನಾಯಕಿಯಂತೆ.

ಇಂತಹ ನಂಟು ರಂಗನಾಥ್‌ಗೆ ಬೇಕಿತ್ತಾ?



'ಜಂಗ್ಲಿ' ಹುಡುಗಿಯ ಗ್ರಾಫ್

ಬೆಂಗಾಳಿ ಚೆಲುವೆ ಆಂದ್ರಿತಾ ರೇ ಲಕ್ಕಿ ಸ್ಟಾರ್ ಎಂದು ಗಾಂಧಿನಗರದಲ್ಲಿ ಪಾಪ್ಯುಲರ್ ಆಗುತ್ತಿದ್ದಾಳೆ. ಈ ವರ್ಷದ ಆರಂಭದಲ್ಲಿ 'ದುನಿಯಾ' ಖ್ಯಾತಿಯ ವಿಜಯ್ ಜೊತೆ ಈಕೆ ನಟಿಸಿದ 'ಜಂಗ್ಲಿ' ಚಿತ್ರ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಿದ ನಂತರ ಆಂದ್ರಿತಾ ಮೇಲೆ ನಿರ್ಮಾಪಕರ ಕಣ್ಣು ಬಿತ್ತು.

'ಜಂಗ್ಲಿ' ನಂತರ ಆಕೆ ನಟಿಸಿದ ಮತ್ತೊಂದು ಅದ್ದೂರಿ ಮತ್ತು ಮಹತ್ವಾಕಾಂಕ್ಷೆಯ ಚಿತ್ರವೆಂದರೆ 'ವಾಯುಪುತ್ರ'. ಆ ಚಿತ್ರವೂ ಗೆಲ್ಲುತ್ತೆ ಎಂದು ಎಲ್ಲರೂ ಭಾವಿಸಿದ್ದರಾದರೂ ಅದು ಮುಗ್ಗರಿಸಿತು. ಆಗ ಆಂದ್ರಿತಾಳ ಭವಿಷ್ಯವೂ, ಅದೃಷ್ಟವೂ ಮುಗ್ಗರಿಸಿದಂತೆ ಕಂಡಿತ್ತು. ಎರಡೇ ಚಿತ್ರಕ್ಕೆ ಆಂದ್ರಿತಾ "ಔಟಾದಳು" ಎಂದು ಕನ್ನಡದ ಇತರೆ ನಾಯಕಿಯರು ಒಳಗೊಳಗೆ ಸಂತೋಷಪಡುತ್ತಿರುವಾಗಲೇ 'ಮನಸಾರೆ' ತೆರೆಕಂಡಿತು. ಆರಂಭದಲ್ಲಿ 'ಮನಸಾರೆ' ಕುಂಟುತ್ತಾ ಸಾಗಿದ್ದರಿಂದ ಆಂದ್ರಿತಾಳ ಭವಿಷ್ಯ ಮುಗಿದೇಹೋಯ್ತು ಎಂದು ಎಲ್ಲರೂ ಮಾತನಾಡಲು ಆರಂಭಿಸಿದ್ದರು.

ಆದರೀಗ 'ಮನಸಾರೆ' ಕೂಡಾ ಬಾಕ್ಸಾಫೀಸ್‌ನಲ್ಲಿ ದಿನದಿಂದ ದಿನಕ್ಕೆ ಚೇತರಿಸಿಕೊಳ್ಳುತ್ತಿದ್ದು ಆಂದ್ರಿತಾಳ ಅದೃಷ್ಟ ಮತ್ತು ಬೇಡಿಕೆಯ ಗ್ರಾಫ್ ಮೇಲೇರುತ್ತಿದೆ. ಸದ್ಯಕ್ಕೆ ಕನ್ನಡದ ಸ್ಟಾರ್ ನಿರ್ದೇಶಕರೆನಿಸಿರುವ ಸೂರಿ ಮತ್ತು ಯೋಗರಾಜ್ ಭಟ್‌ರ ಚಿತ್ರಗಳಲ್ಲಿ ನಟಿಸಿ ಈ ಬೆಂಗಾಳಿ ಚೆಲುವೆ ಕನ್ನಡ ಚಿತ್ರರಂಗದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಿದ್ದಾಳೆ.

'ಅಭಯ್'ನಲ್ಲಿ ಭಯಂಕರ ದರ್ಶನ

ಛಾಲೆಂಜಿಂಗ್ ಸ್ಟಾರ್' ದರ್ಶನ್ 'ಚಾರ್ಮ್‌ಲೆಸ್ ಸ್ಟಾರ್' ಆಗುತ್ತಿದ್ದಾರಾ?




ಮೊನ್ನೆ ಬಿಡುಗಡೆಯಾದ 'ಅಭಯ್' ಎಂಬ ಕೆಟ್ಟ ಚಿತ್ರವನ್ನು ನೋಡಿದ ಯಾರಿಗೇ ಆದರೂ ಹೀಗನ್ನಿಸದೇ ಇರಲು ಸಾಧ್ಯವಿಲ್ಲ.

ಸದ್ಯಕ್ಕೆ ಕರ್ನಾಟಕದಲ್ಲಿ ಅತಿಹೆಚ್ಚು ಅಭಿಮಾನಿ ಪಡೆಯನ್ನು ಹೊಂದಿರುವ ದರ್ಶನ್‌ನ ಇತ್ತೀಚಿನ ಸಿನಿಮಾಗಳನ್ನು ನೋಡಿ ಆತನ ಅಭಿಮಾನಿಗಳೇ 'ಸಾಕಪ್ಪಾ ಸಾಕು' ಎನ್ನುವಂತಾಗಿದೆ. ಆಫ್‌ಕೋರ್ಸ್, ಕೇವಲ ದುಡ್ಡಿಗಾಗಿ ಸಿನಿಮಾ ಮಾಡಲು ನಿಂತಿರುವ ದರ್ಶನ್‌ನಂತಹ ನಟನಿಂದ ಸದಭಿರುಚಿಯ ಚಿತ್ರಗಳನ್ನು ಅಪೇಕ್ಷಿಸುವುದೂ ಸರಿಯಲ್ಲ! ಅಂದಮಾತ್ರಕ್ಕೆ ಈ ಪರಿ ದರಿದ್ರ ಸಿನಿಮಾಗಳನ್ನು ಒಪ್ಪೊಬಾರದು ಎಂಬ ಕನಿಷ್ಠ ಪ್ರಜ್ಞೆಯೂ ದರ್ಶನ್‌ಗೆ ಇಲ್ಲದಂತಾಯಿತೇ?



ಜನಾರ್ಧನನ ಜೆರಾಕ್ಸು!

ಜನಾರ್ದನ ಮಹರ್ಷಿ ಎಂಬ ತೆಲುಗು ದೊಂಗ ತೋಡಿದ ಹಳ್ಳಕ್ಕೆ ಅಮೋಘ ಐದನೇ ಬಾರಿ ಬಿದ್ದಿರುವ ನಿರ್ದೇಶಕ ಮಹೇಶ್ ಬಾಬು ಈಗ ಸೋಲಿನ ಡಬಲ್ ಹ್ಯಾಟ್ರಿಕ್‌ಗೆ ಹತ್ತಿರವಾಗಿದ್ದಾರೆ. ಮಹೇಶ್ ಈವರೆಗೆ ನಿರ್ದೇಶಿಸಿರುವ ಎಲ್ಲ ಚಿತ್ರಗಳಿಗೂ ಮಹರ್ಷಿ ಮಹಾಶಯನದ್ದೇ ಸ್ಟೋರಿ. ಪವರ್ ಸ್ಟಾರ್ ಪುನೀತ್ ಕಾರಣಕ್ಕಾಗಿ 'ಆಕಾಶ್' ಮತ್ತು 'ಅರಸು' ಎಂಬೆರಡು ಚಿತ್ರಗಳು ಸುಮಾರಾದ ಯಶಸ್ಸನ್ನು ಕಂಡಿದ್ದವು. ನಂತರ ಮಹೇಶ್ ಬಾಬು ಮತ್ತು ಜನಾರ್ಧನ ಮಹರ್ಷಿಯ ಕಾಂಬಿನೇಷನ್‌ನಲ್ಲಿ ಬಂದ 'ಮೆರವಣಿಗೆ', 'ಪರಮೇಶ ಪಾನ್‌ವಾಲಾ' ಮತ್ತು ಈಗ ಬಿಡುಗಡೆಯಾಗಿರುವ 'ಅಭಯ್' ಚಿತ್ರ ಸೇರಿದಂತೆ ಎಲ್ಲವೂ ಡಬ್ಬಾ ಎಕ್ಸ್‌ಪ್ರೆಸ್‌ಗಳೇ!



ಮಹರ್ಷಿ ಈ ಹಿಂದೆ ನೀಡಿದ್ದ 'ಆಕಾಶ್', 'ಅಜಯ್', 'ಬೊಂಬಾಟ್' ಮುಂತಾದ ಚಿತ್ರಗಳ ಕಥೆಯನ್ನೇ ಮತ್ತೆ ರೀಮಿಕ್ಸ್ ಮಾಡಿಕೊಟ್ಟಿದ್ದಾನೆ ಮಹೇಶ್ ಬಾಬುಗೆ. ಒಂದು ಕತೆಯ ಮಾಸ್ಟರ್ ಕಾಪಿಯನ್ನು ಇಟ್ಟುಕೊಂಡು ಅದನ್ನೇ ಚಪಾತಿ ತಿರುವಿದಂತೆ ತಿರುವಿ ಮಹೇಶ್ ಬಾಬುರಂಥ ನಿರ್ದೇಶಕರ ಮೂತಿಗೆ ತುರುಕುವುದು ಮಹರ್ಷಿಗೆ ಯಾವತ್ತೋ ಕರಗತವಾಗಿದೆ. ಅಭಯ್ ಮೂಲಕ ಮಹರ್ಷಿ ಮತ್ತೊಮ್ಮೆ ಅದನ್ನು ಸಾಬೀತು ಮಾಡಿದ್ದಾನಷ್ಟೆ.

ಕ್ರೌರ್ಯದ ಪರಾಕಾಷ್ಠೆ

ಈ ಚಿತ್ರದಲ್ಲಿನ ವಿಲನ್‌ನನ್ನು ಬಂಧಿಸಲು ಬರುವ ಪೊಲೀಸ್ ಇನ್ಸ್‌ಪೆಕ್ಟರ್‌ನ ಮುಂದೆ ಒಬ್ಬ ಬುದ್ಧಿಮಾಂದ್ಯನನ್ನು ಬಿಟ್ಟು "ಪೊಲೀಸ್ ಅಧಿಕಾರಿಯ ಹೆಂಡತಿ ಮತ್ತು ಮಗಳಿಗೆ ತಾಳಿಕಟ್ಟಿ, ಮಾನಭಂಗ ಮಾಡು" ಎಂದು ಪ್ರೇರೇಪಿಸುತ್ತಾನೆ. ಅನಂತರ ಆ ಪೊಲೀಸ್ ಅಧಿಕಾರಿಗೆ ಲಾಂಗ್ ನೀಡಿ ಆತನ ಒಂದು ಕೈಯಿಂದಲೇ ಇನ್ನೊಂದು ಕೈಯನ್ನು ಕತ್ತರಿಸಿಕೊಳ್ಳುವಂತೆ ಮಾಡುತ್ತಾನೆ. ಜನಾರ್ಧನ ಮಹರ್ಷಿಯ ವಿಕೃತಿ ಅಲ್ಲಿಗೇ ನಿಲ್ಲುವುದಿಲ್ಲ. ಮತ್ತೆ ಪೊಲೀಸನ ಹೆಂಡತಿಯ ಕೈಗೆ ಮಚ್ಚು ಕೊಟ್ಟು ಗಂಡನ ಇನ್ನೊಂದು ಕೈಯನ್ನೂ ತುಂಡು ಮಾಡಿಸಿ ಆ ಪೊಲೀಸ್ ಅಧಿಕಾರಿಯನ್ನು ಧರೆಗೆ ಉರುಳಿಸುತ್ತಾನೆ. ಮುಂದೆ ಸತ್ತ ಪೊಲೀಸನ ಮಗನೇ ಖಳನಟನ ತಲೆಗೆ ತೆಂಗಿನಕಾಯಿಯಿಂದ ಹೊಡೆದು ರಕ್ತ ಚಿಮ್ಮಿಸುತ್ತಾನೆ.... ಕಲ್ಪಿಸಿಕೊಳ್ಳಲೂ ಆಗದ ಇಂಥ ಕತೆಯನ್ನು ಬರೆದ ಜನಾರ್ಧನ ಮಹರ್ಷಿಯ ಮನೋವಿಕೃತಿ ಪರಾಕಾಷ್ಠೆ ತಲುಪಿರುವುದರಲ್ಲಿ ಯಾವ ಸಂದೇಹವೂ ಈಗ ಉಳಿದಿಲ್ಲ.

ನಿರ್ದೇಶನವೆಂಬ ಅಧ್ವಾನ

ನಿರ್ದೇಶಕ ಮಹೇಶ್ ಬಾಬು ತಮ್ಮ ಚಿತ್ರಗಳ ನಿರಂತರ ಸೋಲಿನಿಂದಾಗಿ ಕಂಗಾಲಾಗಿರುವುದನ್ನು 'ಅಭಯ್' ಗ್ಯಾರೆಂಟಗೊಳಿಸಿದೆ. ಇವತ್ತಿನ ದಿನಗಳಲ್ಲಿ ಹೊಸ ನಿರ್ದೇಶಕರೂ ಕಂಟಿನ್ಯೂನಿಟಿಯ ಬಗ್ಗೆ ಗಮನಹರಿಸುತ್ತಾರೆ. ಅಂಥಾದ್ದರಲ್ಲಿ ಹತ್ತಾರು ಚಿತ್ರಗಳಲ್ಲಿ ಅಸೋಸಿಯೇಟ್ ಆಗಿ ದುಡಿದು ಅನಂತರ ಐದು ಚಿತ್ರಗಳನ್ನು ನಿರ್ದೇಶಿಸಿರುವ ಮಹೇಶ್ ಬಾಬುಗೆ ಸಿನಿಮಾ ಕಂಟಿನ್ಯೂನಿಟಿ ಎಂದರೆ ಏನೆಂಬುದೇ ಮರೆತುಹೋಗಿರುವಂತಿದೆ. ನಾಯಕನಟ ದರ್ಶನ್ ಮನೆಗೆ ಎಂಟ್ರಿ ಕೊಟ್ಟಾಗ ಇದ್ದ ಉದ್ದದ ಜುಟ್ಟು ಒಳಗೆ ಎಂಟ್ರಿಯಾದ ನಂತರ ತುಂಡವಾಗಿರುತ್ತದೆ. ಒಂದೇ ದೃಶ್ಯದಲ್ಲಿ ಇದ್ದಕ್ಕಿದ್ದಂತೆ ಮೀಸೆ ಬರುತ್ತದೆ, ಮಾಯವಾಗುತ್ತದೆ. ದಪ್ಪಗಿರುವ ದರ್ಶನ್ ಇದ್ದಕ್ಕಿದ್ದಂತೆ ಸ್ಲಿಂ ಆಗಿ ಕಾಣಿಸುತ್ತಾರೆ. ಹಾಡಿನಲ್ಲಂತೂ ಇದೆಲ್ಲ ಎದ್ದು ಕಾಣುತ್ತದೆ.

ಲಾಸ್ ಗ್ಯಾರೆಂಟಿ

ಹಿಂದೆ ದರ್ಶನ್ ಸಿನಿಮಾ ಗೆಲ್ಲಲಿ ಬಿಡಲಿ, ಬಿಡುಗಡೆಗೆ ಮುನ್ನವೇ ಏರಿಯಾಗಳು ಹಂಚಿಕೆಯಾಗುತ್ತಿದ್ದರಿಂದ ನಿರ್ಮಾಪಕ ಯಾವತ್ತಿಗೂ ಸೇಫ್ ಆಗಿರುತ್ತಿದ್ದ. ಆದರೆ ಈಗೀಗ ದರ್ಶನ್ ಸಿನಿಮಾವೆಂದರೆ ವಿತರಕರು ಮಾರುದ್ದ ದೂರ ನಿಲ್ಲುತ್ತಿದ್ದಾರೆ. ದರ್ಶನ್ ಸಿನಿಮಾದ ಪರ್ಮನೆಂಟ್ ವಿತರಕರಾಗಿದ್ದ ಜಯಣ್ಣ ಇತ್ತೀಚೆಗೆ ದರ್ಶನ್ ಸಹವಾಸವನ್ನು ಬಿಟ್ಟು ದೂರ ಹೋದ ನಂತರವಂತೂ ಪರಿಸ್ಥಿತಿ ಇನ್ನೂ ಕೆಟ್ಟಿದೆ. 'ಗಜ' ಚಿತ್ರ ಗೆದ್ದಿತ್ತಾದರೂ ಅನಂತರ ಬಂದ ದರ್ಶನ್ ಚಿತ್ರಗಳಾದ 'ಇಂದ್ರ', 'ಅರ್ಜುನ್', 'ನವಗ್ರಹ', 'ಯೋಧ' ಎಲ್ಲವೂ ಬಾಕ್ಸ್ ಆಫೀಸಿನಲ್ಲಿ ಹೀನಾಯವಾಗಿ ಸೋತಿವೆ. ಒಂದು ಮೂಲದ ಪ್ರಕಾರ ರಾಕ್‌ಲೈನ್‌ನಂತಹ 'ಧೀರ' ನಿರ್ಮಾಪಕ ದರ್ಶನ್‌ನನ್ನು ನಂಬಿ 'ಯೋಧ' ಸಿನಿಮಾ ಮಾಡಿ ಸುಮಾರು ಒಂದು ಕೋಟಿಯ ಲುಕ್ಸಾನು ಅನುಭವಿಸಿದ್ದಾರೆ.

ಬಿಕಾರಿ ಬಾಸ್!



ರಮೇಶ್ ಯಾದವ್ ನಿರ್ಮಾಣದ 'ಬಾಸ್' ಚಿತ್ರಕ್ಕಾಗಿ ದರ್ಶನ್‌ಗೆ ಬರಬೇಕಿದ್ದ ಸಂಭಾವನೆಯ ಪೂರ್ತಿ ಮೊತ್ತ ಪಾವತಿಯಾಗಿಲ್ಲ, ಆ ಕಾರಣಕ್ಕೇ ದರ್ಶನ್ ಈವರೆಗೂ ಆ ಚಿತ್ರದ ಡಬ್ಬಿಂಗ್‌ಅನ್ನು ಪೂರ್ಣಗೊಳಿಸಿಲ್ಲ. ಈಗಾಗಲೇ ರಮೇಶ್ ಯಾದವ್ ಐಡಿಬಿಐ ಬ್ಯಾಂಕಿನ ಸಾಲ ತೀರಿಸಲಾಗದೇ ಕಂಗಾಲಾಗಿರುವಾಗ 'ಬಾಸ್' ಮುಕ್ತಾಯಗೊಳ್ಳುವ ಸಾಧ್ಯತೆಯಂತೂ ಕಾಣುತ್ತಿಲ್ಲ.

ಇನ್ನು ದರ್ಶನ್‌ನ ಕೆರಿಯರ್‌ಗೆ ಗೆಲುವೆಂಬುದು ದೊರೆಯಬೇಕಿದ್ದರೆ ಅದು 'ಪೊರ್ಕಿ' ಚಿತ್ರದಿಂದ ಮಾತ್ರ. ಅದೂ ತೆಲುಗಿನ 'ಪೋಕಿರಿ' ಚಿತ್ರದ ನಕಲು. ಈಗಾಗಲೇ ಕನ್ನಡದ ಹಲವಾರು ನಿರ್ದೇಶಕರು 'ಪೋಕಿರಿ' ಚಿತ್ರದ ಬಿಡಿ ಭಾಗಗಳನ್ನು ಕದ್ದು ತಮ್ಮ ಸಿನಿಮಾ ಅಳವಡಿಸಿರುವುದರಿಂದ ದರ್ಶನ್ ಅಭಿಮಾನಿಗಳಲ್ಲಿ ಮತ್ತು ಗಾಂಧಿನಗರದವರಲ್ಲಿ 'ಪೊರ್ಕಿ'ಯ ಬಗ್ಗೆಯಂತೂ ಅಂಥಾ ನಿರೀಕ್ಷೆಗಳೇನೂ ಇಲ್ಲ.

ಕೇವಲ ಬಿಲ್ಡ್‌ಅಪ್ ಕೊಡುವುದನ್ನೇ ನಟನೆ ಎಂದು ನಂಬಿರುವ, ತನ್ನ ಸಿನಿಮಾ ಮತ್ತು ವ್ಯಕ್ತಿತ್ವವನ್ನು ಟೀಕಿಸಿದರು ಎಂಬ ಕಾರಣಕ್ಕೇ ಮಾಧ್ಯಮದವರ ಮೇಲೆ ಎಗರಿಬೀಳುವ ದರ್ಶನ್ ಇನ್ನಾದರೂ ತನ್ನ ಹಳೆಯ ರೋಳ್ಳೆಗಳನ್ನು ಪಕ್ಕಕ್ಕಿಟ್ಟು, ಕಡೇಪಕ್ಷ ತನ್ನ ಅಭಿಮಾನಿಗಳಾದರೂ ಮೆಚ್ಚುವಂಥ ಸಿನಿಮಾಗಳಲ್ಲಿ ನಟಿಸುವ ಜರೂರತ್ತಿದೆ.

● ಅರುಣ್

ದರ್ಶನ್ ಡಿಮ್ಯಾಂಡು!

ಒಂದು ಕಡೆ ದರ್ಶನ್‌ನನ್ನು ಹಾಕಿಕೊಂಡು ಸಿನಿಮಾ ಮಾಡಿದ ನಿರ್ಮಾಪಕರೆಲ್ಲಾ ಅಂಬೋ ಎನ್ನುತ್ತಿದ್ದರೆ, ಇನ್ನೊಂದು ಕಡೆ ದರ್ಶನ್ ಮಾತ್ರ ಸಿಕ್ಕಲ್ಲೆಲ್ಲಾ ಹಣ ಗಳಿಸುವ ಕಾಯಕಕ್ಕಿಳಿದಂತೆ ಕಾಣುತ್ತಿದೆ. ಇತ್ತೀಚೆಗೆ 'ತೂಗುದೀಪ ಚಿತ್ರೀಕರಣ ಘಟಕ'ವೆಂಬ ಸಿನಿಮಾ ಯೂನಿಟ್ಟನ್ನು ಆರಂಭಿಸಿರುವ ದರ್ಶನ್ ತನ್ನ ಕಾಲ್‌ಶೀಟ್ ಬೇಕೆಂದರೆ, ತನ್ನದೇ ಯೂನಿಟ್‌ಅನ್ನು ಬಾಡಿಗೆಗೆ ಪಡೆಯಬೇಕು ಎಂಬ ಷರತ್ತನ್ನು ವಿಧಿಸುತ್ತಿದ್ದಾರೆ.

ಅಷ್ಟೇ ಅಲ್ಲ, ತಾನು ಹೇಳಿದ ತಂತ್ರಜ್ಞರನ್ನೇ ಆಯ್ಕೆಮಾಡಿಕೊಳ್ಳಬೇಕು, ಸಾಹಸಕ್ಕೆ ರವಿವರ್ಮನೇ ಆಗಬೇಕು, ಇಂತಿಂತ ಕೆಲಸಕ್ಕೆ ಇಂಥವರೇ ಇರಬೇಕು ಎಂದು ಹಠ ಹಿಡಿಯುವ ದರ್ಶನ್ ಇನ್ನಾದರೂ ಉದ್ಯಮವನ್ನು ಉದ್ಧಾರ ಮಾಡುವ ನಿಟ್ಟಿನಲ್ಲಿ ಯೋಚಿಸಲಿ.



ಪುನೀತ್‌ಗೆ ಪಾರೂ ಜೋಡಿ

'ಮಿಲನ' ಚಿತ್ರದ ಪುನೀತ್ ರಾ[illegible] ಕುಮಾರ್ ಮತ್ತು ಪಾರ್ವತಿ ಮೆನ[illegible] ಮತ್ತೊಮ್ಮೆ ಜೋಡಿಯಾಗಿ ಪ್ರೇಕ್ಷಕರ[illegible] ರಂಜಿಸಲು ರೆಡಿಯಾಗಿದ್ದಾರೆ. ರಾಜ್‌ಕುಮಾ[illegible] ಸಂಸ್ಥೆ ನಿರ್ಮಿಸಲಿರುವ 'ಜಾಕಿ' ಚಿತ್ರದಲ್ಲಿ [illegible] ಜೋಡಿ ಮತ್ತೊಮ್ಮೆ ಕಾಣಿಸುತ್ತಿದೆ.

ಪಾರ್ವತಿ ಮೆನನ್ 'ಮಿಲನ'ದ[illegible] ಒಳ್ಳೆಯ ನಟನೆಯಿಂದ ಪ್ರೇಕ್ಷಕರ ಮನ ಗೆದ್ದಿದ್ದ[illegible] ಆಕೆಯನ್ನು ಹೋಮ್ಲಿ ಗರ್ಲ್ ಎಂದು ಎಲ್ಲ[illegible] ಇಷ್ಟಪಟ್ಟಿದ್ದರು. ಈ ಮಧ್ಯೆ [illegible] ವಿಜಯಲಕ್ಷ್ಮಿಸಿಂಗ್ ನಿರ್ದೇಶನದ 'ಮಳೆ ಬ[illegible] ಮಂಜು ಇರಲಿ' ಚಿತ್ರದ ನಾಯಕಿಯ[illegible] ಮನೋಜ್ಞವಾಗಿ ನಟಿಸಿದ್ದರೂ ಚಿತ್ರ ಸೋ[illegible] ದ್ದರಿಂದ ಲೈಮ್‌ಲೈಟಿಗೆ ಬಂದಿರಲಿಲ್ಲ. [illegible] ಪುನೀತ್ ಜೊತೆ ಮತ್ತೆ ಪಾರ್ವತಿ ಅವಕಾ[illegible] ಗಿಟ್ಟಿಸಿ ಕನ್ನಡದಲ್ಲೇ ಮೊಕ್ಕಾಂ ಹೂಡು[illegible] ಇನ್ನೊಂದು ಹೆಜ್ಜೆ ಇಟ್ಟಿದ್ದಾರೆ. ಮಲೆಯಾ[illegible] ಕುಟ್ಟಿ ಮೀರ ಜಾಸ್ಮಿನ್ ಈ ಹಿಂದೆ ಪುನೀತ[illegible] ಜೋಡಿಯಾಗಿದ್ದಳು. ಆಕೆ ಮದುವೆ ಯಾಗಿ[illegible] ತಡ ಮತ್ತೊಂದು ಮಲೆಯಾಳಿ ಕುಟ್ಟಿ [illegible] ಪಾರೂ ಕನ್ನಡದ ಪವರ್‌ಸ್ಟಾರ್‌ಗೆ ಮತ್ತೊ[illegible] ಜೋಡಿಯಾಗುತ್ತಿರುವುದು ಒಂದು ಕ[illegible] ತಾಳೀಯ ಅಷ್ಟೆ.



ಸುರೇಶ್

'ಚೆಲುವೆ'ಯ ಸ್ಪೈಡ್ ರೀಲ್

'ಚೆಲುವೆ ನಿನ್ನ ನೋಡಲು' ಚಿತ್ರ[illegible] ನಿರ್ಮಾಪಕ ಎಸ್.ಎಂ. ಸುರೇಶ್ ಸಾಹಸ[illegible] ಮೇಲೆ ಸಾಹಸ ಮಾಡುತ್ತಿದ್ದಾರೆ. ವಿಶ್ವದ ಎಂ[illegible] ಅದ್ಭುತ ಎನಿಸಿರುವ ಸ್ಥಳಗಳಲ್ಲಿ ಈ ಚಿತ್ರವ[illegible] ಚಿತ್ರೀಕರಿಸಿರುವುದು ಒಂದು ಸಾಹಸವಾದ[illegible] ಈಗ ಕ್ಯಾಸೆಟ್ ಬಿಡುಗಡೆ ಸಮಯದ[illegible] ಇನ್ನೊಂದು ಸಾಹಸಕ್ಕೆ ಕೈ ಹಾಕಿದ್ದಾರೆ.

ಅದೇನೆಂದರೆ ಚಿತ್ರದ ಆಡಿಯೋ ಕ್ಯಾಸೆ[illegible] ಜೊತೆ ಚಿತ್ರದ ಹಾಡುಗಳ ತುಣುಕುಗಳಿರು[illegible] ಮತ್ತು 'ಮೇಕಿಂಗ್ ಆಫ್ ಚೆಲುವೆ ನಿ[illegible] ನೋಡಲು' ಎಂಬ ವೀಡಿಯೋ ಸಿಡಿಯನ್[illegible] ಹಂಚಲಿದ್ದಾರೆ. ಅಂದರೆ ಸಾಧಾರಣವಾ[illegible] ಸಿನಿಮಾ ಥಿಯೇಟರುಗಳಲ್ಲಿ ಹಾಕುವ ಸ್ಪೈ[illegible] ರೀಲ್ ದೃಶ್ಯಗಳನ್ನು ಸಿಡಿ ಮುಖಾಂತ[illegible] ಮನೆಮನೆಗೆ ತಲುಪಿಸಲಿದ್ದಾರೆ. ಇದು ಕೂ[illegible] ಪಬ್ಲಿಸಿಟಿಗಾಗಿ ಒಂದು ಗಿಮಿಕ್ ಎನ್ನಬಹುದ[illegible] ಜೊತೆಗೆ ಒಬ್ಬ ನಿರ್ಮಾಪಕ ಇಷ್ಟೊಂದ[illegible] ಅದ್ದೂರಿ ಚಿತ್ರವನ್ನು ಮಾಡಿದ ನಂತರವ[illegible] ಪ್ರೇಕ್ಷಕರನ್ನು ಥಿಯೇಟರ್‌ಗೆ ಕರೆತರ[illegible] ಎಷ್ಟೊಂದು ಕಷ್ಟಪಡಬೇಕು ಎಂಬುದ[illegible] ಇದೊಂದು ಉದಾಹರಣೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate,